ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 6 ಫೆಬ್ರವರಿ 3-9 1997

ಬೆಲೆ ರೂ. 2.00

ಸಿಪಿಐ(ಎಂ) ನೇತೃತ್ವದಲ್ಲಿ ರಾಜ್ಯಾದ್ಯಂತ ಮೊಳಗಿದ ಕೂಗು



"ಕಾಂಗ್ರೆಸ್ ದಾರಿಯನ್ನು ಬಿಡಿ, ಜನಗಳ ಸಂಕಷ್ಟಗಳನ್ನು ಪರಿಹರಿಸಿ"

ಜನವರಿ 30, 1997. ಇಡೀ ದೇಶ 49 ವರ್ಷಗಳ ನಂತರ ಹಿಂದೆ ತಲೆತಿರುಕ ಕೋಮುವಾದಿಯೊಬ್ಬನ ಗುಂಡಿಗೆ ಬಲಿಯಾದ ಮಹಾತ್ಮ ಗಾಂಧೀಜಿಯನ್ನು ಸ್ಮರಿಸಿಕೊಂಡಿತು. ಜತೆಗೇ ದೇಶದ ಸ್ವಾತಂತ್ರ್ಯಕ್ಕಾಗಿ, ದೇಶದ ಜನಸಾಮಾನ್ಯರ ಬದುಕನ್ನು ಹಸನು ಮಾಡಲು ರಾಜಕೀಯ, ಆರ್ಥಿಕ ಅಧಿಕಾರದ ನಮ್ಮ ಕೈಗೇ ಬರಬೇಕು ಎಂದು ಹೋರಾಡಿ ಪ್ರಾಣಾರ್ಪಣೆ ಮಾಡಿದ ಅಸಂಖ್ಯ ಹುತಾತ್ಮರನ್ನು ಸ್ಮರಿಸಿಕೊಂಡಿತು. ಅದರೊಡನೇ ಕರ್ನಾಟಕದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಂಕಷ್ಟಗಳನ್ನು ಹೆಚ್ಚಿಸಿದ ಕಾಂಗ್ರೆಸ್(ಐ)ನ ಉದಾರೀಕರಣ ನೀತಿಗಳನ್ನು, ಜತೆಗೆ ಕೋಮುವಾದಿ ಶಕ್ತಿಗಳೊಂದಿಗೆ ಅವರ ರಾಜಿ ನಿಲುವನ್ನು ತಿರಸ್ಕರಿಸಿದ ಜನರ ಆಕಾಂಕ್ಷೆಗಳಿಗೆ ಅನುಗುಣವಾಗಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರಕಾರಕ್ಕೆ ಹಾಗೂ ಅದಕ್ಕೆ ಮೊದಲು ರಾಜ್ಯದಲ್ಲಿ ಹಾಗೆಯೇ ಅಧಿಕಾರಕ್ಕೆ ಬಂದ ಜನತಾದಳ ಸರಕಾರಕ್ಕೆ ಅವುಗಳ ಜವಾಬ್ದಾರಿಗಳನ್ನು ನೆನಪಿಸಲಾಯಿತು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕರೆಯ ಮೇರೆಗೆ ಕೇಂದ್ರದಲ್ಲಿನ ದೇವೇಗೌಡರ ಸರಕಾರ, ರಾಜ್ಯದಲ್ಲಿನ ಪಟೇಲ್ ಸರಕಾರಗಳ ಧೋರಣೆಗಳು ಎಲ್ಲಿ ತಪ್ಪಿವೆ, ಅವುಗಳ ಸ್ಥಾನದಲ್ಲಿ ಯಾವ ಪರ್ಯಾಯ ಧೋರಣೆಗಳನ್ನು ಅನುಸರಿಸಿದರೆ ಜನರ ಬವಣೆಗಳಿಗೆ ಪರಿಹಾರ ಪಡೆಯುವ ದಾರಿಯಲ್ಲಿ ಸಾಗಲು ಸಾಧ್ಯ ಎಂಬುದನ್ನು ವಿವರಿಸಲು ಜನವರಿ 16 ರಂದು ರಾಜ್ಯಾದ್ಯಂತ ಆರಂಭಗೊಂಡ ಪ್ರಚಾರಾಂದೋಲನ ಜನವರಿ 30 ರಂದು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ, ಸಾರ್ವಜನಿಕ ಸಭೆಗಳು ಹಾಗೂ ಪಿಕೆಟಿಂಗ್ ನೊಂದಿಗೆ ಕೊನೆಗೊಂಡಿತು.

ಕೋಲಾರದಲ್ಲಿ ಜನವರಿ 30 ರಂದು ಸಿಪಿಐ(ಎಂ)ನ ಅತ್ಯಂತ ದೊಡ್ಡ ರ‍್ಯಾಲಿಯನ್ನು ಕಂಡಿತು. ನಾಲ್ಕು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ರ‍್ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಶಾಸಕರೂ ಆದ ಜಿ.ವಿ. ಶ್ರೀರಾಮರೆಡ್ಡಿ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿದರು. ಇನ್ನೊಬ್ಬ ರಾಜ್ಯ ಸಮಿತಿ ಸದಸ್ಯರೂ ಕಾರ್ಮಿಕ ಮುಖಂಡರೂ, ಮಾಜಿ ಶಾಸಕರೂ ಆದ ಟಿ.ಎಸ್.ಮಣಿ ಅಧ್ಯಕ್ಷತೆ ವಹಿಸಿದ್ದರು. ಸಾರ್ವಜನಿಕ ಸಭೆಯ ಮೊದಲು ಬೃಹತ್ ಮೆರವಣಿಗೆ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ 3000 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಹಾಗೂ ರಾಜ್ಯ ರಾಜ್ಯಕಾರ್ಯದರ್ಶಿಗಳೂ ಆದ ಪಿ.ರಾಮಚಂದ್ರರಾವ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಗಳಾದ ಕೆ.ಆರ್.ಶ್ರೀಯಾನ್ ಮತ್ತಿತರರು ಮಾತನಾಡಿದರು. ಇದಕ್ಕೆ ಮೊದಲು ಜಿಲ್ಲೆಯ ಎಲ್ಲೆಡೆ ನಡೆದ 25 ಸಭೆಗಳ ಮೂಲಕ ಈಗಿನ ರಾಜಕೀಯ ಪರಿಸ್ಥಿತಿ ಹಾಗೂ ಸಿಪಿಐ(ಎಂ) ನ ಬೇಡಿಕೆಗಳ ಬಗ್ಗೆ ಸಾವಿರಾರು ಜನಗಳನ್ನು ತಲುಪಲು ಸಾಧ್ಯವಾಯಿತು.

ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಹುತಾತ್ಮ ಸ್ಮಾರಕದಿಂದ ಆರಂಭವಾದ ಮೆರವಣಿಗೆಯನ್ನು ಪೋಲೀಸರು ವಿಧಾನಸೌಧದ ಬಳಿಗೆ ಹೋಗಲು ಬಿಡದೆ ತಡೆ ಹಿಡಿದ ಕೆ.ಆರ್.ಸರ್ಕಲ್‌ನಲ್ಲೇ ಧರಣಿ ಕೂತು ಸಾರ್ವಜನಿಕ ಸಭೆ ನಡೆಸಲಾಯಿತು. ಮೆರವಣಿಗೆಯ ನೇತೃತ್ವ ವಹಿಸಿದ್ದ ಹಿರಿಯ ಸಿಪಿಐ(ಎಂ)ಮುಖಂಡರೂ, ಕಾರ್ಮಿಕ ಮುಂದಾಳುಗಳೂ ಆದ ಎಸ್. ಸೂರ್ಯನಾರಾಯಣ ರಾವ್, ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಆರ್.ಶ್ರೀನಿವಾಸ್ ಮತ್ತಿತರರು ಮಾತನಾಡಿದರು.

ಬಿಜಾಪುರದಲ್ಲಿಯೂ ಹಳ್ಳಿ ಹಳ್ಳಿಗಳಲ್ಲಿ, ಪೇಟೆ, ಪಟ್ಟಣಗಳಲ್ಲಿ ಪ್ರಚಾರದ ನಂತರ ಜನವರಿ 30 ರಂದು ಮತಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳಿಗೆಮನವಿ ಅರ್ಪಿಸಲಾಯಿತು. ಸಾರ್ವಜನಿಕ ಸಭೆಯನ್ನುದ್ದೇಶಿಸಿ ಹಿರಿಯ ಸಿಪಿಐ(ಎಂ) ಮುಖಂಡರಾದ ಎನ್.ಕೆ.ಉಪಾಧ್ಯಾಯ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರೂ, ರೈತ ಮುಖಂಡರೂ ಆದ ಭೀಮಸಿ ಕಲಾದಗಿ ಮತ್ತಿತರರು ಮಾತನಾಡಿದರು.

ರಾಯಚೂರಿನಲ್ಲಿ ಸುಮಾರು ಒಂದು ಸಾವಿರದಷ್ಟು ಜನರು ಭಾಗವಹಿಸಿದ್ದ ಮೆರವಣಿಗೆ ನಂತರ ಜಿಲ್ಲಾಧಿಕಾರಿಯವರಿಗೆ ಒಂದು ಮನವಿ ಪತ್ರ ಸಲ್ಲಿಸಲಾಯಿತು. ನಂತರ ಬಹಿರಂಗ ಸಭೆ ನಡೆಯಿತು. ಇದಕ್ಕೆ ಮೊದಲು ಕಳೆದ ಹದಿನೈದು ದಿನಗಳಲ್ಲಿ ರಾಯಚೂರು, ದೇವದುರ್ಗ, ಮಾನ್ವಿ, ಸಿಂಧನೂರು, ಗಂಗಾವತಿ, ಲಿಂಗಸಗೂರು ತಾಲ್ಲೂಕುಗಳಲ್ಲಿ ಪ್ರಚಾರ ಸಭೆ, ಮನೆ-ಮನೆಗಳಿಗೆ ಕರಪತ್ರಗಳ ಮೂಲಕ ಸುಮಾರು 100 ಹಳ್ಳಿಗಳನ್ನು ಈ ಪ್ರಚಾರಾಂದೋಲನ ತಲುಪಿದೆಯೆಂದು ವರದಿಯಾಗಿದೆ.

ಬಳ್ಳಾರಿಯಲ್ಲಿ ನಡೆದ ಮೆರವಣಿಗೆ, ಬಹಿರಂಗ ಸಭೆಯಲ್ಲಿ ಸುಮಾರು 2000 ಮಂದಿ ಜನ ಭಾಗವಹಿಸಿದ್ದರು. ಕಾರವಾರದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿಜೆಕೆ ನಾಯರ್ ಹಾಗೂ ರಾಜ್ಯ ಸಮಿತಿ ಸದಸ್ಯ ಟಿ.ಎಸ್.ನಾಯಕ್ ಮಾತನಾಡಿದರು.

ಧಾರವಾಡದಲ್ಲಿ ನಡೆಧ ರ‍್ಯಾಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮತಿ ಸದಸ್ಯರೂ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳೂ ಆದ ಸುನೀತ ಚೋಪ್ರಾ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ ಮಾತನಾಡಿದರು.

ಬೆಳಗಾವಿಯ ಜಿಲ್ಲೆಯ ಸವದತ್ತಿ ಮತ್ತು ರಾಮದುರ್ಗ, ಮೈಸೂರು,ಮಂಡ್ಯ ಜಿಲ್ಲೆಯ ಮಳವಳ್ಳಿ, ಕೊಡಗು ಜಿಲ್ಲೆಯಲ್ಲೂ ಬಹಿರಂಗ ಸಭೆಗಳು, ಮೆರವಣಿಗೆಗಳು ನಡೆದ ವರದಿಗಳು ಬರುತ್ತಿವೆ. □

ತೊಗರಿ ಬೆಳೆಗಾರರಿಗೆ ಕನಿಷ್ಟ ಬೆಂಬಲ ಹೆಚ್ಚಿಸಲು ಆಗ್ರಹಿಸಿ ಯಶಸ್ವಿ ಗುಲ್ಬರ್ಗ ನಗರ ಬಂದ್

ದೇಶ, ರಾಜ್ಯದ ಜನ ವಿಪರೀತ ಬೆಲೆಯೇರಿಕೆಯಿಂದ ಬೆಂಡುಹೋಗುತ್ತಿದ್ದಾರೆ. ಶಿಕ್ಷಣ, ಆರೋಗ್ಯ ಅತ್ಯಂತ ತುಟ್ಟಿಯಾಗಿ ಜನಸಾಮಾನ್ಯರ ಕೈಗೆಟುಕದಾಗುತ್ತಿವೆ. ಒಂದಾದ ಮೇಲೊಂದರಂತೆ ಬಯಲಾಗುತ್ತಿರುವ ಭ್ರಷ್ಟಾಚಾರ ಹಗರಣಗಳಲ್ಲಿ ದೇಶದ ಕೋಟ್ಯಾಂತರ ರೂಪಾಯಿಗಳು ಮುಳುಗಿ ಹೋಗುತ್ತಿದೆ, ಅಭಿವೃದ್ಧಿ ಕಾಮಗಾರಿಗಳು, ಕಲ್ಯಾಣ ಕ್ರಮಗಳು ನಿಂತು ಹೋಗುತ್ತಿವೆ. ಬಹುದಿನಗಳಿಂದ ಉಪೇಕ್ಷಿಸಲ್ಪಟ್ಟಿರುವ ಜನಗಳ ನಿರ್ದಿಷ್ಟ ಸಮಸ್ಯೆಗಳತ್ತ ಗಮನ ಹರಿಸುವ 'ಸಮಾನ ಕನಿಷ್ಟ ಕಾರ್ಯಕ್ರಮ'ದ ಉತ್ತಮ ಅಂಶಗಳನ್ನು ಜಾರಿಗೆ ತಂದು ಪರ್ಯಾಯ ನೀತಿಗಳನ್ನು ಅನುಸರಿಸುವ ಬದಲು ಕಾಂಗ್ರೆಸ್(ಐ)ನ ಉದಾರೀಕರಣ, ಖಾಸಗೀಕರಣದ ಮಾತುಗಳನ್ನೇ ಆಡುತ್ತಿದೆ. ರಾಜ್ಯದಲ್ಲಿ ಪಟೇಲ್ ಸರಕಾರವಂತೂ ಜನಗಳನ್ನು ಸಾಮಾನ್ಯ ಆಡಳಿತದಿಂದಲೂ ವಂಚಿತರನ್ನಾಗಿಸಿದೆ. ವಿದ್ಯುತ್ ಮೀಟರ್ ಬಾಡಿಗೆ, ಕೆಎಸ್‌ಆರ್‌ಟಿಸಿ ದರಗಳು ಇತ್ಯಾದಿ ಇನ್ನಷ್ಟು ಬೆಲೆಯೇರಿಕೆಗಳ ಬಗ್ಗೆ ಯೋಚಿಸುತ್ತಿದೆ.

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಗಳು, ಸಾರ್ವಜನಿಕ ಸಭೆಗಳಲ್ಲಿ ಸಿಪಿಐ(ಎಂ) ಮುಖಂಡರು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈಗಲಾದರೂ ಎಚ್ಚೆತ್ತುಕೊಂಡು ಕಾಂಗ್ರೆಸ್(ಐ) ನ ಅವನತಿಗೆ ಕಾರಣವಾದ ನೀತಿಗಳನ್ನು ಕೈ ಬಿಟ್ಟು ದೇಶವನ್ನು ಬೆಳೆಸುವ, ಜನರನ್ನು ಉಳಿಸುವ ಪರ್ಯಾಯ ನೀತಿಗಳನ್ನು ಅನುಸರಿಸಬೇಕು ಎಂದು ಮನವಿ ಮಾಡಿದರು. 'ಕೇಂದ್ರ, ರಾಜ್ಯ ಸರಕಾರಗಳನ್ನು ಇಳಿಸಲು ಈ ಹೋರಾಟವಲ್ಲ, ಅವರನ್ನು ಎಚ್ಚರಿಸಲು ಈ ಹೋರಾಟ, ಅದಕ್ಕಾಗಿ ಜನರನ್ನು ಅಣಿನೆರಸಲಿಕ್ಕಾಗಿ ಈ ಹೋರಾಟ' ಎಂದು ಸಿಪಿಐ(ಎಂ) ಮುಖಂಡರು ಸ್ಪಷ್ಟಪಡಿಸಿದ್ದಾರೆ.

ಸಗಟು ಮಾರುಕಟ್ಟೆಯಲ್ಲಿ ತೊಗರಿ ಬೇಳೆ ಬೆಲೆಗಳು ತೀವ್ರವಾಗಿ ಕುಸಿದು ತೊಗರಿ ಬೆಳೆಗಾರರು ಕಂಗಾಲಾಗಿದ್ದಾರೆ. ಆದರೆ ರಾಜ್ಯ ಸರಕಾರ ಸೂಕ್ತ ಬೆಂಬಲ ಬೆಲೆ ಘೋಷಿಸಿ ಅವರ ನೆರವಿಗೆ ಬಂದಿಲ್ಲ. ಬೆಲೆ ಕುಸಿತ ತಡೆಯಲು ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನ್ ಹಾಗೂ ಕರ್ನಾಟಕ ಎಣ್ಣೆ ಕಾಳುಗಳ ಕಾರ್ಪೊರೇಶನ್ ಮಧ್ಯಪ್ರವೇಶಿಸುತ್ತದೆ ಎಂಬ ತನ್ನ ವಚನವನ್ನೂ ಸರಕಾರ ಪಾಲಿಸಿಲ್ಲ. ಇದನ್ನು ವಿರೋಧಿಸಿ ತೊಗರಿಬೇಳೆ ಕ್ವಿಂಟಾಲಿಗೆ 2000 ರೂ ಕನಿಷ್ಟ ಬೆಲೆ ಪ್ರಕಟಿಸಬೇಕು ಎಂದು ಆಗ್ರಹಿಸಿ ಜನವರಿ 30ರಂದು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಗುಲ್ಬರ್ಗಾ ನಗರ ಬಂದ್‌ಗೆ ಕರೆ ನೀಡಿತ್ತು. ಇದು ಸಂಪೂರ್ಣ ಯಶಸ್ವಿಯಾಗಿದೆ.

ಮಾರುಕಟ್ಟೆಯಲ್ಲಿ ತೊಗರಿಬೇಳೆಗೆ ಕೆ.ಜಿಗೆ 36 ರೂ(ಕ್ವಿಂಟಾಲಿಗೆ ರೂ.. 3600) ಇದ್ದರೂ ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಮಧ್ಯಪ್ರವೇಶಿಸುವ ಮೊದಲು ತೊಗರಿ ಬೆಳೆಗಾರರಿಗೆ ಸಿಗುತ್ತಿದ್ದ ಬೆಲೆ 1200-1300 ರೂ.ಗೆ ಕುಸಿದಿತ್ತು. ಈಗೇನೋ 1450 ರೂ ಗೇರಿದೆ. ಆದರೆ ತೊಗರಿ ಬೆಳೆಗಾರರಿಗೆ ಒಂದು ಕ್ವಿಂಟಾಲ್ ಬೆಳೆಯಲು ತಗಲುವ ಖರ್ಚೇ 1500 ನಷ್ಟು. ರೈತರು ನಿರ್ವಾತವಿಲ್ಲದೆ ನಷ್ಟದಲ್ಲೆ ಮಾರಬೇಕಾಗಿ ಬಂದಿದೆ ಎಂದು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಕಾರ್ಯದರ್ಶಿಗಳೂ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರೂ ಆಗಿರುವ ಮಾರುತಿ ಮಾನ್ಪಡೆ ಹೇಳುತ್ತಾರೆ.

ಜನವರಿ 30ರ ಬಂದ್ ಕರೆಯಿಂದಾಗಿ ಗುಲ್ಬರ್ಗಾ ನಗರದಲ್ಲಿ ಸಗಟು ಮಾರುಕಟ್ಟೆ, ಹೋಟೇಲ್‌ಗಳು, ಮುಖ್ಯ ಬಝಾರ್ ಮುಚ್ಚಿದ್ದವು. ಬಸ್ ಸಾರಿಗೆ ವ್ಯವಸ್ಥೆಯೂ ನಿಂತುಹೋಗಿತ್ತು.

ನಗರದ ಗಂಜ್ ಪ್ರದೇಶದಿಂದ ಆರಂಭಿಸಿದ ಒಂದು ದೊಡ್ಡ ಮೆರವಣಿಗೆ ಡಿಸಿ ಕಚೇರಿ ತಲುಪಿ ರೆವಿನ್ಯೂ ಅಧಿಕಾರಿಗಳಿಗೆ ಒಂದು ಮನವಿ ಅರ್ಪಿಸಿತು. ಈಗಿರುವ 1300 ರೂ ಬೆಂಬಲ ಬೆಲೆಯನ್ನು 2000 ರೂಗೆ ಹೆಚ್ಚಿಸದಿದ್ದರೆ ತೊಗರಿ ಬೆಳೆಗಾರರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗುತ್ತದೆ ಎಂದು ಅದು ಹೇಳಿದೆ. ಇದಲ್ಲದೆ ಸೀಮೆಎಣ್ಣೆ ಹಳ್ಳಿಗಳಲ್ಲಿ ಪ್ರತಿಕಾರ್ಡಿಗೆ ಕನಿಷ್ಟ 10 ಲೀಟರ್, ನಗರ ಪ್ರದೇಶಗಳಲ್ಲಿ 20 ಲೀಟರ್ ಪೂರೈಸಬೇಕು, ಪ್ರಧಾನಿಗಳನ್ನೂ ಭ್ರಷ್ಟಾಚಾರ ತಡೆಶಾಸನದಲ್ಲಿ ತರಬೇಕು, ಕೃಷಿಕೂಲಿಕಾರರ ಕುರಿತಾದ ಸಮಗ್ರ ಮಸೂದೆಯ ಶೀಘ್ರ ಅಂಗೀಕಾರ, ಮಹಿಳೆಯರಿಗೆ ಚುನಾಯಿತ ಸಂಸ್ಥೆಗಳಲ್ಲಿ 33% ಮೀಸಲಾತಿ ಕುರಿತ ಮಸೂದೆಗೆ ಶೀಘ್ರ ಅಂಗೀಕಾರ ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಮುಂದಿಟ್ಟ ಇತರ ಕೆಲವು ಪ್ರಮುಖ ಬೇಡಿಕೆಗಳು. ಇದಕ್ಕೆ ಮೊದಲು ಹಿಂದಿನ 15 ದಿನಗಳಲ್ಲಿ 69 ಹಳ್ಳಿಗಳಲ್ಲಿ ಬಹಿರಂಗ ಸಭೆಗಳು, ಜೀಪ್ ಜಾಥಾಗಳು, ಸೈಕಲ್ ಜಾಥಾಗಳು ಗುಂಪು ಸಭೆಗಳ ಮೂಲಕ ಜನ ವಿರೋಧಿ ನೀತಿಗಳು ಹಾಗೂ ಜನಪರ ಪರ್ಯಾಯದ ಬಗ್ಗೆ ವ್ಯಾಪಕ ಪ್ರಚಾರ ಕಾರ್ಯ ನಡೆಯಿತು.

ಬ್ಯಾಂಕ್ ವಂಚನೆಗಳ ತಡೆ: ಪ್ರತ್ಯೇಕ ಮಂಡಳಿ ಬದಲಿಗೆ ಸಿಬಿಐಗೆ ಪೂರ್ಣ ಸ್ವಾಯತ್ತೆ

ಬ್ಯಾಂಕ್ ನೌಕರರ ಸಲಹೆ

ಭಾರತ ಸರಕಾರ ಬ್ಯಾಂಕ್ ವಂಚನೆಗಳಿಗೆ ಕೇಂದ್ರ ಮಂಡಳಿ ರಚಿಸುವ ಬಗ್ಗೆ ಯೋಚಿಸುತ್ತಿದೆಯೆಂಬ ವರದಿಯ ಬಗ್ಗೆ ಪ್ರಸ್ತಾಪಿಸುತ್ತಾ ಬ್ಯಾಂಕ್ ನೌಕರರ ಒಕ್ಕೂಟ ಬಿಇಎಫ್ಐ, ಇದರಿಂದ ಬ್ಯಾಂಕ್ ವಂಚನೆಗಳನ್ನು ತಡೆಯಲು ನೆರವು ದೊರೆಯುವುದಿಲ್ಲ, ಆದ್ದರಿಂದ ಈ ಪ್ರಯತ್ನ ಕೈ ಬಿಟ್ಟು ಸಿಬಿಐ ಮತ್ತಿತರ ತನಿಖಾ ಸಂಸ್ಥೆಗಳಿಗೆ ಈ ಬಗ್ಗೆ ಪೂರ್ಣ ಸ್ವಾತಂತ್ರ ಕೊಡಬೇಕು ಎಂದು ಸರಕಾರವನ್ನು ಆಗ್ರಹಿಸಿದೆ.

ಈಗ ದೇಶಾದ್ಯಂತ ಬೃಹತ್ ಪ್ರಮಾಣದಲ್ಲಿ ಬ್ಯಾಂಕ್ ವಂಚನೆಗಳು, ಬ್ಯಾಂಕುಗಳ ಉನ್ನತಾಧಿಕಾರಿಗಳು ಮತ್ತು ರಾಜಕಾರಣಿಗಳ ಶಾಮೀಲಿನಿಂದ ನಡೆಯುತ್ತಿದೆ. ಇವನ್ನು ಕಟ್ಟುನಿಟ್ಟಾಗಿ ತಡೆಯಬೇಕು ಎಂದು ಬಿಇಎಫ್ಐ ಪ್ರಧಾನ ಕಾರ್ಯದರ್ಶಿ ಆಶಿಸ್ ಸೇನ್ ಪತ್ರಿಕಾ ಹೇಳಿಕೆಯೊಂದರಲ್ಲಿ ಒತ್ತಾಯಿಸಿದ್ದಾರೆ. ಆದರೆ ಇದಕ್ಕಾಗಿ ಕೇಂದ್ರ ಮಂಡಳಿಯೊಂದರ ರಚನೆಯಿಂದ ತನಿಖಾ ಪ್ರಕ್ರಿಯೆ ವಿಳಂಬಗೊಂಡು ತನಿಖಾ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸಿದಂತಾಗುತ್ತದಷ್ಟೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಮಂಡಳಿ ರಚಿಸಿದರೆ ಬ್ಯಾಂಕ್ ಅಧಿಕಾರಿಗಳಲ್ಲಿ ಇದರಿಂದಾಗಿ ಉಂಟಾಗಿರುವ ಭಯದ ಮನೋಭಾವನೆ ದೂರವಾಗಿ ಸಾಲ ನೀಡಿಕೆ ಸರಾಗವಾಗಿ ನಡೆಯುತ್ತದೆಂಬ ತರ್ಕವನ್ನು ಒಪ್ಪುವುದು ಸಾಧ್ಯವಿಲ್ಲ ಎಂದೂ ಅವರು ಹೇಳಿದ್ದಾರೆ.

ಸಿಬಿಐ ಮತ್ತು ಎನ್‌ಫೋರ್ಸ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಳಿಗೆ ಬ್ಯಾಂಕು ವಂಚನೆಗಳ ತನಿಖೆಗೆ ಮುಕ್ತ ಅವಕಾಶವಿರಬೇಕು, ರಿಸರ್ವ್ ಬ್ಯಾಂಕಿನ ನಿಯಂತ್ರಣ ಮತ್ತು ನಿರೀಕ್ಷಣಾ ಅಧಿಕಾರವನ್ನು ಬಲಗೊಳಿಸಿ ಅದು ಆಳವಾದ ಪರೀಕ್ಷಣೆ ಮತ್ತು ಸೂಕ್ತ ಕಾರ್ಯಾಚರಣೆ ನಡೆಸಲು ಸಾಧ್ಯವಾಗುವಂತಾಗಬೇಕು ಎಂದಿರುವ ಬಿಇಎಫ್ಐ ಬ್ಯಾಂಕ್ ವಂಚನೆಗಳಿಗೆ ಕೇಂದ್ರ ಮಂಡಳಿ ರಚನೆಯ ಪ್ರಸ್ತಾಪವನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದೆ.

ಸಾಮೂಹಿಕ ಸಂಘಟನೆಗಳ ರೈಲು-ರಸ್ತೆ ತಡೆ ಮಾರ್ಚ್ 27ರಂದು

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಕೇಂದ್ರ ಸರಕಾರದ ಆರ್ಥಿಕ ನೀತಿಗಳಲ್ಲಿ ಬದಲಾವಣೆಯನ್ನು ಒತ್ತಾಯಿಸಿ ಹಮ್ಮಿಕೊಂಡಿರುವ ಪ್ರತಿಭಟನಾ ಕಾರ್ಯಕ್ರಮದಲ್ಲಿ ತುಸು ಬದಲಾವಣೆ ಮಾಡಲಾಗಿದೆಯೆಂದು ತಿಳಿಸಿದೆ. ರಸ್ತೆ-ರೈಲು ತಡೆ ಕಾರ್ಯಕ್ರಮವನ್ನು ಈ ಹಿಂದೆ ಮಾರ್ಚ್ 28ರಂದು ನಡೆಸಲು ನಿರ್ಧರಿಸಲಾಗಿತ್ತು. ಆದರೆ ಆ ದಿನ ಗುಡ್‌ಫ್ರೈಡೇ ರಜಾ ದಿನವಾದ್ದರಿಂದ ಅದನ್ನು ಮಾರ್ಚ್ 27ರಂದು ನಡೆಸಲು ನಿರ್ಧರಿಸಲಾಗಿದೆ.

ರೈಲು ತಡೆ-ರಸ್ತೆ ತಡೆ ಕಾರ್ಯಕ್ರಮವನ್ನು ದೇಶಾದ್ಯಂತ ಮಾರ್ಚ್ 27, 1997ರಂದು ಬೆಳಿಗ್ಗೆ 9.30ರಿಂದ 11.30ರವರೆಗೆ ನಡೆಸಲಾಗುವುದು. ವೇದಿಕೆಯು 15 ಬೇಡಿಕೆಗಳ ಮೇಲಿನ ಕಾರ್ಯಾಚರಣೆಯ ಇತರೆಲ್ಲಾ ಕಾರ್ಯಕ್ರಮಗಳು ಹಿಂದೆ ನಿರ್ಧರಿಸಿದಂತೆಯೇ ನಡೆಯುತ್ತದೆ. ಡಿಸೆಂಬರ್ 16ರ ರಾಷ್ಟ್ರೀಯ ಸಮಾವೇಶದಲ್ಲಿ ರೂಪಿಸಿದ ಕಾರ್ಯಾಚರಣೆ ಈಗ ಈ ರೀತಿ ನಡೆಯುತ್ತದೆ.

1. ಫೆಬ್ರವರಿ 15, 1997ರೊಳಗೆ ರಾಜ್ಯ/ಜಿಲ್ಲಾ ಸಮಾವೇಶಗಳು.
2. ಫೆಬ್ರವರಿ 25, 1997 ರಂದು ದೇಶಾದ್ಯಂತ ಕೇಂದ್ರ ಸರಕಾರದ ಕಚೇರಿಗಳ ಮುಂದೆ ಪಿಕೆಟಿಂಗ್.
3. ಮಾರ್ಚ್ 27, 1997ರಂದು ದೇಶದೆಲ್ಲೆಡೆ ಬೆಳಿಗ್ಗೆ 9.30ರಿಂದ 11.30ರವರೆಗೆ ರೈಲು-ರಸ್ತೆ ತಡೆ.
4. ಬಜೆಟ್ ಅಧಿವೇಶನದ ಎರಡನೇ ಭಾಗದಲ್ಲಿ 'ಸಂಸತ್ ಚಲೋ' - ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದು.

ಭಾರತ ಸರಕಾರದ ಸಾರ್ವಜನಿಕ ವಲಯ ವಿರೋಧಿ ನೀತಿಗಳ ವಿರುದ್ಧ ಸಾರ್ವಜನಿಕ ವಲಯದ ಕಾರ್ಮಿಕರು ಹಾಕಿಕೊಂಡಿರುವ ಹಂತ-ಹಂತವಾದ ಕಾರ್ಯಕ್ರಮಕ್ಕೆ ಅದರ ಅಂತಿಮ ಭಾಗವಾದ ಏಪ್ರಿಲ್ 2, 1997ರ ಒಂದು ದಿನದ ಮುಷ್ಕರಕ್ಕೆ ಬೆಂಬಲ.

(ಐಎನ್‌ಎನ್)

ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ

ಬೆಂಗಳೂರಿನಲ್ಲಿ ಒಂದು ಸಂವಾದ

ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಮಹಿಳೆಯರಿಗೆ 33% ಮೀಸಲಾತಿ ನೀಡುವುದಾಗಿ - ಅಂತಹ ಮಸೂದೆಯೊಂದಕ್ಕೆ ಬೆಂಬಲ ನೀಡುವುದಾಗಿ ಹೇಳಿಕೊಂಡಿದ್ದವು. ಆದರೆ ವಾಸ್ತವದಲ್ಲಿ ಅಂತಹ ಒಂದು ಸಂದರ್ಭ ಬಂದಾಗ ಎಡಪಕ್ಷಗಳನ್ನು ಹೊರತು ಪಡಿಸಿ ಬೇರೆಲ್ಲ ಪಕ್ಷಗಳೂ ಅನುಸರಿಸಿದ ನೀತಿ ಈಗ ಚರಿತ್ರೆಯ ಭಾಗವಾಗಿದೆ. ಈ ಹಿನ್ನೆಲೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ಚರ್ಚೆಯೊಂದನ್ನು ಜನವರಿ 23 ರಂದು ಬೆಂಗಳೂರಿನಲ್ಲಿ ಏರ್ಪಡಿಸಿತ್ತು. ರಾಷ್ಟ್ರೀಯ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಆಹ್ವಾನಿಸಿದ ಚರ್ಚೆಯಲ್ಲಿ 150ಕ್ಕೂ ಹೆಚ್ಚು ಜನ ಪುರುಷರು, ಮಹಿಳೆಯರು ಪಾಲ್ಗೊಂಡಿದ್ದರು. ರಾಜ ಕೀಯ ಪಕ್ಷಗಳನ್ನು ಪ್ರತಿನಿಧಿಸಿ ಸಿಪಿಐ(ಎಂ)ನ ವಿಧಾನಸಭಾ ಸದಸ್ಯ ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐನ ರಾಜ್ಯ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ್, ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಮಲಾ ಗೌಡ ಮಾತನಾಡಿದರು. ಸಂಘಟನೆಯ ಅಖಿಲ ಭಾರತ ಸಹ ಕಾರ್ಯದರ್ಶಿ ಮೈಥಿಲಿ ಶಿವರಾಮನ್ ಚರ್ಚೆಯನ್ನು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷೆ ಕೆ.ಎಸ್.ಶಾರದರವರು ಪ್ರಸ್ತಾಪಿಸಿ ಮೀಸಲಾತಿ ಮಸೂದೆಯ ಕುರಿತು ಸಂಘಟನೆಯ ನಿಲುವನ್ನು ವಿವರಿಸಿದರು. ಉದ್ಘಾಟನಾ ಭಾಷಣ ಮಾಡುತ್ತಾ ಮೈಥಿಲಿ ಶಿವರಾಮನ್‌ರವರು ಇಂತಹ ಮಸೂದೆಯೊಂದು ಮಂಡಿತವಾಗಲು ಮಹಿಳಾ ಚಳುವಳಿಯ ಶ್ರಮವನ್ನು ವಿವರಿಸಿದರು. ಯಾವುದೇ ರಾಜಕೀಯ ಪಕ್ಷದ ಕೃಪಾ ಕಟಾಕ್ಷವಾಗಿ ಇಂತಹ ಒಂದು ಮಸೂದೆ ಬಂದಿಲ್ಲವೆಂದು ತಿಳಿಸಿದ ಅವರು 1957 ರಿಂದಲೇ ಈ ಪ್ರಕ್ರಿಯೆ ಪ್ರಾರಂಭವಾಗಿದ್ದನ್ನು ಮತ್ತು 1983ರಲ್ಲಿ ಕರ್ನಾಟಕದಲ್ಲಿ ಕಾನೂನಿಗೆ ತಿದ್ದುಪಡಿ ತಂದು ಮಹಿಳಾ ಮೀಸಲಾತಿಯ ಕಲ್ಪನೆಗೆ ಇಂಬು ಕೊಟ್ಟು ಅದು 1987ರಲ್ಲಿ ಜಾರಿಗೆ ಬಂದಿದ್ದನ್ನು ವಿವರಿಸಿದರು.

ಸಂವಿಧಾನದ 73, 74ನೇ ಕಾಲಂನ ತಿದ್ದುಪಡಿ ಆಗುವ ಮೊದಲೇ ಪ.ಬಂಗಾಳದಲ್ಲಿ 1992ರಲ್ಲಿ ಪಂಚಾಯತ್ ಚುನಾವಣೆಗಳಲ್ಲಿ 33 ಪ್ರತಿಶತ ಮೀಸಲಾತಿಯನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ಸಾವಿರ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾದುದನ್ನು ವಿವರಿಸಿದರು. ಈ ಮೀಸಲಾತಿ ಮಸೂದೆಯ ಕುರಿತು ಎದ್ದಿರುವ ವಿವಾದಗಳಿಗೆ ಉತ್ತರ ನೀಡಿ ಅವರು ಮಹಿಳಾ ಸಮಾನತೆಯ ಸಾಧನೆಯತ್ತ ಮಹತ್ವದ ಹೆಜ್ಜೆ ಈ ಮಸೂದೆ ಎಂದು ಅಭಿಪ್ರಾಯ ಪಟ್ಟರು.

ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಐನ ಸಿದ್ದನ ಗೌಡ ಪಾಟೀಲ್‌ರವರು ಮಹಿಳಾ ಚಳುವಳಿ ಐಕ್ಯ ಹೋರಾಟದ ಮೂಲಕ ಮಸೂದೆಯ ಅಂಗೀಕಾರಕ್ಕೆ ಆಗ್ರಹಿಸಬೇಕೆಂದರು.

ಬಿಜೆಪಿಯಿಂದ ಮಾತನಾಡಿದ ಶ್ರೀಮತಿ ವಿಮಲ ಗೌಡರವರು ರಾಜಕೀಯ ಪಕ್ಷಗಳ ಇಬ್ಬಗೆಯ ನೀತಿಯ ಬಗ್ಗೆ ಕಟುವಾಗಿ ಟೀಕಿಸಿದರು. ಉಳಿದೆಲ್ಲ ರಾಜಕೀಯ ಪ್ರಕ್ರಿಯೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕೆಂದು ಬಯಸುವ ಪಕ್ಷಗಳು ಚುನಾವಣೆಯ ಆಯ್ಕೆಯ ಪ್ರಶ್ನೆ ಬಂದಾಗ ಮಹಿಳೆಯರಿಗೆ ಅವಕಾಶ ನೀಡದ ಮತ್ತು ಲೋಕಸಭೆಯಲ್ಲಿ ಚರ್ಚೆಗೆ ಬಂದಾಗ ರಾಜಕೀಯ ಪಕ್ಷಗಳು ತಳೆದ ನಿಲುವು ಅವರ ಹಿಪೋಕ್ರಿಸಿಯನ್ನು ತೋರಿಸುತ್ತದೆ ಎಂದರು. ಮಹಿಳೆಯರ ಸಾಮರ್ಥ್ಯವನ್ನು ಕಡೆಗಣಿಸಬಾರದೆಂದು ರಾಜಕೀಯ ಪಕ್ಷಗಳಿಗೆ ಎಚ್ಚರಿಕೆ ನೀಡಿದ ಅವರು ಮುಂದಿನ ಅಧಿವೇಶನದಲ್ಲಿ ಬಿಜೆಪಿ ಈ ಮಸೂದೆಯ ಅಂಗೀಕಾರಕ್ಕೆ ವಿರೋಧ ವ್ಯಕ್ತಪಡಿಸಿದರೆ ತಮ್ಮ ಹೋರಾಟ ಮೊದಲು ತಮ್ಮ ಪಕ್ಷದ ವಿರುದ್ಧವೇ ಆಗುವುದೆಂದು ತಿಳಿಸಿದರು. ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಮಾರ್ಚ್ 8 ರಂದು ಬಿಜೆಪಿ ಮಹಿಳಾ ಮೋರ್ಚಾ ನಡೆಸಲಿರುವ ಮಹಿಳಾ ಸಮಾವೇಶದಲ್ಲಿ ಇದೊಂದು ಪ್ರಮುಖ ಅಂಶವಾಗಿ ಚರ್ಚೆಗೆ ಬರುವುದೆಂದು ಅವರು ತಿಳಿಸಿದರು.

ಸಿಪಿಐ(ಎಂ)ನ ಪರವಾಗಿ ಮಾತನಾಡಿದ ಜಿ.ವಿ.ಶ್ರೀರಾಮರೆಡ್ಡಿಯವರು ಹಿಪೋಕ್ರಿಸಿ ಬೂರ್ಜ್ವಾ ಡೆಮೊಕ್ರಸಿಯ ಮತ್ತೊಂದು ಮುಖವೆಂದರು. ಮಹಿಳಾ ಮೀಸಲಾತಿ ಮಸೂದೆಯ ಕರಡನ್ನು ಸಿದ್ಧಪಡಿಸುವಲ್ಲಿ ಸಿಪಿಐ(ಎಂ) ಸಂಯುಕ್ತ ರಂಗ ಸರಕಾರದ ಮೇಲೆ ಒತ್ತಡ ತಂದಿದ್ದನ್ನು ತಿಳಿಸಿದರು.

ಪುರುಷ ಪ್ರಧಾನ ಮೌಲ್ಯಗಳು ವಿಜೃಂಭಿಸುತ್ತಿರುವ ಸಮಾಜದಲ್ಲಿ ಮಹಿಳೆ ಎದುರಿಸುತ್ತಿರುವ ಹಲವು ಸಮಸ್ಯೆಗಳ ಕುರಿತು ವಿವರಿಸಿದ ಅವರು ನಸ್ತ್ರೀ ಸ್ವಾತಂತ್ರ್ಯ ಮರ್ಹತಿ ಎಂಬ ಮನುವಿನ ವಾಕ್ಯಗಳನ್ನು ಉದ್ಧರಿಸಿದರು. ಮನು ತನ್ನ ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ಹೇಳಿದ್ದಾನೆ ಆದರೆ ಇಂದಿನ ಹಲವು ರಾಜಕಾರಣಿಗಳು ಸಮಯ ಸಾಧಕರಾಗಿ ಕೆಲಸ ಸಾಧಿಸುವ ಬಗ್ಗೆ ತಿಳಿಸಿದರು. ಹೆಣ್ಣಿನ ಪಾವಿತ್ರ್ಯ ಪರೀಕ್ಷೆಗೆ ಅಗ್ನಿ ಪರೀಕ್ಷೆಗೆ ಒಳಪಡಿಸಿ ಸಮಾಜ ಪುರುಷನನ್ನು ಜಲ ಪರೀಕ್ಷೆಗೆ ಒಳಪಡಿಸದಿರುವುದು ವಿಪರ್ಯಾಸ ಎಂದರು. ಈ ಮಸೂದೆ ಕಾನೂನಾಗಿ ಪರಿವರ್ತಿತವಾಗುವಂತೆ ಒತ್ತಡ ತರಲು ಸಿಪಿಐ(ಎಂ) ಅವಿರತವಾಗಿ ಶ್ರಮಿಸುತ್ತದೆ ಎಂದರು. ಅಧಿವೇಶನದ ಸಂದರ್ಭದಲ್ಲಿ ಸದನದಲ್ಲಿ ಎಡ ಪಕ್ಷಗಳು ಸಂಪೂರ್ಣವಾಗಿ ಹಾಜರಿದ್ದುದ್ದನ್ನು ಉಲ್ಲೇಖಿಸಿವರು. ಇಂದಿಗೂ ಮಹಿಳೆಯರಿಗೆ ಆದ್ಯತೆ ನೀಡುವಂತಹ ಪರಿಸ್ಥಿತಿ ಇರುವುದನ್ನು ಬದಲಿಸಲು ಹೋರಾಟ ನಡೆಸಬೇಕೆಂದು ಅವರು ಸಿಪಿಐ(ಎಂ) ಪಕ್ಷ ತನ್ನ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಎನ್.ಗಾಯಿತ್ರಿ, ಎಚ್.ಎನ್.ನಾಗಮೋಹನ ದಾಸ್, ಎಂ.ರತ್ನಾಕರ ಶೆಣೈ, ವಿಜಯಾ ಮೂರ್ತಿ, ಸುಶೀಲಮ್ಮ ಗುರುಶಾಂತ್.ಎಸ್.ವೈ. ಅವರುಗಳಲ್ಲದೇ ನಾಗಮಣಿ ಎಸ್.ರಾವ್, ಚಂಪಾ, ಮುಂತಾದವರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು ಮತ್ತು ಮೀಸಲಾತಿ ಮಸೂದೆ ಜಾರಿಯಾಗಲೇಬೇಕೆಂದು ಆಗ್ರಹಿಸಿದರು.

ಪ್ರಾರಂಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪಂಕಜರವರು ಸ್ವಾಗತ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯಾಧ್ಯಕ್ಷೆ ವಿಮಲಾರವರು ವಹಿಸಿದ್ದರು. ಗೌರಿಯವರ ವಂದನಾರ್ಪಣೆಯೊಂದಿಗೆ ಚರ್ಚೆ ಮುಕ್ತಾಯವಾಯಿತು.



ಚಿತ್ರದಲ್ಲಿ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿಯವರು ಪುಸ್ತಕ ಬಿಡುಗಡೆ ಮಾಡುತ್ತಿದ್ದಾರೆ. ಲೇಖಕಿ ಆರ್.ಪೂರ್ಣಿಮಾ ಬಲಗಡೆಯಿಂದ ಎರಡನೆಯವರು.

ಜನವಾದಿ ಮಹಿಳಾ ಸಂಘಟನೆಯ ಸಂವಾದ

ಸಮಾನತೆಗಾಗಿ ಮೀಸಲಾತಿ ಅಗತ್ಯ

"ಹೆಣ್ಣು-ಗಂಡಿನ ನಡುವೆ ಸಮಾನತೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ, ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ ಒದಗಿಸುವುದು ಒಂದು ಅಗತ್ಯವಾದ ಹಾಗೂ ಪ್ರಮುಖವಾದ ಹೆಜ್ಜೆ" ಎಂದು ಪತ್ರಕರ್ತೆ ಆರ್.ಪೂರ್ಣಿಮಾ ಹೇಳಿದರು.

ಜನವಾದಿ ಮಹಿಳಾ ಸಂಘಟನೆಯು ಇತ್ತೀಚೆಗೆ ಮಂಗಳೂರಿನಲ್ಲಿ ಏರ್ಪಡಿಸಿದ್ದ 'ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿಯ ಅಗತ್ಯ' ಕುರಿತ ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ, ವಿಷಯ ಕುರಿತು ಮಾತನಾಡುತ್ತಿದ್ದ ಅವರು 'ಈ ಮೀಸಲಾತಿಯು ಮಹಿಳೆಯರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುತ್ತದಷ್ಟೇ ಹೊರತು ದಿಢೀರ್ ಸಾಮಾಜಿಕ ಪರಿವರ್ತನೆಯನ್ನು ಉಂಟು ಮಾಡುವುದಿಲ್ಲ" ಎಂದರು.

ಶತಮಾನಗಳಿಂದ ಅವಕಾಶಗಳಿಂದ ವಂಚಿತಳಾಗಿ, ಸ್ಥಾಪಿತ ಮೌಲ್ಯಗಳ ವೈಭವೀಕರಣದಲ್ಲಿ ಬಂಧಿಯಾಗಿರುವ ಮಹಿಳೆಗೆ ಒಂದು ಅವಕಾಶವನ್ನು ಕಲ್ಪಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದೂ ಅವರು ಅಭಿಪ್ರಾಯಪಟ್ಟರು.

ಎರಡು ದಶಕಗಳಿಂದ ಮಹಿಳೆಯರ ಸ್ಥಿತಿ-ಗತಿಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆಯುತ್ತಿರುವ ನಾನು ಕಂಡಂತೆ, ಕೇವಲ ಇಸವಿಗಳಲ್ಲಿ ಬದಲಾವಣೆ ಆಗಿದೆಯೇ ಹೊರತು , ಮಹಿಳೆಯರ ಸ್ಥಿತಿ ಒಂದಿಷ್ಟೂ ಸುಧಾರಣೆ ಆಗಿಲ್ಲವೆಂದು ಪೂರ್ಣಿಮಾ ವಿಷಾದಿಸಿದರು.

ಮಹಿಳೆಯರಿಗೆ ರಾಜಕೀಯ ಮೀಸಲಾತಿಯು ಒಂದು ಐತಿಹಾಸಿಕ, ಸಾಮಾಜಿಕ, ರಾಜಕೀಯ ಹಾಗೂ ತಾತ್ವಿಕ ಅಗತ್ಯ ಎಂದು ಪ್ರತಿಪಾದಿಸಿದ ಅವರು, ಈ ಅಗತ್ಯಗಳನ್ನು ವಿವರಿಸಿದರು. ಮೀಸಲಾತಿ ಮಸೂದೆ ಕುರಿತು ಸಂಸತ್ತಿನಲ್ಲಿ ಪುರುಷರು ಮಾಡಿರುವ ಟೀಕೆಗಳನ್ನು, ವ್ಯಂಗ್ಯಗಳನ್ನು ಪ್ರಸ್ತಾಪಿಸಿದ ಪೂರ್ಣಿಮಾ ಅವರು, ಅದನ್ನು 'ಸಾಮಾಜಿಕ ವ್ಯಾಧಿ' ಎಂದು ಪರಿಗಣಿಸಿ ಸಮಾಜದ ಧೋರಣೆಗೆ ಕನ್ನಡಿ ಹಿಡಿದರು.

ಪೂರ್ಣಿಮ ಅವರು ಬರೆದಿರುವ 'ರಾಜಕೀಯದಲ್ಲಿ ಮಹಿಳೆ: ಮೀಸಲಾತಿಯ ಅಗತ್ಯ' ಕಿರು ಪುಸ್ತಕವನ್ನು ಬಿಡುಗಡೆ ಮಾಡಿದ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿ ಅವರು, ಸ್ತ್ರೀ-ಪುರುಷರ ನಡುವಿನ ದೈಹಿಕ ವ್ಯತ್ಯಾಸವನ್ನೇ ಮೂಲವಾಗಿಟ್ಟುಕೊಂಡು ಅನೇಕ ವೈರುಧ್ಯಗಳನ್ನು ಸೃಷ್ಟಿಸುತ್ತಿರುವ ಇಂದಿನ ಸ್ಥಿತಿಯಲ್ಲಿ ಮಹಿಳೆಯರ ವ್ಯಕ್ತಿತ್ವ ವಿಕಸನಕ್ಕೆ ಇಂತಹ ಮೀಸಲಾತಿ ಅಗತ್ಯವಾಗಿದೆ ಎಂದರು.

ಈ ಮೀಸಲಾತಿ ಮಸೂದೆಯಿಂದ ಸಂಸತ್ತಿನಲ್ಲಿ ಮಹಿಳೆಯರ ಸಂಖ್ಯೆ 181 ಕ್ಕೆ ಏರಲಿರುವುದರಿಂದ ಪುರುಷ ಸಂಸತ್ ಸದಸ್ಯರು ತಮ್ಮ ಸ್ಥಾನ ಕಳೆದುಕೊಳ್ಳುವ ಭೀತಿಯಲ್ಲಿ ನರಳುತ್ತಿದ್ದಾರೆ ಎಂದೂ ಫಕೀರ್ ಮಹಮದ್ ಕಟ್ಪಾಡಿ ಅವರು ಮಸೂದೆಯ ವಿರೋಧಿಗಳನ್ನು ಟೀಕಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಮರ್ಶಕ ಪ್ರೊ.ಸಿ.ಎನ್. ರಾಮಚಂದ್ರನ್ ಅವರು, ಇದೊಂದು 'ಕ್ರಾಂತಿಕಾರಕ ಮಸೂದೆ' ಎಂದು ಬಣ್ಣಿಸಿದರು. ಮಸೂದೆ ಕುರಿತು ಎದ್ದಿರುವ ಅಪಸ್ವರಗಳನ್ನು ಪ್ರಸ್ತಾಪಿಸಿದ ಅವರು, ಯಾವುದೇ ಒಂದು ಮಹತ್ವದ ಬದಲಾವಣೆ ಆಗುವಾಗ ಘರ್ಷಣೆ ಆಗುವುದು ಸಹಜ ಎಂದರು.

ಕೇವಲ ರಾಜಕೀಯ ಮೀಸಲಾತಿಯೊಂದೇ ಮಹಿಳೆಯರ ಸ್ಥಿತಿ ಸುಧಾರಿಸುವುದಿಲ್ಲ ಎಂದ ಅವರು, ಇದಕ್ಕೆ ಅಡಿಪಾಯವಾಗಿ ಶೈಕ್ಷಣಿಕ ರಂಗದಲ್ಲಿ ಮಹಿಳೆಯರಿಗೆ ಮೀಸಲಾತಿ ಒದಗಿಸಬೇಕು. ಅದಕ್ಕಾಗಿ ಮಹಿಳೆಯರು ಹೋರಾಡಬೇಕು ಎಂದು ರಾಮಚಂದ್ರನ್ ಕರೆ ನೀಡಿದರು.

ಸಂವಾದದಲ್ಲಿ ಕೆ.ಷಣರಾಜ್, ಕೆ.ಪದ್ಮಾವತಿ, ವರದೇಶ್, ಯಶೋಧಾ ಉಡುಪ, ಸಾರಾಅಬೂಬಕ್ಕರ್, ಬಾನಾ ಶಾಂತಪ್ರಿಯ, ಪ್ರಶಾಂತ್ ಅವರುಗಳು ಭಾಗವಹಿ ಸಿದ್ದರು. ಆರಂಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಪದ್ಮಾವತಿ .ಎಸ್.ಶೆಟ್ಟಿ ಸ್ವಾಗತಿಸಿದರು. ಅಧ್ಯಕ್ಷೆ ಸತ್ಯಾ. ಎಸ್. ಅವರು ಪ್ರಸ್ತಾವನೆ ಮಾಡಿದರು. ವಾಣಿ ಉಚ್ಚಿಲ್ ವಂದನಾರ್ಪಣೆ ಮಾಡಿದರು.

ಜಿಲ್ಲಾಡಳಿತದ ಅಹಂಭಾವಕ್ಕೆ ಸವಾಲೊಡ್ಡಿದ ಹೆಂಚಿನ ಕಾರ್ಮಿಕರು

ಕನಿಷ್ಠ ಕೂಲಿ ಹತ್ತು ವರ್ಷಗಳಿಂದ ಪರಿಷ್ಕರಣೆಯಾಗದ ಬಗ್ಗೆ ಹೆಂಚಿನ ಕಾರ್ಮಿಕರು ಸರಕಾರದ ಗಮನ ಸೆಳೆದರೂ ಕಿವಿಗೆ ಹಾಕಿಕೊಳ್ಳದಿದ್ದಾಗ ಕಾರ್ಯಾಚರಣೆಗಿಳಿಯಬೇಕಾಗಿ ಬಂದಾಗ ಜಿಲ್ಲಾಡಳಿತ,ಪೋಲೀಸ್ ಅಧಿಕಾರಿಗಳ ಅಹಂಭಾವವನ್ನು ಎದುರಿಸಿ ನಿಂತ ಬಗ್ಗೆ ಕಳೆದ ವಾರ ಓದಿದ್ದೀರಿ. ಈ ಬಗ್ಗೆ ಒಂದು ವಿವರವಾದ ವರದಿ.

1987 ರ ನಂತರ ಹೆಂಚಿನ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಿಸಿಲ್ಲ. ದ.ಕ. ಜಿಲ್ಲೆಯಲ್ಲಿ ಬಲವಾದ ಸಂಘಟನೆ ಮೂಲಕ ತಮ್ಮ ವೇತನ ಹೆಚ್ಚಿಸಲು ಕಾರ್ಮಿಕರು ಶಕ್ತರಾಗಿದ್ದರು. ಆದರೆ ಸಂಘಟನೆ ಬಲಹೀನವಾಗಿದ್ದರಿಂದ ಇದು ಸಾಧ್ಯವಾಗಿರಲಿಲ್ಲ. ಈ ಪರಿಸ್ಥಿಯನ್ನು ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನ್ನಿನ 50ನೇ ಮಹಾಸಭೆ ಚರ್ಚಿಸಿ ಕನಿಷ್ಠ ಕೂಲಿ ಪರಿಷ ರಿಸಲು ಒತ್ತಾಯಿಸಿ ಹೋರಾಟ ರೂಪಿಸಬೇಕೆಂದು ತೀರ್ಮಾನ ಕೈಗೊಂಡಿತ್ತು. ಈ ಸಂಬಂಧ ಮನವಿಯನ್ನು ಸಚಿವ ಸಿದ್ದರಾಮಯ್ಯನವರಿಗೆ ಯೂನಿಯನ್ನಿನ ನಿಯೋಗ ಹೋಗಿ ಕೊಟ್ಟು ವಿನಂತಿಸಿತ್ತು. ಆದರೆ ಸರಕಾರದಿಂದ ಏನೊಂದೂ ಪ್ರತಿಕ್ರಿಯೆ ಬರಲಿಲ್ಲ. ಮತ್ತೆ ಸೇರಿದ ಯೂನಿಯನ್ನಿನ ಕಾರ್ಯಕಾರಿ ಸಮಿತಿ ಜನವರಿ 20ರಿಂದ 24ರವರೆಗೆ ದ.ಕ ಜಿಲ್ಲಾಧಿಕಾರಿ ಕಚೇರಿ ಎದುರು ಹಾಗೂ ಉಡುಪಿ, ಕುಂದಾಪುರ ತಾಲೂಕು ಕಚೇರಿ ಎದುರು ಪಿಕೆಟಿಂಗ್ ನಡೆಸಲು ತೀರ್ಮಾನಿಸಿತ್ತು. ಈ ಹೋರಾಟದಲ್ಲಿ ಎಐಟಿಯುಸಿ ಕೂಡಾ ಸೇರಿತ್ತು. ಅದರಂತೆ ಮೊದಲ ದಿನದ ಪಿಕೆಟಿಂಗ್‌ನಲ್ಲಿ ಸಿಲ್ವಾನ ಕಾರ್ಖಾನೆ, ಉಳ್ಳಾಲ ಟೈಲ್, ಕಾರ್ಪೋರೇಷನ್ ಟೈಲ್, ಇಂಡಿಯನ್ ನ್ಯಾಶನಲ್ ಮರೋಳಿ ಹಾಗೂ ಶ್ರೀರಾಮ್ ಹೀಗೆ 5 ಕಾರ್ಖಾನೆಗಳ ಕಾರ್ಮಿಕರು ಜಿಲ್ಲಾಧಿಕಾರಿಯವರ ಕಛೇರಿ ಎದುರು ಪಿಕೆಟಿಂಗ್ ನಡೆಸಿ 20 ನಿಮಿಷಗಳ ಕಾಲ ಜಿಲ್ಲಾಧಿಕಾರಿಯವರ ಕಾರನ್ನು ತಡೆದರು. ಇದರಿಂದ ಕೋಪಗೊಂಡ ಜಿಲ್ಲಾಧಿಕಾರಿ ಅನಿಲ್ ಕುಮಾರ್ ಲಾಠಿ ಚಾರ್ಜ್ ಮಾಡಲು ಹಾಗೂ ಬಂಧಿಸಿ ಜೈಲಿಗೆ ಹಾಕಲು ಪೋಲೀಸರಿಗೆ ಆದೇಶಿಸಿದರು. ಆದರೆ ಪೋಲೀಸರು ಜಿಲ್ಲಾಧಿಕಾರಿಯವರ ಆಜ್ಞೆ ಪಾಲಿಸಲು ಹಿಂದೆ ಮುಂದೆ ನೋಡಿದರು. ಇದು ಜಿಲ್ಲಾಧಿಕಾರಿಯನ್ನು ಮತ್ತೂ ಕೆರಳಿಸಿತು. ಜಿಲ್ಲಾಧಿಕಾರಿಯಿಂದ ಪೋಲೀಸ್ ಅಧಿಕಾರಿಗಳಿಗೆ ಬಹಿರಂಗವಾಗಿಯೇ ಬೈಗುಳಗಳ ಸುರಿಮಳೆಯಾಯಿತು. ಇದರ ಸಿಟ್ಟನ್ನು ಮರುದಿನ ಪಿಕೆಟಿಂಗ್ ತಂಡದ ಮೇಲೆ ತೀರಿಸಿಕೊಳ್ಳಲು ಪೋಲೀಸರು ಮುಂದಾದರು. ಅಂದು ಆಲ್ಬುಕರ್ಕ್ ಟೈಲ್, ರೇಗೂ ಹಾಗೂ ಮಟ್ಪಾಡಿ ಈ ಮೂರು ಕಾರ್ಖಾನೆಗಳ ಕಾರ್ಮಿಕರು ಪಿಕೆಟಿಂಗ್ ನಡೆಸಲು ಜಿಲ್ಲಾಧಿಕಾರಿ ಕಛೇರಿ ಕಡೆಗೆ ಹೊರಟ ಮೆರವಣಿಗೆ ಕಚೇರಿ ತಲುಪುವ ಮೊದಲೇ ಮಾರ್ಗ ಮಧ್ಯದಲ್ಲಿ ಲಾಠಿ ಚಾರ್ಜ್ ಮಾಡಿದರು. ಮಹಿಳೆಯರೂ ಸೇರಿದಂತೆ 20ಕೂ ಹೆಚ್ಚಿನ ಕಾರ್ಮಿಕರಿಗೆ ಗಾಯಗಳಾದವು. ಲಾಠಿ ಚಾರ್ಜ್‌ನಿಂದ ಚದುರಿಸಲು ಸಾಧ್ಯವಾಗದಾಗ 600ರಷ್ಟಿದ್ದ ಕಾರ್ಮಿಕರನ್ನು ಬಂಧಿಸಿದರು. ಅವರಲ್ಲಿ 15 ಜನ ಮುಖಂಡರನ್ನು ಗುರುತಿಸಿ ಪ್ರತ್ಯೇಕ ಪೋಲೀಸ್ ಠಾಣೆಗೆ ಕೊಂಡುಹೋಗಿ ರೌಡಿಗಳೊಂದಿಗೆ ವರ್ತಿಸುವ ರೀತಿಯಲ್ಲಿ ಫೋಟೋ ತೆಗೆದು ಬೆದರಿಕೆ ಹಾಕಿದರು. ಇವರಿಗೆ ಜಾಮೀನು ಕೊಟ್ಟು ಬಿಡಿಸಲು ಹಿರಿಯ ಮುಖಂಡ ಅಬ್ರಾಹಂ ಕರ್ಕಡ, ಕೆ.ಮೂಸಬ್ಬ ಸರ್ಕಲ್ ಇನ್ಸ್‌ಪೆಕ್ಟರರಲ್ಲಿ ಹೋದಾಗ ಮೇಲಾಧಿಕಾರಿಗಳಿಂದ ಆದೇಶವಿದೆ ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂಬ ಉತ್ತರ ಬಂತು. ಎಸ್.ಪಿ.ಯವರಲ್ಲಿ ವಿನಂತಿಸಿದಾಗ ಎಸ್.ಪಿ. ಮಾತನಾಡಲು ತಯಾರಾಗಲಿಲ್ಲ. ಬಂಧಿಸಿದ 15 ಜನ ಮುಖಂಡರನ್ನು ಸಂಜೆ 5 ಗಂಟೆಗೆ ಕೋರ್ಟಿಗೆ ಹಾಜರು ಪಡಿಸಿ ಜೈಲಿಗೆ ಕಳುಹಿಸಿದರು. ಇದರಿಂದ ಪರಿಸ್ಥಿತಿ ಉದ್ರಿಕ್ತಗೊಂಡಿತ್ತು. ಉಳಿದ ಕಾರ್ಮಿಕರು ಎಸ್.ಪಿ. ಕಚೇರಿಯಲ್ಲಿಯೇ ಧರಣಿ ನಡೆಸಲು ತೀರ್ಮಾನಿಸಿದರು. ಜೈಲಿಗೆ ಕಳುಹಿಸಿರುವುದರ ಪ್ರತಿಭಟನೆಯಾಗಿ ಮರುದಿನ ಸಾರ್ವತ್ರಿಕ ಮುಷ್ಕರ ಮಾಡುವುದಾಗಿ ಯೂನಿಯನ್ ಮುಖಂಡರು ಪೋಲೀಸ್ ಅಧಿಕಾರಿಯವರಿಗೆ ಹೇಳಿದಾಗ ಎಷ್ಟು ಜನ ಬೇಕಾದರೂ ಬನ್ನಿ ನಾವು ಎದುರಿಸುತ್ತೇವೆ, ನಿಮ್ಮನ್ನು ಬಳ್ಳಾರಿ ಜೈಲಿಗೆ ಹಾಕುತ್ತೇವೆ ಎಂದು ಅಹಂಭಾವದಿಂದ ಹೇಳಿದರು. ಈ ಸುದ್ದಿ ಹರಡಿ 22ರಂದು ಬೆಳಿಗ್ಗೆ ದ.ಕ.ಜಿಲ್ಲೆಯ. ಎಲ್ಲಾ ಹಂಚಿನ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಮಂಗಳೂರು, ಕುಂದಾಪುರ, ಉಡುಪಿಯಲ್ಲಿ ಬೀದಿಗಿಳಿದರು. ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿಎದುರುಸುಮಾರು3 ಸಾವಿರ ಕಾರ್ಮಿಕರು ಸೇರಿದರು. ಜಿಲ್ಲಾಧಿಕಾರಿಕಛೇರಿಹಾಗೂ ಸುತ್ತಮುತ್ತ ರಸ್ತೆಗಳುಬ್ಲಾಕ್‌ಆಯಿತು.ಹಿಂದಿನ ದಿನ ಠೇಂಕಾರ ತೋರಿಸಿದ ಜಿಲ್ಲಾ ಎಸ್.ಪಿ. ಮತ್ತು ಡಿ.ಸಿ.ಯವರು ಈಗ ಕಂಗಾಲಾದರು. ಎ.ಸಿ(ಅಸಿಸ್ಟೆಂಟ್ ಕಮಿಶನರ್)ಯವರನ್ನು ಸಂಧಾನಕ್ಕೆ ಕಾರ್ಮಿಕರಲ್ಲಿಗೆ ಕಳುಹಿಸಿದರು.

ಕಾರ್ಮಿಕರು ಕನಿಷ್ಠ ವೇತನದ ಬೇಡಿಕೆಯನ್ನು ಸರಕಾರದ ಗಮನಕ್ಕೆ ತರುವುದು, ಜೈಲಿಗೆ ಹಾಕಿದ 15 ಜನರನ್ನು ನಿಶ್ಶರ್ತ ಬಿಡುಗಡೆಮಾಡಿ ಕೇಸು ವಾಪಾಸು ಪಡೆಯುವುದು, ಲಾಠಿ ಚಾರ್ಜ್ ಮಾಡಿರುವುದು ಹಾಗೂ ಕಾರ್ಮಿಕರ ಹೋರಾಟದ ಬಗ್ಗೆ ಕೀಳಂದಾಜು ಮತ್ತು ಬಳ್ಳಾರಿ ಜೈಲಿಗೆ ಕಳುಹಿಸುವ ಧಮಕಿಯ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಇದರಿಂದ ಪರಿಸ್ಥಿತಿ ಶಾಂತವಾಯಿತು. ಬಂಧನದಲ್ಲಿದ್ದ ನಾರಾಯಣ ಶೆಟ್ಟಿ, ಗಂಗಾಧರ ಶೆಟ್ಟಿ, ಚಂದ್ರಹಾಸ, ರಘುಶೆಟ್ಟಿ, ವಿ.ಈಶ್ವರ್, ದೇವಪ್ಪ, ಈಶ್ವರ ಕುತ್ತೇರು, ಮಹಾಬಲ, ಪುರುಷೋತ್ತಮ, ಶ್ರವಣಕುಮಾರ್, ಜಾರಪ್ಪ ಪೂಜಾರಿ ಇವರುಗಳನ್ನು ಜೈಲಿನಿಂದ ಬಿಡುಗಡೆಗೊಳಿಸಿದರು. ಈ ರೀತಿ ಜಿಲ್ಲಾಡಳಿತಕ್ಕೆ ಹೋರಾಟದ ರುಚಿ ತೋರಿಸುವಲ್ಲಿ ಹೆಂಚಿನ ಕಾರ್ಮಿಕರು ಯಶಸ್ವಿಯಾದರು.

22ರ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆಯ ನೇತೃತ್ವವನ್ನು ಪಿ. ರಾಮಚಂದ್ರರಾವ್, ಕೆ.ಆರ್. ಶ್ರೀಯಾನ್, ಅಬ್ರಾಹಂ ಕರ್ಕಡ, ಕೆ.ಮೂಸಬ್ಬ, ಬಿ.ಶೀನ ವಹಿಸಿದ್ದರು. ಇದರೊಂದಿಗೆ ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನ್ನಿನ(ಸಿಐಟಿಯು) ಹೋರಾಟದ ಚರಿತ್ರೆಗೆ ಮತ್ತೊಂದು ಪುಟ ಸೇರಿತು.

ವರದಿ: ಸುಕುಮಾರ್ ತೊಕ್ಕೊಟ್ಟು



ಡಿವೈಎಫ್ಐ ಏಳನೇ ದ.ಕನ್ನಡ ಜಿಲ್ಲಾ ಸಮ್ಮೇಳನ

ಕುಂದಾಪುರ: ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಮತ್ತು ಯುವ ನೇತಾರ ಸುಬಾಶ್ ಚಂದ್ರ ಬೋಸ್‌ರ ನೂರನೇ ಜನ್ಮ ಶತಾಬ್ಧಿಯ ಈ ಸಂದರ್ಭದಲ್ಲಿ ಸ್ವಾತಂತ್ರ ಭಾರತದ ಕನಸು ಕನಸಾಗಿಯೇ ಉಳಿದು, ಯಾವ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಗಳಿಸಿದ ಈ ಐವತ್ತು ವರ್ಷಗಳಲ್ಲೇ ಹಾಗೂ ಸ್ವಾತಂತ್ರ್ಯ ಚಳುವಳಿಯ ಸಂಗ್ರಾಮದಲ್ಲಿ ದುಮುಕಲು ವಿದ್ಯಾರ್ಥಿ ಯುವಜನತೆಗೆ ಸ್ಫೂರ್ತಿ ತುಂಬಿದ ಹೋರಾಟದ ನೇತೃತ್ವ ನೀಡಿದ್ದ ನೇತಾಜಿಯವರ ಜನ್ಮಶತಾಬ್ಧಿಯ ಸಂದರ್ಭ ದಲ್ಲೇ ಮತ್ತೆ ಅದೇ ಸಾಮ್ರಾಜ್ಯಶಾಹಿಗಳಿಗೆ ಸ್ವಾಗತ.

ಒಂದೆಡೆ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಹಾಗೂ ನೇತಾಜಿ ಜನ್ಮ ಶತಾಬ್ಧಿ ಸಂಭ್ರಮ ಮತ್ತೊಂದೆಡೆ ಅದೇ ಸಾಮ್ರಾಜ್ಯ ಶಾಹಿಗಳಿಗೆ ಅದ್ದೂರಿ ಸ್ವಾಗತ. ಈ ಸಂದರ್ಭದಲ್ಲಿ ಕುಂದಾಪುರದಲ್ಲಿ ದ.ಕ. ಜಿಲ್ಲಾ ಡಿವೈಎಫ್ಐನ ಏಳನೇ ಜಿಲ್ಲಾ ಸಮ್ಮೇಳನವು ಜನವರಿ 12 ಮತ್ತು 13 ರಂದು ಯಶಸ್ವಿಯಾಗಿ ಜರುಗಿತು.

ಸಮ್ಮೇಳನವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿ ಮಾತನಾಡುತ್ತಾ ಯಾವ ದೇಶ ತನ್ನ ಯುವಶಕ್ತಿಯನ್ನು ಬಳಸಿಕೊಳ್ಳುವುದಿಲ್ಲವೋ ಆ ದೇಶ ಆರ್ಥಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ ಮುಂದುವರಿಯಲು ಸಾಧ್ಯವಿಲ್ಲ. ಕೇವಲ ಉದಾರೀಕರಣದಿಂದಲೇ ದೇಶದ ಎಲ್ಲಾ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ ಹಾಗೂ ಆರ್ಥಿಕ ಹಾಗೂ ಸಾಮಾಜಿಕ ಸಮತೋಲನ ಸರಿಪಡಿಸಲು ಆಗುವುದಿಲ್ಲವೆಂದರು. ಹಾಗೆಯೇ ಯುವ ಜನತೆಯಲ್ಲಿ ಪಡೆಯಬೇಕೆಂಬ ಹಂಬಲ ಮತ್ತು ಛಲ ಇರಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಎಸ್.ವೈ. ಗುರುಶಾಂತ್ ಮಾತನಾಡಿ ಹಸಿದವನಿಗೆ ಊಟ, ದುಡಿದವನಿಗೆ ಸಂಬಳ, ಸರಿಯಾದ ಶಿಕ್ಷಣ ಹೀಗೆ ಜನರ ಕಲ್ಯಾಣ ಆಗದೆ ಲೋಕ ಕಲ್ಯಾಣದ ಮಾತು ಆಡಂಬರ ಎಂದರು.

ಇನ್ನೊರ್ವ ಮುಖ್ಯ ಅತಿಥಿ ಮಲೆನಾಡು ಅಭಿವೃದ್ಧಿ ಮಂಡಳಿ ಸದಸ್ಯ ಕುಂದಾಪುರ ಕ್ಷೇತ್ರ ಜನತಾದಳದ ಅಧ್ಯಕ್ಷ ಕೆ.ಎನ್. ಗೋವರ್ಧನ್ ಮಾತನಾಡಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಕರೆ ನೀಡಿದರು.

ಕುಂದಾಪುರ ಪುರಸಭೆಯ ಅಧ್ಯಕ್ಷರಾದ ವಿ.ನರಸಿಂಹ ಸಮ್ಮೇಳನಕೆ ಶುಭ ಕೋರಿದರು. ಸಮ್ಮೇಳನದ ಪ್ರಾರಂಭದಲ್ಲಿ ಕೆದೂರು ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಕೆ.ಶಂಕರ ಖಾರ್ವಿ ಧ್ವಜಾರೋಹಣ ನಡೆಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಡಿವೈಎಫ್ಐ ಅಧ್ಯಕ್ಷರಾದ ಯಾದವ ಶೆಟ್ಟಿ ವಹಿಸಿದ್ದು ಕಾಸರಗೋಡು ಜಿಲ್ಲಾ ಡಿವೈಎಫ್ಐನ ಅಧ್ಯಕ್ಷ ಭಾಸ್ಕರ ಕುಂಬ್ಳೆ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಖ್ಯಾತ ನ್ಯಾಯವಾದಿ ರವಿಕಿರಣ ಮುರ್ಡೇಶ್ವರ ಸ್ವಾಗತಿಸಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು. ವಿ.ಚಂದ್ರಶೇಖರ ಧನ್ಯವಾದವಿತ್ತರು.

ಜನವರಿ 1 ರಂದು ಸಂಜೆ 4 ಗಂಟೆಗೆ ಕುಂದಾಪುರ ನಗರದಾದ್ಯಂತ ಯುವಜನರ ಬೃಹತ್ ಮೆರವಣಿಗೆ ನಡೆದು ಸಂಜೆ 5 ಗಂಟೆಗೆ ಕುಂದಾಪುರ ಗಾಂಧಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಸಲಾಯಿತು. ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ, ಹಾಗೂ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಎಸ್.ವೈ. ಗುರುಶಾಂತ್ ಮುಖ್ಯ ಭಾಷಣಕಾರರಾಗಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್ಐನ ದ.ಕ.ಜಿಲ್ಲಾ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ರವಿಕಿರಣ ಮುರ್ಡೇಶ್ವರ ಸಭೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲಾಧ್ಯಕ್ಷ ಕೃಷ್ಣಪ್ಪ ಕೊಂಚಾಡಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರೆ. ಕುಂದಾಪುರ ತಾಲ್ಲೂಕು ಕಾರ್ಯದರ್ಶಿ ವಿ.ಚಂದ್ರಶೇಖರ್ ಧನ್ಯವಾದವಿತ್ತರು.

ಬೆಂಗಳೂರಿನಲ್ಲಿ ಸಿಐಟಿಯು ರಾಜ್ಯ ಸಮ್ಮೇಳನ

ಏಪ್ರಿಲ್ 6 ರಿಂದ 10 ರವರೆಗೆ ಎರ್ನಾಕುಲಂನಲ್ಲಿ ದೇಶದ ಮಹತ್ವಪೂರ್ಣ ಕಾರ್ಮಿಕ ಸಂಘಟನೆ ಸಿಐಟಿಯುವಿನ ಅಖಿಲ ಭಾರತ ಸಮ್ಮೇಳನ ನಡೆಯಲಿದ್ದು, ಅದಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಸಮ್ಮೇಳನ ಮಾರ್ಚ್ 13 ರಿಂದ 16 ರ ತನಕ ಬೆಂಗಳೂರಿನಲ್ಲಿ ನಡೆಯಲಿದೆ. ಜನವರಿ 19 ರಂದು ಮೈಸೂರಿನಲ್ಲಿ ಸಭೆ ಸೇರಿದ ಸಿಐಟಿಯು ರಾಜ್ಯ ಸಮಿತಿ ಈ ತೀರ್ಮಾನ ಕೈಗೊಂಡಿದೆ. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಈ ಸಮಾರಂಭ ಬೆಂಗಳೂರಿನಲ್ಲಿ ಪುರಭವನದಲ್ಲಿ ಮಾರ್ಚ್ 13 ರಿಂದ ನಡೆಯಲಿದೆ. ಪ್ರತಿನಿಧಿಗಳ ಅಧಿವೇಶನ 14 ರಿಂದ 16 ರವರೆಗೆ ಬೆಂಗಳೂರಿನ ಪುಲಿಕೇಶಿ ನಗರದಲ್ಲಿರುವ ಐಟಿಸಿ ಕಾರ್ಮಿಕ ಸಂಘದ 'ಬಟಿಆರ್ ಭವನ'ದಲ್ಲಿ ನಡೆಯಲಿದೆ. ರಾಜ್ಯದೆಲ್ಲೆಡೆಯಿಂದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಸಮ್ಮೇಳನದ ಅಂಗವಾಗಿ ಒಂದು ಬೃಹತ್ ರ್‍ಯಾಲಿಯನ್ನು ನಡೆಸಲು ಕೂಡಾ ಸಿಐಟಿಯು ರಾಜ್ಯ ಸಮಿತಿ ನಿರ್ಧರಿಸಿತು.

ರಾಜ್ಯ ಸಮ್ಮೇಳನದ ಮೊದಲು ಜಿಲ್ಲಾ ಸಮ್ಮೇಳನಗಳು ನಡೆಯುತ್ತಿವೆ. ಈಗಾಗಲೇ ಉತ್ತರಕನ್ನಡ, ಬೆಳಗಾಂ, ಧಾರವಾಡ, ಬೆಂಗಳೂರಿನ ಜಿಲ್ಲಾ ಸಮ್ಮೇಳನಗಳು ನಡೆದಿವೆ. 'ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನ ಫೆಬ್ರವರಿ 13-14 ರಂದು, ಮೈಸೂರು ಜಿಲ್ಲಾ ಸಮ್ಮೇಳನ ಫೆಬ್ರವರಿ 9 ರಂದು ಹಾಗೂ ಬಳ್ಳಾರಿ ಜಿಲ್ಲಾ ಸಮ್ಮೇಳನ ಫೆಬ್ರವರಿ ಒಂದರಂದು ನಡೆಯಲಿವೆ.

ಇದಲ್ಲದೆ ಮೈಸೂರಿನಲ್ಲಿ ಸಭೆ ಸೇರಿದ ಸಿಐಟಿಯು ರಾಜ್ಯ ಸಮಿತಿ ರಾಜ್ಯದಲ್ಲಿ ನಡೆಯುತ್ತಿರುವ ಕಾರ್ಮಿಕರ ವಿವಿಧ ಭಾಗಗಳ ಹೋರಾಟಗಳ ವಿಮರ್ಶೆ ನಡೆಸಿತು. ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ಜಾರಿಗಾಗಿ ಹೋರಾಟ ನಡೆಸಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿತು. ತೋಟ ಕಾರ್ಮಿಕರ ರಾಜ್ಯ ಸಮ್ಮೇಳನವನ್ನು ಫೆಬ್ರವರಿ 15-16 ರಂದು ಕೊಡಗಿನ ಸಿದ್ದಾಪುರದಲ್ಲಿ ನಡೆಸಲಾಗುವುದು ಎಂದು ತಿಳಿಸಲಾಗಿದೆ. ಅಲ್ಲದೆ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಜಾರಿಗಾಗಿ ರಾಜ್ಯದಲ್ಲಿ ವಿಭಾಗ ಮಟ್ಟದ ಸಮಾವೇಶಗಳನ್ನು ನಡೆಸಬೇಕೆಂದು ರಾಜ್ಯ ಸಮಿತಿ ನಿರ್ಧರಿಸಿತು.

ಗರ್ಭಿಣಿಯರ, ಮಕ್ಕಳ, ಬಾಣಂತಿಯರ ಪೌಷ್ಟಿಕ ಆಹಾರ ನುಂಗಿದ ರಾಕ್ಷಸರು

ದನಕರುಗಳ ಮೇವನ್ನು ತಿಂದು ಹಾಕಿ ಬಿಹಾರ ರಾಜ್ಯದ ಲಕ್ಷಾವಧಿ ಪಶುಗಳನ್ನು ಎಲುಬು ಗೂಡುಗಳನ್ನಾಗಿ ಪರಿವರ್ತಿಸಿ, ಕೆಚ್ಚಲುಗಳನ್ನು ಬರಡು ಮಾಡಿದ ಲಲ್ಲೂ ಪ್ರಸಾದ್ ಸರಕಾರದ ಕರುಣಾಜನಕ ಕಥೆ ಇಡೀ ದೇಶವನ್ನೇ ಗದ್ಗದಿತಗೊಳಿಸಿರುವ ಸಂಗತಿ ನಿಮಗೆಲ್ಲ ಗೊತ್ತು. ಜೆ.ಎಚ್.ಪಟೇಲ ಸರಕಾರದಲ್ಲಿ ಬಿಹಾರಕ್ಕಿಂತಲೂ ಹೀನಾಯವಾದ ಘಟನೆ ನಡೆದಿದೆ. ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೂರೈಸಲಾಗುವ ಪೌಷ್ಟಿಕ ಅಹಾರದ ಖರೀದಿ ಮತ್ತು ವಿತರಣೆಯಲ್ಲಿ 25 ಕೋಟಿ ರೂಗಳಷ್ಟು ಅವ್ಯವಹಾರ ನಡೆದಿದೆ. ಲಕ್ಷಾವಧಿ ಮುದ್ದು ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಕಣ್ಣೀರು ಕೋಡಿ ಹರಿಸುವಂತೆ ಮಾಡಿದೆ. ಇದರ ಕುರಿತು ಸಿಓಡಿ ತನಿಖೆ ನಡೆಸಬೇಕೆಂದು ಸಮಾಜ ಕಲ್ಯಾಣ ಮತ್ತು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಶಿಫಾರಸ್ಸು ಮಾಡಿದೆ. ಸಂಬಂಧ ಪಟ್ಟ ಮಂತ್ರಿಗಳು ಸಿಓಡಿ ತನಿಖೆಗೆ ಆದೇಶ ಮಾಡಿದ್ದಾರೆ. ಆದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತಿಲ್ಲಿಡಬೇಕೆಂಬ ಶಿಫಾರಸನ್ನು ಸರಕಾರ ಇನ್ನೂ ಒಪ್ಪಿಕೊಂಡಿಲ್ಲ. ಕೂಡಲೇ ಅವರನ್ನು ಅಮಾನತಿನಲ್ಲಿಟ್ಟು, ಶೀಘ್ರ ವಿಚಾರಣೆ ನಡೆಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಸರಕಾರವನ್ನು ಒತ್ತಾಯಿಸುತ್ತಿದೆ.

ರಾಜ್ಯದಲ್ಲಿ 185 ಸಮಗ್ರ ಬಾಲ ವಿಕಾಸ ಯೋಜನೆಯಡಿಯಲ್ಲಿ ನಡೆಸಲಾಗುತ್ತಿರುವ 39,985 ಅಂಗನವಾಡಿ ಕೇಂದ್ರಗಳಲ್ಲಿ 32,31,730 ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಆದರೆ ಕೆಲವು ದುಷ್ಟ ಅಧಿಕಾರಿಗಳು ಅಂಗನವಾಡಿ ಕೇಂದ್ರಗಳಲ್ಲಿ ಇರುವ ಫಲಾನುಭವಿಗಳ ಸಂಖ್ಯೆಯಲ್ಲಿ 8-10 ಪಟ್ಟು ಹೆಚ್ಚು ಹೆಸರುಗಳನ್ನು ತೋರಿಸಿ ಆಹಾರ ಧಾನ್ಯ ಪಡೆದು ಸರಕಾರದ ಹಣ ಲೂಟಿ ಮಾಡಿದ್ದಾರೆ. ಸಮಗ್ರ ಬಾಲವಿಕಾಸ ಯೋಜನೆಯ ಫಲಾನುಭವಿಗಳಿಗೆ ಸಕಾಲಕ್ಕೆ ನಿಗದಿತ ಪ್ರಮಾಣದಲ್ಲಿ ಪೌಷ್ಟಿಕ ಆಹಾರ ನಿರಾಕರಿಸಲಾಗಿದೆ. ಪೌಷ್ಟಿಕ ಆಹಾರ ಪೂರೈಕೆ ಗುತ್ತಿಗೆಪಡೆದ ಸಂಸ್ಥೆಗಳು ತಮಗೆ ಕೊಡಮಾಡಿದ ಇಂಡೆಂಟುಗಳನ್ನು ಬದಲಿಸಿ ರಿಯಾಯಿತಿ ದರದಲ್ಲಿ ಹೆಚ್ಚು ಸೋಡಿ ಪಡೆದು ಅದನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ತಾವು ಲಾಭ ಗಳಿಸಿದ್ದಾರೆ. ಹಾಗೆಯೇ ಸರಕಾರದ ನಿಗದಿ ಮಾಡಿದ ದರಕ್ಕಿಂತ ಹೆಚ್ಚಿನ ಬೆಲೆಯಲ್ಲಿ ಖರೀದಿ ಮಾಡಿ ಹಣ ಸಂಪಾದಿಸಿದ್ದಾರೆ.

ಈ ಪ್ರಕರಣ ಬಹಳ ಆಳವಾಗಿ ಬೇರೂರಿದಂತೆ ಕಂಡು ಬರುತ್ತಿದೆ. ವಿಧಾನ ಸಭಾ ವಿಷಯ ಸಮಿತಿಯವರು ಈ ಪ್ರಕರಣಕ್ಕೆ ಸಂಬಂಧಿಸಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಕೇಳಿದಾಗ ಉತ್ತರಿಸುವ ಸೌಜನ್ಯವನ್ನು ತೋರಿಸಿಲ್ಲ ಎಂಬ ಅಂಶ ಈ ಪ್ರಕರಣ ಎಷ್ಟು ಆಳವಾಗಿ ಬೇರೂರಿರಬೇಕು, ಇವರಿಗೆ ಈ ಭ್ರಷ್ಟಾಚಾರದಲ್ಲಿ ಮೇಲಟ್ಟದ ರಾಜಕೀಯ ಮುಖಂಡರ ಯಾವ ರೀತಿಯ ಬೆಂಬಲ ಇರಬೇಕೆಂಬುದನ್ನು ತೋರಿಸುತ್ತದೆ.


ಬಿಹಾರಿನ 700 ಕೋಟಿ, ಕರ್ನಾಟಕದ 25 ಕೋಟಿ ರೂಪಾಯಿಯ ಪ್ರಶ್ನೆ ಇದಲ್ಲ. ಇತ್ತೀಚಿಗಿನ ವರ್ಷಗಳಲ್ಲಿ ಬಂಡವಾಳಶಾಹಿ ಪಕ್ಷಗಳು ನಡೆಸುತ್ತಿರುವ ರಾಜ್ಯಗಳಲ್ಲಿ ರಾಜಕೀಯ ಮುಖಂಡರ ಆಶೀರ್ವಾದದಿಂದ ಎಂಥ ಹೀನಾಯ, ಕರುಳು ಕೊರೆಸುವಂತ ಭ್ರಷ್ಟಾಚಾರ ಚಟುವಟಿಕೆಗಳು ನಡೆಯುತ್ತಿವೆ, ಯಾವ ರೀತಿ ಮುದ್ದು ಮಕ್ಕಳ, ಬಾಣಂತಿಯರ, ಗರ್ಭಿಣಿಯರಿಗೆ, ದನಕರುಗಳಿಗೆ ಅಪಾರ ಅನ್ಯಾಯವೆಸಗಲಾಗುತ್ತಿದೆಂಬ ಅಂಶ ಬಹುಮುಖ್ಯ. ಇಂತ ಪ್ರಕರಣಗಳಿಗೆ ಪ್ರೋತ್ಸಾಹ ನೀಡುವ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಯಾವ ಶಿಕ್ಷೆ ನೀಡಬೇಕೆಂಬುದನ್ನು ಜನತೆ ನಿರ್ಧರಿಸಲಿ.

ಎನ್.ಕೆ.ಉಪಾಧ್ಯಾಯ

ಉಕ್ಕಿನ ಛಲದ ಮಹಾನ್ ದೇಶಪ್ರೇಮಿ ಕ್ರಾಂತಿಕಾರಿ ಸುಭಾಶ್

– ಸುರ್ಜಿತ್ ಶ್ರದ್ಧಾಂಜಲಿ

"ಸುಭಾಶ್ ಚಂದ್ರ ಬೋಸರು ಭಾರತದ ಜನತೆಗೆ ಸದಾ ಸ್ಮರಣೀಯರು. ಅವರ ಮಹಾನ್ ದೇಶಪ್ರೇಮ, ಅದಮ್ಯ ಧೈರ್ಯ, ನಿಸ್ವಾರ್ಥ ಸಮರ್ಪಣಾ ಭಾವ ಮತ್ತು ತನ್ನ ವಿಚಾರಗಳನ್ನು ಏನೇ ಅಡ್ಡಿ-ಆತಂಕ, ಅನಾರೋಗ್ಯ, ಅಪಾಯಗಳು ಬಂದರೂ ಲೆಕ್ಕಿಸದೆ ಕಾರ್ಯಾಚರಣೆಗಿಳಿಸಬೇಕೆಂಬ ಅವರ ಉಕ್ಕಿನ ಛಲವನ್ನು ಭಾರತದ ಜನತೆ ಎಂದೆಂದೂ ಸ್ಮರಿಸಿ ಕೊಳ್ಳುತ್ತಾರೆ. ಅವರಿಗೆ ಸ್ವಾತಂತ್ರ್ಯಕ್ಕಿಂತ ಅಮೂಲ್ಯವಾದುದು ಬೇರೇನೂ ಇರಲಿಲ್ಲ".



ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ನೇತಾಜಿಯವರ ಜನ್ಮಶತಾಬ್ದಿಯ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಾ ಹೋರಾಟಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಿದ್ದಾರೆ. ಪಕ್ಷದ ಕೇಂದ್ರ ಸಮಿತಿಯ ವಾರಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ"ಯಲ್ಲಿ ಈ ಬಗ್ಗೆ ಬರೆದ ಒಂದು ದೀರ್ಘ ಲೇಖನದಲ್ಲಿ ಸುಭಾಶ್ ಚಂದ್ರ ಬೋಸರು ಕಾಂಗ್ರೆಸ್ಸಿನ ಒಬ್ಬ ತೀವ್ರಗಾಮಿ ಮುಖಂಡರಾಗಿ ಮೂಡಿ ಬಂದು, ಕಾಂಗ್ರೆಸ್ಸೊಳಗೆ ಎಡ ವಿಚಾರಧಾರೆಯ ಪ್ರತೀಕವಾದ ಆಗಿನ ರಾಜಕೀಯ ಹಿನ್ನೆಲೆಯನ್ನು ವಿವರವಾಗಿ ಪರಿಶೀಲಿಸುತ್ತಾ 1921ರಲ್ಲಿ ಗಾಂಧೀಜಿ ಅಸಹಕಾರ ಆಂದೋಲನದ ಮೂಲಕ ಮೊತ್ತ ಮೊದಲಬಾರಿಗೆ ಕಾಂಗ್ರೆಸ್ ಪಕ್ಷದ ಇತಿಹಾಸ ಒಂದು ತೀವ್ರಗಾಮಿ ತಿರುವು ತಗೊಂಡಾಗ ರಾಜಕೀಯ ಪ್ರವೇಶಿಸಿದವರು ಸುಭಾಶರು ಎಂದು ಹೇಳುತ್ತಾರೆ.

ಕಾಂಗ್ರೆಸ್‌ನಲ್ಲಿ ಎಡಪಂಥೀಯ ಪ್ರವೃತ್ತಿಯ ಪ್ರತೀಕ

1928ರ ಡಿಸೆಂಬರ್‌ನಲ್ಲಿ ಕಲ್ಕತ್ತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಅದರಲ್ಲಿ ಮಂಡಿಸಿದ ಸಂಪೂರ್ಣ ಸ್ವಾತಂತ್ರ್ಯದ ಹೋರಾಟಕ್ಕೆ ಕರೆ ನೀಡುವ ನಿರ್ಣಯವನ್ನು ನೆಹರೂ, ಕಮ್ಯುನಿಸ್ಟರು, ಇತರ ಎಡಪಂಥೀಯರು ಬೆಂಬಲಿಸಿದರು. ಆ ಸಂದರ್ಭದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಕರೆ ನೀಡಬೇಕೆಂದು ಆಗ್ರಹಿಸಿ 50,000 ಮುಷ್ಕರ ನಿರತ ಕಾರ್ಮಿಕರು ಕಾಂಗ್ರೆಸ್ ಅಧಿವೇಶನ ನಡೆಯುತ್ತಿದ್ದ ಸ್ಥಳಕ್ಕೆ ಬಂದರು. ನಂತರ ಜನವರಿ 1929ರಲ್ಲಿ ಸೈಮನ್ ಆಯೋಗದ ವಿರುದ್ಧ ಕಲ್ಕತ್ತೆಯಲ್ಲಿ ಒಂದು ಲಕ್ಷ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ನಡೆಸಿ, ಕಪ್ಪುಬಾವುಟ ಪ್ರದರ್ಶಿಸಿದರು. ನೇತಾಜಿ ಇದರ ನೇತೃತ್ವ ವಹಿಸಿದ್ದರು. 1938ರಲ್ಲಿ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ಇದು ಕಾಂಗ್ರೆಸ್‌ನೊಳಗೆ ಎಡಶಕ್ತಿಗಳನ್ನು ಇನ್ನಷ್ಟು ಚುರುಕುಗೊಳಿಸಿತು. ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಕಾರ್ಮಿಕ ವರ್ಗ, ರೈತಾಪಿ ಜನಗಳು, ವಿದ್ಯಾರ್ಥಿ ಆಂದೋಲನಗಳು ಬೆಳೆಯುತ್ತಿರುವುದನ್ನು ಕಂಡು ಕಾಂಗ್ರೆಸ್‌ನೊಳಗಿನ ಬಲಪಂಥೀಯರು ಹೆದರಿ ಈ ಪ್ರವೃತ್ತಿಗೆ ತಡೆ ಹಾಕಲು ಯತ್ನಿಸಿದರು. 1939ರಲ್ಲಿ ಬೋಸರು ಮತ್ತೆ ಕಾಂಗ್ರೆಸ್ ಅಧ್ಯಕ್ಷರಾಗುವುದನ್ನುತಡೆಯಲು ಬಲಪಂಥೀಯರು ಶತ ಪ್ರಯತ್ನ ನಡೆಸಿದರು. ಆದರೂ ಪ್ರಯೋಜನವಾಗಲಿಲ್ಲ. ಗಾಂಧೀಜಿ ಪಟ್ಟಾಭಿ ಸೀತಾರಾಮಯ್ಯನವರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರೂ ಬೋಸರು ಅಧ್ಯಕ್ಷರಾಗಿ ಪುನರಾಯ್ಕೆಗೊಂಡರು. ಬಲಪಂಥೀಯರು ಇದನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಗಾಂಧೀಜಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಬೋಸರ ವಿರೋಧಿಗಳೇ ಹೆಚ್ಚಾಗಿ ಆಯ್ಕೆಯಾಗುವಂತೆ ಮಾಡಿ ಕಾಂಗ್ರೆಸ್ ಅಧ್ಯಕ್ಷರ ಚಟುವಟಿಕೆಗಳಲ್ಲಿ ಅಡ್ಡಿ-ಆತಂಕ ಹಾಕಲಾರಂಭಿಸಿದರು. ಸುಭಾಷರು ಕಾಂಗ್ರೆಸ್ ತ್ಯಜಿಸಲು ನಿರ್ಧರಿಸಿದರು. ಫಾರ್ವರ್ಡ್ ಬ್ಲಾಕ್ ಕಟ್ಟಿದರು. ಆ ಘಟ್ಟದಲ್ಲಿ ಕಾಂಗ್ರೆಸ್ ಸಂಘಟನೆಯಲ್ಲಿ ಒಡಕು ತಪ್ಪಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯಪಟ್ಟಿತ್ತು ಎಂದು ನೆನಪಿಸಿರುವ ಸುರ್ಜಿತ್ ಆದರೂ ಫಾರ್ವರ್ಡ್ ಬ್ಲಾಕ್‌ಗೆ ಕಾಂಗ್ರೆಸ್‌ನೊಳಗಿನ ಬಹಳಷ್ಟು ಎಡಪಂಥೀಯರ ಬೆಂಬಲವನ್ನು ಅಣಿನೆರೆಸಲು ಸಾಧ್ಯವಾಯಿತು ಎಂದು ತಮ್ಮ ಲೇಖನದಲ್ಲಿ ಬರೆದಿದ್ದಾರೆ.

ಎರಡನೇ ಮಹಾಯುದ್ಧ ಆರಂಭವಾದಾಗ ಒಂದೆಡೆ ಕಾಂಗ್ರೆಸ್‌ನಲ್ಲಿ ಗೊಂದಲ, ಆದರ ಮುಖಂಡತ್ವದ ಒಂದು ವಿಭಾಗ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ರಿಯಾಯಿತಿಗಳನ್ನು ಗಿಟ್ಟಿಸಲು ಅದೇ ಸುಸಮಯ ಎಂದು ಬಗೆದರೆ, ಕಮ್ಯುನಿಸ್ಟ್ ಪಕ್ಷ ಯುದ್ಧದ ಸ್ಥಿತಿಯನ್ನು ಬಳಸಿ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಕರೆ ನೀಡಿತು. ಬೋಸರು "ಶತ್ರುವಿನ ಶತ್ರು ಮಿತ್ರ" ಎಂಬ ನೀತಿಯನ್ನು ಅಂಗೀಕರಿಸಿ ಮಹಾಯುದ್ಧದಲ್ಲಿ ಬ್ರಿಟಿಷರ ವೈರಿಗಳಾದ ಜಪಾನ್-ಜರ್ಮನಿಯ ಫ್ಯಾಸಿಸ್ಟರಿಂದ ನೆರವು ಪಡೆದು ಸ್ವಾತಂತ್ರ್ಯ ಹೋರಾಟವನ್ನು ನಡೆಸಬೇಕು ಎಂಬ ಅಭಿಪ್ರಾಯದಿಂದ ಕಲ್ಕತ್ತೆಯಿಂದ ತಲೆಮರೆಸಿಕೊಂಡು ಜರ್ಮನಿಯಲ್ಲಿ ಹಿಟ್ಲರನನ್ನು ಭೇಟಿ ಮಾಡಿ ಅಲ್ಲಿಂದ ಜಪಾನಿಗೆ ತಲೆಮರೆಸಿಕೊಂಡೇ ಹೋಗಿ ಅಲ್ಲಿ 'ಆಝಾದ್ ಹಿಂದ್ ಸೇನೆ' ಕಟ್ಟಿದರು.

ಈ ನಡುವೆ ಹಿಟ್ಲರ್ ಮತ್ತಿತರ ಫ್ಯಾಸಿಸ್ಟ್ ಶಕ್ತಿಗಳು ಜಗತ್ತಿನ ಜನಗಳನ್ನು ದಮನ ಮಾಡಲಾರಂಭಿಸಿದಾಗ ಕಮ್ಯುನಿಸ್ಟರು ಫ್ಯಾಸಿಸಂ-ವಿರೋಧಿ ಸಂಯುಕ್ತ ರಂಗ ಕಟ್ಟಲು ಮುಂದಾದರು. ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಧಾಳಿ ಮಾಡಿದಾಗ ಮಹಾಯುದ್ಧದ ಸ್ವರೂಪವೇ ಬದಲಾಯಿತು. ಕಮ್ಯುನಿಸ್ಟ್ ಪಕ್ಷ ರಾಷ್ಟ್ರೀಯ ವಿಮೋಚನೆಯ ಹೋರಾಟಕ್ಕೂ ಫ್ಯಾಸಿಸಂ-ವಿರೋಧಿ ಹೋರಾಟಕ್ಕೂ ನಿಕಟ ಸಂಬಂಧವಿದೆಯೆಂದು ಫ್ಯಾಸಿಸಂ-ವಿರೋಧಿ ಹೋರಾಟಕ್ಕೆ ಒತ್ತು ನೀಡಿತು. ಆದರೆ ಬೋಸ್‌ರು ಫ್ಯಾಸಿಸ್ಟರು ಮತ್ತು ಸೋಶಲಿಸ್ಟರಲ್ಲಿ ಯಾವುದೇ ಭೇದ ಕಾಣಲಿಲ್ಲ. ಜಪಾನೀ ಫ್ಯಾಸಿಸ್ಟರ ನೆರವಿನಿಂದ ಬ್ರಿಟಿಷರನ್ನು ಭಾರತದಿಂದ ಹೊಡೆದೊಡಿಸುವ ತಮ್ಮ ಯೋಜನೆಯನ್ನು ಮುಂದುವರೆಸಿದರು. ಆದರೆ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಸೋಲಿನಿಂದ ಅವರ ಯೋಜನೆ ಈಡೇರಲಿಲ್ಲ. ಪುಟ 7 ನೋಡಿ

ಬೆನ್ನಮೂಳೆ ಮುರಿಸಿಕೊಂಡ ಈರುಳ್ಳಿ, ಹತ್ತಿ, ತೊಗರಿ, ಬಟಾಟೆ ಬೆಳೆಗಾರ

ಎನ್.ಕೆ.ಉಪಾಧ್ಯಾಯ

"ಇಂದು ಒಂದೆಡೆ ರೈತರು ವಾಣಿಜ್ಯ ಬೆಳೆಬೆಳೆಯಲು ಉತ್ತೇಜನದ ಮಾತನಾಡುವ ಸರಕಾರ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸದೆ ಅಲ್ಪಸ್ವಲ್ಪ ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆಯ ಕಲ್ಪಿಸದೆ, ಯೋಗ್ಯ ಬೆಲೆ ನೀಡದೆ ಎಲ್ಲಾ ರೈತರನ್ನು ಶೋಷಿಸುತ್ತಿದ್ದಾರೆಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಅವರು ಕರ್ನಾಟಕದ ಹತ್ತಿ ಬೆಳೆಗಾರರ ಸಮಾವೇಶದಲ್ಲಿ ಹೇಳಿದರು. ಆ ಸಮಯದಲ್ಲೇ "ಪ್ರಧಾನಿ ನಮಗೆ ಮೋಸ ಮಾಡಿದ" ತೊಗರಿಬೆಳೆಗೆ ನ್ಯಾಯಬೆಲೆ ಸಿಗಲಿ ಬಟಾಣೆಗೆ ಬೆಂಬಲಿತ ಬೆಲೆ ಸಿಗಲಿ ಎಂದು ಈರುಳ್ಳಿ, ಬಟಾಣೆ, ತೊಗರಿ, ಹತ್ತಿ ಬೆಳೆಯುವ ರೈತರು ಅಂಗಲಾಚಿ ಬೇಡುತ್ತಿರುವ ದೃಶ್ಯ ಕರುಣಾಜನಕವಾಗಿತ್ತು.

ಸಂಯುಕ್ತರಂಗ ಸರಕಾರದ ಮುಂದೆ 13 ಪಕ್ಷಗಳು ಒಮ್ಮತದಿಂದ ತಯಾರಿಸಿ ಸಂಯುಕ್ತರಂಗ ಸರಕಾರ ಅನುಷ್ಠಾನದಲ್ಲಿ ತರಬೇಕೆಂದಿರುವ ಸರ್ವಸಮ್ಮತ ಕನಿಷ್ಠ ಕಾರ್ಯಕ್ರಮ ರೈತರ ಹಿತರಕ್ಷಣೆಗೆ ಅಡ್ಡ ಬರುತ್ತಿರುವ ನಿಯಮಗಳನ್ನೂ ಕಾನೂನುಗಳನ್ನು ತೆಗೆದು ಹಾಕಿ ರೈತ ಸಮುದಾಯಕ್ಕೆ ಹಿತಕರವಾದ ಲಾಭದಾಯಕವಾದ ನೀತಿಯನ್ನು ಅನುಸರಿಸಲಾಗುವುದೆಂದು ಹೇಳಿದೆ. ಆದರೆ ಮಣ್ಣಿನಮಗ ಸಂಯುಕ್ತರಂಗದ ಪ್ರಧಾನಮಂತ್ರಿ ಈ ಆದೇಶವನ್ನು ಮರೆತಂತೆ ಕಂಡುಬರುತ್ತದೆ.

ಈರುಳ್ಳಿ ಬೆಳೆಗಾರರ ಬವಣೆಯನ್ನು ಕಣ್ಣೀರ ಹೊಳೆಯಲ್ಲಿ ತೊಳೆಯುವಂತೆ ಮಾಡಿದ್ದಾರೆ ದೇವೇಗೌಡರು. ಹಾಸನದಲ್ಲಿ ಮುಖ್ಯವಾಗಿ ಬಟಾಣಿ ಬೆಳೆಯುತ್ತಾರೆ, ಈರುಳ್ಳಿ ರಾಜ್ಯದ ಧಾರವಾಡ, ಬಿಜಾಪುರ, ರಾಯಚೂರು, ಗುಲ್ಬರ್ಗ, ಚಿತ್ರದುರ್ಗ, ಬೆಳಗಾವಿ ಜಿಲ್ಲೆಗಳಲ್ಲಿ ಬೆಳೆಯುತ್ತದೆ. ತೊಗರಿ ಗುಲ್ಬರ್ಗ, ಬಿಜಾಪುರ, ಮತ್ತಿತರ ಪ್ರದೇಶದಲ್ಲಿ ಬೆಳೆಯುತ್ತದೆ. ಹತ್ತಿ ಬಿಜಾಪುರ ಧಾರವಾಡ ರಾಯಚೂರು, ಮೊದಲಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ತೊಗರಿ ಬೆಲೆ ಬಿಟ್ಟು ಇತರೆ ಬೆಳೆಗಳೆಲ್ಲಾ ವಾಣಿಜ್ಯ ಬೆಳೆಗಳಾಗಿ ಪರಿವರ್ತನೆಗೊಂಡು ವಿದೇಶಿ ಮಾರ್ಕೆಟಿನತ್ತ ಗಮನ ಹರಿಸಿವೆ. ನೀರಿನ ಮೇಲೆ ಅವಲಂಬಿಸಿರುವ ಈ ಬೆಳೆಗಳು ಪ್ರತಿ ವರ್ಷ ಏರುಪೇರು ಆಗುತ್ತವೆ. ಹೀಗಾಗಿ ಸರಕಾರ ಈ ಬೆಳೆಗಳ ಕುರಿತು ನಿರ್ದಿಷ್ಟ ಧೋರಣೆ ಅನುಸರಿಸುವುದು ಅತ್ಯಗತ್ಯವಾದುದು. ಬಂಡವಾಳಶಾಹಿಗಳು ಭೂಮಾಲಿ ಕರ ಒತ್ತಡಗಳಿಗೆ ಮಣಿದು ಸರಕಾರ ಈ ನಿಟ್ಟಿನಲ್ಲಿ ತನ್ನ ಅಸಾಮರ್ಥ್ಯ ಪ್ರದರ್ಶಿಸುತ್ತಿದೆ.

ರಾಜ್ಯದಲ್ಲಿ ಬಟಾಣಿ ಮತ್ತು ಈರುಳ್ಳಿ ಉತ್ಪಾದನೆಯು ಹೆಚ್ಚಳದಿಂದ ಧಾರಣೆ ಕುಸಿಯುತ್ತಿರುವುದನ್ನು ಪ್ರಧಾನ ಮಂತ್ರಿ ದೇವೇಗೌಡರ ಗಮನಕ್ಕೆ ತಂದಾಗ ಈ ಉತ್ಪನ್ನಗಳ ಖರೀದಿಗೆ ಕೇಂದ್ರ ನಾಲ್ಕು ಕೋಟಿ ರೂ. ಗಳನ್ನು ನೀಡುವ ಆಶ್ವಾಸನೆ ನೀಡಿದರು. ಆದರೆ ತಮ್ಮದಾದ ಹಾಸನದ ರೈತರು ಬೆಳೆದ ಬಟಾಣಿ ಖರೀದಿಗಷ್ಟೇ ಈ ಖರ್ಚುಮಾಡಿ ಈರುಳ್ಳಿ ಬೆಳೆಗಾರರನ್ನು ಕರುಣಾಜನಕ ಸ್ಥಿತಿಗೆ ದೂಡಿದ್ದಾರೆ. ಸರಕಾರ ಒಂದೇ ಒಂದು ಮೂಟೆ ಈರುಳ್ಳಿಯನ್ನೂ ಕೊಳ್ಳಲಿಲ್ಲ. ಹೋದವರ್ಷ ರೈತರು ಘೇರಾವ್ ನಡೆಸಿದಾಗ ಈರುಳ್ಳಿ ಕೊಳ್ಳಲು ಹುಬ್ಬಳ್ಳಿಯಲ್ಲೂ ಖರೀದಿ ಕೇಂದ್ರ ಸ್ಥಾಪಿಸುವ ಆಶ್ವಾಸನೆ ನೀಡಲಾಗಿತ್ತು. ಅದು ಹುಸಿಯಾಗಿದೆ. ಸಾಮಾನ್ಯವಾಗಿ ಕ್ವಿಂಟಾಲ್‌ಗೆ ರೂ 600 ರಿಂದ ರೂ 750ರ ವರೆಗೆ ಮಾರಾಟವಾಗುತ್ತಿದ್ದ ಈರುಳ್ಳಿ ಧಾರಣೆ ಈ ವರ್ಷ ರೂ 150 ರಿಂದ 200 ರೂ ಗಿಳಿದಿದೆ. ರಾಣಿಬೆನ್ನೂರಿನ ರೈತ ಕನಿಷ್ಟ ರೂ 500 ಸಿಗಬಹುದೆಂಬ ಆಸೆ ಹೊಂದಿದ್ದು ಕೊನೆಗೆ ಕ್ವಿಂಟಾಲಿಗೆ ರೂ 180 ರಂತೆ ಮಾರಿ ಸಾಗಾಣಿಕೆ ಖರ್ಚು 6000 ರೂ ಕೊಟ್ಟು ಬರಿಗೈಯಲ್ಲಿ ಮರಳಿದ. ಉಳಿದ ಕೆಲವರು 50 ರೂಗೆ ತಮ್ಮ ಈರುಳ್ಳಿ ಮಾರಾಟ ಮಾಡಿ ಕಣ್ಣೀರಲ್ಲಿ ಕೈತೊಳೆದುಕೊಂಡು ವಾಪಸ್ಸಾಗಬೇಕಾಯಿತು, ಈ ದೃಶ್ಯ ದೇವೇಗೌಡರ ಕಣ್ಣಿಗೆ ಬಿದ್ದಿರಲಿಕ್ಕಿಲ್ಲ.

ಕೆಲವು ವರ್ಷಗಳ ಹಿಂದೆ ಕರ್ನಾಟಕ ಪ್ರಾಂತ ರೈತ ಸಂಘ ಈರುಳ್ಳಿ ಬೆಳೆಗೆ ಬೆಲೆ ನಿಗದಿಮಾಡುವುದಷ್ಟೇ ಅಲ್ಲಿ ಅದು ಮಾರಾಟವಾಗದೆ ಕೊಳೆಯುವುದನ್ನು ತಡೆಯಲು ಶೀಥಿಲ ಗೊಡಾನುಗಳನ್ನು ನಿರ್ಮಿಸಬೇಕೆಂದೂ ಅವುಗಳನ್ನು ಒಣಗಿಸುವ ಹಾಗೂ ರಫ್ತುಮಾಡುವ ಅವಕಾಶ ಒದಗಿಸಬೇಕೆಂದೂ ಒತ್ತಾಯ ಮಾಡಿತ್ತು. ಮಲೇಶ್ಯಾ, ಶ್ರೀಲಂಕಾ, ಸಿಂಗಾಪುರ ಮೊದಲಾದ ದೇಶಗಳಿಗೆ ಈರುಳ್ಳಿ ರಫ್ತು ಮಾಡಲು ಅವಕಾಶವಿದೆ. ರಫ್ತಿಗೆ ವ್ಯವಸ್ಥೆ ಮಾಡುವ ಭರವಸೆಯನ್ನೂ ಸರಕಾರ ನೀಡಿತ್ತು. ಮೂರು ವರ್ಷಗಳ ಹಿಂದೆ ಖಾಸಗಿ ಕಂಪನಿಗಳ ಮೂಲಕ ರಫ್ತಿಗೆ ಅವಕಾಶಮಾಡಿ ಕೊಟ್ಟಾಗ ಕ್ವಿಂಟಾಲ್‌ಗೆ ರೂ 1000 ಏರಿತ್ತು. ಆದರೆ ಸರಕಾರ ಅದಕ್ಕೆ ಪ್ರತಿಬಂಧ ಹಾಕಿರುವ ಕಾರಣ ಈಗ ಬೆಲೆ ಕುಸಿದಿದೆ. ಸಾರ್ವಜನಿಕರಿಂದಲೂ ತಕರಾರು ಬಾರದ ರೀತಿಯಲ್ಲಿ ಈರುಳ್ಳಿ ಬೆಲೆ ನಿರ್ಧರಿಸಿ, ಹೆಚ್ಚಿನ ಈ ಈರುಳ್ಳಿಯನ್ನು ರಫ್ತು ಮಾಡಲು ಅವಕಾಶಮಾಡಿಕೊಟ್ಟರೆ ರೈತನಿಗೆ ಲಾಭವಾಗಲು ಸಾಧ್ಯ.

ಈರುಳ್ಳಿಯಂತೆಯೇ ಹತ್ತಿ ಬೆಳೆಗಾರರ ಪರಿಸ್ಥಿತಿಯೂ ಗಂಭೀರವಾಗಿದೆ. ಬೀಜ, ಕ್ರಿಮಿನಾಶಕ ಗೊಬ್ಬರಗಳ ಬೆಲೆ ಹೆಚ್ಚಿದೆ. ಆದ ಕಾರಣ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ (ಹತ್ತಿ ಕೊಂಡುಕೊಳ್ಳುವ ಸರಕಾರಿ ಸಂಸ್ಥೆ) ಕ್ವಿಂಟಾಲ್‌ಗೆ ರೂ 2500 ರಂತೆ ಕೊಂಡುಕೊಂಡರೆ ಮಾರ್ಕೆಟಿನಲ್ಲಿಯೂ ಆದರ ಬೆಲೆ ಹೆಚ್ಚುತ್ತದೆಂದು ರೈತ ಸಂಘದ ಬೇಡಿಕೆ. ಬಡ ಮಧ್ಯಮ ವರ್ಗದ ರೈತರೇ ಹೆಚ್ಚಾಗಿ ಹತ್ತಿ ಬೆಳೆಯುತ್ತಿರುವುದರಿಂದ ಹತ್ತಿ ಬೆಲೆಯ ಕುಸಿತ ರೈತರನ್ನು ಕಂಗಾಲುಗೊಳಿಸಿದೆ. 1995-96 ರಲ್ಲಿ ದೇಶದಲ್ಲಿ 156 ಲಕ್ಷ ಬೇಲ್ ಹತ್ತಿ ಬೆಳೆದಿತ್ತು. ಹಿಂದಿನ ವರ್ಷದ 35 ಲಕ್ಷ ಬೇಲ್ ಉಳಿದಿತ್ತು. ವಿಶೇಷ ಗುಣದ ಒಂದು ಲಕ್ಷ ಬೇಲ್ ಹತ್ತಿಯನ್ನು ಸರಕಾರ ಆಮದು ಮಾಡಿತ್ತು. ಹೀಗೆ ಒಟ್ಟು 192 ಬೇಲ್ ಹೋದ ವರ್ಷ ನಮ್ಮಲ್ಲಿತ್ತು. ಇದರ ಪೈಕಿ 132 ಲಕ್ಷ ಬೇಲ್ ನೂಲಿನ ಗಿರಣಿಗಳಿಗೆ ಖರ್ಚಾಗಿತ್ತು. 16 ಲಕ್ಷ ಬೇಲ್ ಗಿರಣಿ ಇತರ ಅಂದರೆ ದಾವಾಖಾನೆಗಳಿಗೆ, ಗೃಹ ಮತ್ತಿತರ ಕೆಲಸಗಳಿಗೆ ಖರ್ಚಾಗಿತ್ತು. ಹೋದ ವರ್ಷ 15 ಲಕ್ಷ ಬೇಲ್ ರಫ್ತು ಮಾಡುವ ಆಶ್ವಾಸನೆ ನೀಡಿ ಕೇಂದ್ರ ಸರಕಾರ 2.3 ಲಕ್ಷ ಬೇಲ್ ಹತ್ತಿ ರಫ್ತು ಮಾಡಿತ್ತು. ಹೀಗೆ ಹೋದ ವರ್ಷ ಒಟ್ಟು 157 ಬೇಲ್ ಹತ್ತಿ ಮಾತ್ರ ಖರ್ಚಾಗಿತ್ತು. 35 ಲಕ್ಷ ಬೇಲ್ ಹತ್ತಿ ಈ ವರ್ಷಕ್ಕೆ ಬಾಕಿ ಉಳಿದಿದೆ.

ಈ ವರ್ಷ 165 ಲಕ್ಷ ಬೇಲ್ ಬೆಲೆ ಅಂದಾಜು ಮಾಡಲಾಗಿದೆ. ಈ ವರ್ಷದಲ್ಲಿ ನೂಲಿನ ಗಿರಣಿಗಳಿಗೆ 134 ಬೇಲ್ ಹತ್ತಿ ಬೇಕಾಗಬಹುದು. ಇತರೇ ಕೆಲಸಗಳಿಗೆ 16 ಲಕ್ಷ ಮಾತ್ರ ಗಿರಣಿಗಳು ಸರ್ವಸಾಧಾರಣ 25 ರಿಂದ 27 ಲಕ್ಷ ಬೇಲ್ ಹತ್ತಿಯನ್ನು ತಮ್ಮಲ್ಲಿ ಸಂಗ್ರಹಿಸಿಡುವ ಪರಿಪಾಠವಿದೆ. ಹೀಗಾಗಿ ಈ ವರ್ಷ ದೇಶದಲ್ಲಿ 175 ರಿಂದ 177 ಲಕ್ಷ ಬೇಲ್ ಮಾತ್ರ ಖರ್ಚಾಗಿ 23 ರಿಂದ 25 ಲಕ್ಷ ಬೇಲ್ ಹತ್ತಿ ರಫ್ತಿಗೆ ಸಿಗುತ್ತದೆ. ಇಂಡೊನೇಶಿಯಾ, ತೈವಾನ್, ದಕ್ಷಿಣ ಕೊರಿಯಾಗಳು ಮುಖ್ಯ ವಾಗಿ ಹತ್ತಿ ಆಮದು ಮಾಡಿಕೊಳ್ಳುತ್ತಿವೆ. ಜನವರಿಯಿಂದ ಮಾರ್ಚ್ ತಿಂಗಳವರೆಗೆ ಈ ದೇಶಗಳಲ್ಲಿ ಬೇಡಿಕೆ ಹೆಚ್ಚಿರುತ್ತದೆ. ಹತ್ತಿಯ ರಫ್ತಿನಿಂದ ವಿದೇಶಿ ವಿನಿಮಯ ಗಳಿಸಬಹುದು. ಬಡ ರೈತರಿಗೆ ಸಹಾಯ ವಾಗಬಹುದು. ಪ್ರತಿ ವರ್ಷ ಇಂತಿಷ್ಟು ಬೇಲ್ ಮಾರಾಟ ಮಾಡುತ್ತೇವೆಂಬ ದೃಢ ನಿಲುಮೆ ಕೇಂದ್ರ ಸರಕಾರಕ್ಕೆ ಅಗತ್ಯವಾಗಿ ಬೇಕಾಗಿದೆ. ಅಂತಹ ನಿಲುಮೆ ಸರಕಾರಕ್ಕಿಲ್ಲ. ಹಿಂದೆ ಲೋಕಸಭೆ ನೇಮಿಸಿದ ಚೊಕ್ಕರಾವ್ ಕಮಿಟಿ ಕನಿಷ್ಟ 5 ಲಕ್ಷ ಬೇಲ್ ಹತ್ತಿಯನ್ನಾದರೂ ರಫ್ತು ಮಾಡಬೇಕೆಂದು ಹೇಳಿದ್ದರೂ ಸರಕಾರ ಅದರತ್ತ ಗಮನ ಹರಿಸಿಲ್ಲ. ವಿದೇಶದಲ್ಲಿ 1 ಕ್ವಿಂಟಲ್ ಹತ್ತಿಯ ಬೆಲೆ ರೂ 6900, ನಮ್ಮಲ್ಲಿ ರೂ 1800 ಕ್ಕೂ ಕಡಿಮೆ. ಅದು ಆಂತರಿಕ ಮಾರುಕಟ್ಟೆಯನ್ನು ಹೊಂದಿದೆ. ಸರಕಾರ ಅದರ ಕುರಿತು ತಲೆಕೆಡಿಸಿಕೊಳ್ಳುತ್ತಿಲ್ಲ.' ಶ್ರೀಮಂತ ವರ್ಗದ ಕೆಲವು ರೈತರು ಹತ್ತಿ ರಫ್ತು ಮಾಡಲು ಜಪಾನ್ ಜನರಲ್ ಲೈಸೆನ್ಸ್ ಅವಕಾಶ ಬೇಡುತ್ತಿದ್ದಾರೆ. ಆದರೆ ಆ ರೀತಿಯ ರಫ್ತು ಆಧಾರಿತ ಬೇಸಾಯ ಸಿರಿವಂತ ರೈತರಿಗಷ್ಟೇ ಲಾಭದಾಯಕವಾಗಬಹುದು. ಹಾಗೆಯೇ ನೂಲು ಗಿರಣಿಯು, ಜನ್ನಿಂಗ್, ಪ್ರೆಸ್ಸಿಂಗ್ ಕಾರ್ಖಾನೆಗಳಿಗೆ ಲಾಭದಾಯಕ ವಾಗಬಹುದು. ಅಷ್ಟೇ ಅಲ್ಲದೆ ಆ ರೀತಿ ಯಾವ ಅಡೆತಡೆ ಇಲ್ಲದೆ ರಫ್ತು ಮಾಡುವುದರಿಂದ ನೂಲಿನ ಗಿರಣಿಗಳ ಮೇಲೂ ಪರಿಣಾಮವಾಗಬಹುದು. ಭಾರತದಲ್ಲಿ ಹತ್ತಿ ಬೆಳೆಗಾರರು ಮತ್ತೊಂದು ಸಮಸ್ಯೆ ಯನ್ನೆದುರಿಸುತ್ತಿದ್ದಾರೆ. ಇಲ್ಲಿ ಒಂದು ಹೆಕ್ಟೇರಿಗೆ 390 ಕೇಜಿ ಹತ್ತಿ ಬೆಳೆಯುತ್ತಿದೆ. ಜಗತ್ತಿನ ಸರಾಸರಿ 60.3 ಕೇಜಿ. ಆಸ್ಟ್ರೇಲಿಯಾದಲ್ಲಿ ಹೆಕ್ಟೇರಿಗೆ 1046 ಕೇಜಿ, ಇಸ್ರೇಲ್‌ನಲ್ಲಿ 1790 ಕೇಜಿ. ಸಣ್ಣ ಮತ್ತು ಮಧ್ಯಮ ರೈತರಿಗೆ ಲಾಭವಾಗಬೇಕಾದರೆ ಬೆಳೆ ಕ್ಷೇತ್ರ ಹೆಚ್ಚಿಸುವ ಬದಲಾಗಿ ಉತ್ಪನ್ನ ಹೆಚ್ಚಿಸಿಕೊಳ್ಳಬೇಕು. ನೀರಾವರಿಯ ಅಭಾವ, ಕೆಳ ಮಟ್ಟದ ಬೀಜ, ರೋಗಾಣುಗಳ ನಿರಂತರ ಆಕ್ರಮಣ, ಕೆಳಮಟ್ಟದ ಗೊಬ್ಬರ ಹಾಗೆಯೇ ಹವಾಮಾನದ ಬದಲಾವಣೆಗಳು ನಮ್ಮ ರೈತರ ಉತ್ಪನ್ನ ಕಡಿಮೆಯಾಗಲು ಮುಖ್ಯ ಕಾರಣ.

ಈರುಳ್ಳಿ, ಬಟಾಟೆ, ಹತ್ತಿ ಬೆಳೆಗಾರರ ಸಮಸ್ಯೆಗಳಿಂದ ಒಂದೇ ತರ ಉತ್ಪನ್ನ ಹೆಚ್ಚಾಗಬೇಕು. ರಫ್ತಿಗೆ ಅವಕಾಶಬೇಕು. ನ್ಯಾಯಬೆಲೆ ಸಿಗಬೇಕು. ನಾಗರೀಕರಿಗೂ ಅನ್ಯಾಯವಾಗದ ರೀತಿಯಲ್ಲಿ ಅವುಗಳು ಲಭ್ಯವಾಗಬೇಕು. ರೈತರಿಗೆ ಬೆಲೆಯ ಏರುಪೇರುಗಳಿಂದ ರಕ್ಷಣೆ ಸಿಗಬೇಕು.

ಸಂಯುಕ್ತ ರಂಗದ ಕನಿಷ್ಠ ಕಾರ್ಯಕ್ರಮ ರೈತರ ಪರ ನೀತಿಗಳನ್ನು ರೂಪಿಸಿದೆ. ಅದರಂತೆ ಕೇಂದ್ರ - ರಾಜ್ಯಗಳು ವರ್ತಿಸಿ ಹತ್ತಿ, ಈರುಳ್ಳಿ, ಬಟಾಟೆ ಬೆಳೆಗಾರರಿಗೆ ರಕ್ಷಣೆ ನೀಡಬೇಕು.

ರಣಹದ್ದುಗಳು ಬೇಟೆಯಾಡಲೊಂದು ನೀತಿ!

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಇಂತಹದ್ದನ್ನು ಯಾರಾದರೂ ಮಾಡಲು ಸಾಧ್ಯವೇ? ಎಂದು ಕೇಳಬೇಡಿ. ಸಂಯುಕ್ತ ರಂಗ ಸರಕಾರ ಅಂತಹದ್ದನ್ನೇ ಮಾಡಿದೆ. ಹೇಗೆ ಎಂದರೆ ಸಾಮ್ರಾಜ್ಯಶಾಹಿ ಬೇಟೆಗಾರರು ಭಾರತದಲ್ಲಿ ಹಣ ಹೂಡಲು ಅದು ನೀತಿ(ಅನೀತಿ?) ಸಂಹಿತೆ ರೂಪಿಸಿದೆ. ಇದು ರಣಹದ್ದುಗಳ ಹಾರಾಟಕ್ಕೆ, ಬೇಟೆಗೆ ನೀತಿ ಸಂಹಿತೆ ರೂಪಿಸಿದಂತೆ. ಯಾಕೆಂದರೆ ಮೂರನೇ ಜಗತ್ತಿನ ದೇಶಗಳಲ್ಲಿ ಇರುವ ಕಾನೂನುಗಳನ್ನೆಲ್ಲ ಮುರಿದು ತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲಿ ನಿಷ್ಣಾತರು. ಯಾವುದೇ ಕಾನೂನು, ನೀತಿ ಸಂಹಿತೆ ಅವರಿಗೆ ಲಾಗುವಾಗದು. ನಿಯಮಗಳ ಸಡಲಿಕೆ ಅವರಿಗೆ ಇನ್ನೂ ನಿರಾಳವಾಗಿ ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ.

ವಿದೇಶೀ ಹಣ ಹೂಡಿಕೆಗೆ ಸಡಿಲಿಸಿದ ಮುಖ್ಯ ನಿಯಮಗಳು ಕೆಳಗಿವೆ.

- ವಿದೇಶೀ ಹೂಡಿಕೆದಾರ ಎಲ್ಲಿ ಭಾರತೀಯ ಭಾಗಿದಾರನನ್ನು ಗುರುತಿಸಲು ಸಾಧ್ಯವಾಗುವುದಿಲ್ಲವೋ ಅಲ್ಲಿ ಆತ 'ತಾತ್ಕಾಲಿಕ'ವಾಗಿ ಪೂರ್ಣ ಪ್ರಮಾಣದ ಅಂದರೆ ಶೇ. 100ರಷ್ಟು ಹೂಡಿಕೆ ಮಾಡಬಹುದು. ಮೂರರಿಂದ ಐದು ವರ್ಷಗಳೊಳಗೆ ಈತ ವಿದೇಶೀ ಹೂಡಿಕೆದಾರ ಶೇ. 26ರಷ್ಟು ಹೂಡಿಕೆಯನ್ನು ಭಾರತೀಯ ವ್ಯಕ್ತಿಗೆ ಮಾರಬೇಕು.
- ಭಾರತೀಯ ಹೂಡಿಕೆದಾರ ಹಣ ಹೂಡಲು ಶಕ್ತನಲ್ಲದಿದ್ದಲ್ಲಿ ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿ ವಿದೇಶೀ ಹೂಡಿಕೆದಾರನಿಗೆ ಶೇ 100 ರಷ್ಟು ಬಂಡವಾಳ ಹೂಡಲು ಅನುಮತಿ ನೀಡಬಹುದು.
- ಹೋಲ್ಡಿಂಗ್ ಕಂಪನಿಯಾದರೆ ಪೂರ್ತಿ ವಿದೇಶೀ ಮಾಲಿಕತ್ವ ಸಿಂಧು. ಬೇರೆ ಚಟುವಟಿಕೆಗಳಿಗೆ ಮಾತ್ರ ಅನುಮತಿ ಅಗತ್ಯ.
- ತಂತ್ರಜ್ಞಾನದ ಪೂರ್ಣ ಹಕ್ಕು ಇರುವಲ್ಲಿ ಪೂರ್ತಿ ವಿದೇಶಿ ಬಂಡವಾಳ ಇರಬಹುದು.
- ಅಂತರ್ರಚನಾ ಸೌಕರ್ಯಗಳು ಮತ್ತು ಸೇವಾ ಸೌಕರ್ಯಗಳಲ್ಲಿ ವಿದೇಶೀ ನೇರ ಹೂಡಿಕೆಯನ್ನು ಮಾತ್ರ ಮಿತಿ ನಿರ್ಧರಿಸಲು ತೆಗೆದುಕೊಳ್ಳಲಾಗುವುದು.

ಇವೆಲ್ಲ ಇನ್ನೂ ನಿಬಂಧನೆಗಳನ್ನು ಉಳಿಸುವಂತೆ ಕಾಣಬಹುದು. ಆದರೆ ನಿಜದಲ್ಲಿ ವಿದೇಶೀ ಹೂಡಿಕೆದಾರರು ನಮ್ಮ ಮಾರುಕಟ್ಟೆಗೆ ಬಂದು ನಮ್ಮ ಜನರ ಬೇಟೆಯಾಡಲು ಅನುಕೂಲ ಮಾಡಿಕೊಡುವ ಕ್ರಮಗಳು.

ಸ್ಥಳೀಯ ಪ್ರದೇಶ ಬ್ಯಾಂಕುಗಳು ಬೇಡವೆಂದು ನಂಜುಂಡಪ್ಪ

ಕೇಂದ್ರ ಸರಕಾರ ಮತ್ತು ಭಾರತೀಯ ರಿಸರ್ವ್‌ಬ್ಯಾಂಕ್, ಸ್ಥಳೀಯಪ್ರದೇಶಬ್ಯಾಂಕುಗಳನ್ನು(ಲೋಕಲ್ ಏರಿಯಾ ಬ್ಯಾಂಕ್) ತೆರೆಯಲು ಅನುಮತಿ ನೀಡಿರುವುದನ್ನು ಕರ್ನಾಟಕ ರಾಜ್ಯದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಡಾ|| ಡಿ.ಎಂ.ನಂಜುಂಡಪ್ಪ ಟೀಕಿಸಿದ್ದಾರೆ.

ಅವರ ಪ್ರಕಾರ ಇಂತಹ ಪ್ರಾದೇಶಿಕ ಬ್ಯಾಂಕುಗಳು ಗ್ರಾಮೀಣ ಬ್ಯಾಂಕುಗಳ ಲಾಭದಾಯಕತೆಯನ್ನು ಪೂರ್ಣ ಹಾಳುಗೆಡುವುತ್ತವೆ. ಈ ಗ್ರಾಮೀಣ ಬ್ಯಾಂಕುಗಳನ್ನು ಸಮರ್ಥಗೊಳಿಸಬೇಕಾದ ಅವಶ್ಯಕತೆ ಇರುವಾಗ ಈ ಬ್ಯಾಂಕುಗಳ ಬುಡಕ್ಕೇ ಕೊಡಲಿ ಏಟು ನೀಡುವ ಕ್ರಮವನ್ನು ಕೇಂದ್ರ ಸರಕಾರ ಕೈಗೊಂಡಿರುವುದನ್ನು ಅವರು ಟೀಕಿಸಿದ್ದಾರೆ.

ಇಂತಹ ನಿರ್ಧಾರ ತೆಗೆದು ಕೊಳ್ಳುವಾಗ ಭಾರತೀಯ ರಿಸರ್ವ್ ಬ್ಯಾಂಕ್ ಗ್ರಾಮೀಣ ಬ್ಯಾಂಕುಗಳ ಬಗೆಗಿನ ಸ್ಥಾಯಿ ಸಮಿತಿಯ ಅಭಿಪ್ರಾಯವನ್ನು ಪಡೆದಿಲ್ಲ ಎಂದಿದ್ದಾರೆ.

ಉದಾರೀಕರಣದ ಹೆಸರಿನಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಹಣ ಹರಿದು ಬರದಂತೆ ಮಾಡುವ ಒಂದು ಕ್ರಮ ಇದಲ್ಲವೇ?

ಬೊಫೋರ್ಸ್ ಭೂತ ಬಯಲಿಗೆ ಬರಲಿದೆ

ಹಿಂದೆಲ್ಲೊ ಕೇಳಿದ ಶಬ್ದವಿದ್ದಂತೆ ಇದೆಯಲ್ಲವೇ? ಹೌದು ಬೋಫೋರ್ಸ್ ಎಂಬುದು ರಾಜೀವ್ ಗಾಂಧಿ ಎಂಬ ಸುಂದರಾಂಗ ಪ್ರಧಾನ ಮಂತ್ರಿಯಾಗಿದ್ದಾಗ ನಡೆದ ಭ್ರಷ್ಟಾಚಾರದ ಕರ್ಮಕಾಂಡದ ಹೆಸರು. ಹೊವಿಟ್ಜರ್ ಫಿರಂಗಿಯನ್ನು ಖರೀದಿಸುವಾಗ ಬೋಫೋರ್ಸ್ ಕಂಪನಿಯಿಂದ ಭಾರತದ ಕೆಲವರು ಲಂಚ ಪಡೆದರು ಎಂಬುದು ಆಗ ಬಹುದೊಡ್ಡ ಸುದ್ದಿಯಾಗಿತ್ತಲ್ಲವೇ? 1989ರಲ್ಲಿ ಕಾಂಗ್ರೆಸ್ ಸೋತು ವಿ.ಪಿ.ಸಿಂಗ್‌ರ ಸರಕಾರ ಆಡಳಿತಕ್ಕೆ ಬರಲೂ ಈ ಹಗರಣ ಕಾರಣವಾಗಿತ್ತು. ನಂತರ ಈ ಹಗರಣದ ತನಿಖೆ ಕುಂಟುತ್ತ ನಡೆದಿತ್ತು. ಹಲವು ತೊಡಕುಗಳನ್ನು ಒಡ್ಡಲಾಗಿತ್ತು. ಎಲ್ಲಕ್ಕೂ ಮುಖ್ಯವಾಗಿ ಸ್ವಿಟ್ಜರ್‌ಲ್ಯಾಂಡ್ ಬ್ಯಾಂಕುಗಳ ದಾಖಲೆ ದೊರೆತಿರಲಿಲ್ಲ. ಅಲ್ಲಿನ(ಭ್ರಷ್ಟರಕ್ಷಕ?) ಕಾನೂನುಗಳಿಂದಾಗಿ ಈ ತೊಡಕು ಉದ್ಭವಿಸಿತ್ತು.

ಸಿಬಿಐನ ಪ್ರಯತ್ನದ ಫಲವಾಗಿ ಈಗ ಈ ದಾಖಲೆ ಪತ್ರಗಳನ್ನು ಸಿಬಿಐಗೆ ಸ್ವಿಟ್ಜರ್‌ಲ್ಯಾಂಡಿನ ಸರಕಾರ ಒಪ್ಪಿಸಿದೆ. ಸಾವಿರ ಪುಟಗಳಷ್ಟಿರುವ ಈ ದಾಖಲೆ ಪತ್ರಗಳಿಂದ ಬೋಫೋರ್ಸ್‌ನ ಒಗಟು ಬಯಲಾಗುವ ನಿರೀಕ್ಷೆ ಇದೆ.

ಸಿಬಿಐನ ಹಿಂದಿನ ಹೆಚ್ಚುವರಿ ನಿರ್ದೇಶಕ ಕೆ.ಮಾಧವನ್‌ರ ಪ್ರಕಾರ ಈ ದಾಖಲೆ ಪತ್ರಗಳ ತನಿಖೆಯ ನಂತರ ತಲೆಗಳು ಉರುಳಲಿವೆ. ಅವರ ಪ್ರಕಾರ ಹಿಂದಿನ ಪ್ರಧಾನಿಯೊಬ್ಬರು ಮತ್ತು ಮಂತ್ರಿ ಮತ್ತು ಅಧಿಕಾರಿಗಳು ಈ ಹಗರಣದ ಭಾಗಿಗಳೆಂಬುದು ಸ್ಪಷ್ಟವಾಗಬಹುದು.

ಸ್ವಿಸ್ ಅಧಿಕಾರಿಗಳೂ ಇಂತಹ ಮಾತನ್ನೇ ಆಡಿದ್ದಾರೆ. ಈ ವ್ಯವಹಾರದಲ್ಲಿ ಭ್ರಷ್ಟಾಚಾರ ನಡೆದಿರುವುದು ಕಂಡುಬಂದಿರುವುದರಿಂದಲೇ ಈ ದಾಖಲೆ ಪತ್ರಗಳನ್ನು ಭಾರತಕ್ಕೆ ನೀಡಲಾಗಿದೆಯಂತೆ. ಯಾಕೆಂದರೆ ಲಂಚ ಪಡೆದಿರುವ ಸಾಧ್ಯತೆ ಇಲ್ಲದೆ ಇದ್ದಲ್ಲಿ ಸ್ವಿಸ್ ಕಾನೂನಿನ ಪ್ರಕಾರ ದಾಖಲೆ ಪತ್ರಗಳನ್ನು ನೀಡುವಂತಿಲ್ಲ.

ಇನ್ನೂಎರಡು ಮೂರು ತಿಂಗಳು ಕಾಯಬೇಕಾಗಬಹುದೇನೋ? ಕಳ್ಳರು ಯಾರೆಂದು ತಿಳಿಯಲು.ಕಾಂಗ್ರೆಸಿನೊಳಗಂತೂಕೋಲಾಹಲ!

ಭಾರತಕ್ಕೆ ವಿಶ್ವ ವ್ಯಾಪಾರ ಸಂಘಟನೆಯ ಹುಕುಂ!

ವಿಶ್ವ ವ್ಯಾಪಾರ ಸಂಘಟನೆ ಆಮದಿನ ಮೇಲಿರುವ ಹತೋಟಿ ಕ್ರಮಗಳಾದ ಲೈಸನ್ಸ್ ಪದ್ಧತಿ, ಕೋಟಾ ಮತ್ತು ಮಿತಿಗಳನ್ನು ತೆಗೆದು ಹಾಕುವಂತೆ ಹೇಳಿದೆ. ಬರುವ ಜೂನ್ 2ನೇ ತಾರೀಖಿನವರೆಗೆ ಅದು ಇದಕ್ಕಾಗಿ ಭಾರತಕ್ಕೆ ಗಡುವು ನೀಡಿದೆ. ಈಗ ಭಾರತ ಇಂತಹ ಹತೋಟಿ ನಿಬಂಧನೆಗಳಿರುವ ಜಗತ್ತಿನ ಎಂಟು ದೇಶಗಳಲ್ಲೊಂದಂತೆ.

ಐಎಂಎಫ್ ಭಾರತದ ವಿದೇಶೀ ವ್ಯಾಪಾರ ಭಾಕಿ ಪರಿಸ್ಥಿತಿ ಸುಧಾರಿಸಿದೆ ಎಂಬ ವರದಿಯನ್ನು ನೀಡಿದೆಯಂತೆ.

ಗ್ಯಾಟ್ ಒಪ್ಪಂದಕ್ಕಾಗಿ ಚರ್ಚೆ ನಡೆಸುತ್ತಿದ್ದಾಗ ಭಾರತ ಮೂರನೇ ಜಗತ್ತಿನ ದೇಶಗಳಿಗೆಲ್ಲ ನಾಯಕತ್ವ ನೀಡಿ ಹೆಚ್ಚು ಚೌಕಾಸಿ ಮಾಡುವ ಅವಕಾಶವಿತ್ತು. ಆದರೆ ಉದಾರೀಕರಣ ಮಂತ್ರ ಜಪಿಸುತ್ತಿದ್ದ ನರಸಿಂಹರಾಯರ ಸರಕಾರ ಸಾಮ್ರಾಜ್ಯಶಾಹಿ ದೇಶಗಳ ಒತ್ತಡಕ್ಕೆ ಮಣಿದು ಶರಣಾಯಿತು.

ಈಗ ಇಂತಹ ಒತ್ತಡ ಬರತೊಡಗಿದೆ. ಈ ಶರತ್ತುಗಳನ್ನು ಜಾರಿಗೆ ತರಹೊರಟರೆ ಮತ್ತೆ ಭಾರತದ ವಿದೇಶೀ ವ್ಯಾಪಾರ ಬಾಕಿ ಪರಿಸ್ಥಿತಿ ತೀವ್ರ ಹದಗೆಡಲಿದೆ.

ಬೆಲೆಗಳು ಏಕೆ ಏರುತ್ತಲೇ ಇವೆ?

ಇತ್ತೀಚಿನ ವರದಿಗಳ ಪ್ರಕಾರ ಹಣದುಬ್ಬರದ ದರ ಶೇ 7.75 ಕ್ಕೆ ಏರಿದೆಯಂತೆ. ಇದು ನಿಜಕ್ಕೂ ಆತಂಕಕಾರಿ ಮಟ್ಟದ ಹಣದುಬ್ಬರ. ಯಾಕೆಂದರೆ ಬೆಲೆ ಏರಿಕೆ ಬಡ ಜನರನ್ನು ಹೆಚ್ಚಾಗಿ ಕಾಡುತ್ತದೆ. ಈ ಬೆಲೆ ಏರಿಕೆಯಲ್ಲೂ ಒಂದು ವಿಶಿಷ್ಟ ನಡವಳಿಕೆ ಇದೆ. ಅದೇನೆಂದರೆ ಜನಸಾಮಾನ್ಯರೆಲ್ಲ ಬಳಸುವಂತಹ ವಸ್ತುಗಳ ಬೆಲೆಗಳೇ ಹೆಚ್ಚಾಗಿರುವುದು/ಹೆಚ್ಚಾಗುತ್ತಿರುವುದು. ಆಹಾರ ಧಾನ್ಯಗಳು ಅದರಲ್ಲೂ ಗೋಧಿ, ದ್ವಿದಳ ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳು, ತೆಂಗಿನಕಾಯಿ, ಬಾಳೆಹಣ್ಣುಗಳ ಬೆಲೆಗಳು ತೀವ್ರವಾಗಿ ಹೆಚ್ಚಾಗಿವೆ. ಇವುಗಳ ಬೆಲೆ ಏರಿಕೆ ಗಮನಿಸಿದರೆ ಉತ್ಪಾದಿತ ಸರಕುಗಳ ಬೆಲೆಗಳು ಅಷ್ಟೇನೂ ಹೆಚ್ಚಾಗಿಲ್ಲ. ಜನ ಹೆಚ್ಚಾಗಿ ಬಳಸುವುದು ಉತ್ಪಾದಿತ ವಸ್ತುಗಳಿಗಿಂತ ಆಹಾರ ವಸ್ತುಗಳನ್ನು ತಾನೆ? ಆದ್ದರಿಂದಲೇ ಈ ಬೆಲೆ ಹೆಚ್ಚಳ ಜನಸಾಮಾನ್ಯರನ್ನು ಹೆಚ್ಚಾಗಿ ಕಾಡುವುದು.

ಈ ಬೆಲೆ ಸೂಚ್ಯಂಕ ಅಳೆಯಲು ಬಳಸುವ ವಸ್ತುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಉತ್ಪಾದಿತ ಸರಕುಗಳು ಇಂಧನ, ವಿದ್ಯತ್, ಬೆಳಕು, ಮತ್ತು ಕೀಲೆಣ್ಣೆಗಳು, ಮತ್ತು ಪ್ರಾಥಮಿಕ ವಸ್ತುಗಳು (ಇಲ್ಲಿ ಇಂಧನವೆಂದರೆ ಸೀಮೆ ಎಣ್ಣೆ, ಅಡಿಗೆ ಅನಿಲ, ಇತ್ಯಾದಿಗಳು, ಪ್ರಾಥಮಿಕ ವಸ್ತುಗಳೆಂದರೆ ಆಹಾರ ವಸ್ತುಗಳು) ಈ ಮೂರು ಗುಂಪುಗಳನ್ನು ನೋಡಿದರೆ ಇಂಧನ, ವಿದ್ಯುತ್, ಬೆಳಕು ಮತ್ತು ಕೀಲೆಣ್ಣೆಗಳ ಬೆಲೆಗಳು ತೀವ್ರವಾಗಿ ಹೆಚ್ಚಿದರೆ ಉತ್ಪಾದಿತ ವಸ್ತುಗಳ ಬೆಲೆಗಳು ಸ್ವಲ್ಪವೇ ಹೆಚ್ಚಿವೆ ಮತ್ತು ಪ್ರಾಥಮಿಕ ವಸ್ತುಗಳ ಬೆಲೆಗಳು ಮಧ್ಯಮ ಪ್ರಮಾಣದಲ್ಲಿ ಹೆಚ್ಚಿವೆ.

ಸಂಯುಕ್ತ ರಂಗ ಸರಕಾರ ಹಣದುಬ್ಬರವನ್ನು ಇಳಿಸುವ ಭರವಸೆಯನ್ನು ನೀಡಿತ್ತು, ಕನಿಷ್ಠ ಸಮಾನ ಕಾರ್ಯಕ್ರಮ ಇದನ್ನು ಸ್ಪಷ್ಟವಾಗೇ ಹೇಳಿದೆ. ಆದರೆ ಅದಕ್ಕೆ ಬದಲಿಗೆ ಹಣದುಬ್ಬರ ಹೆಚ್ಚಿದೆ. ಇದರ ಅರ್ಥ ಸಂಯುಕ್ತ ರಂಗ ಸರಕಾರ ಹಿಂದಿನ ಕಾಂಗ್ರೆಸ್ ಸರಕಾರದ ನೀತಿಗಳನ್ನೇ ಮುಂದುವರಿಸುತ್ತಿದೆ ಎಂದು. ಹಿಂದಿನ ವರ್ಷದಲ್ಲಿ (1995-96) ಔಧ್ಯಮಿಕ ಬೆಳವಣಿಗೆ ಹೆಚ್ಚಾಗಿತ್ತು. ಆದರೆ ವಾಣಿಜ್ಯ ಬೆಳೆಗಳಿಗೆ ಹೆಚ್ಚು ಪ್ರಾಮುಖ್ಯತೆ ಬಂದದ್ದರಿಂದ (ಉದಾರೀಕರಣದ ನೇರ ಪರಿಣಾಮ) ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆ ಆಯಿತು. ಈ ವರ್ಷ ಔದ್ಯಮಿಕ ಕ್ಷೇತ್ರದಲ್ಲಿ ಹಿಂಜರಿತ ಬಂದಿದೆ. ಆದರೆ ಒಳ್ಳೆ ಬೆಳೆ ಬರುವ ನಿರೀಕ್ಷೆ ಇದೆ. ಆದರೆ ಬೆಲೆಗಳು ನಿಜವಾಗಿಯೂ ಇವುಗಳ ಮೇಲೆ ಮಾತ್ರ ಅವಲಂಬಿಸಿರುವುದಿಲ್ಲ. ಸರಕಾರದ ನೀತಿಗಳ ಮೇಲೇ ಅವು ಹೆಚ್ಚು ಅವಲಂಬಿಸಿರುತ್ತವೆ.

ಬೆಲೆ ಹೆಚ್ಚಳಕ್ಕೆ ಮೊದಲ ಕಾರಣ ಕಳೆದ ಜುಲೈನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸಿದ್ದು. ಇದನ್ನು ಹಿಂದಿನ ಕಾಂಗ್ರೆಸ್ ಸರಕಾರ ಬೆಲೆ ಏರಿಸದೆ ಮಾಡಿದ ತಪ್ಪನ್ನು ತಿದ್ದಿಕೊಳ್ಳಲಾಗುತ್ತಿದೆ ಎಂಬಂತೆ ಬಿಂಬಿಸಲಾಯಿತು. ನಿಜವಾಗಿಯೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸುವುದೊಂದೇ ದಾರಿಯೇ ಅಥವಾ ಬೇರೆ ಯಾವುದಾದರೂ ದಾರಿ ಇದೆಯೇ ಎಂಬುದನ್ನು ಸಂಯುಕ್ತರಂಗ ಸರಕಾರ ಕೇಳಿಕೊಳ್ಳಲೇ ಇಲ್ಲ, ಅಥವಾ ಬೇರೆ ವಿಧಾನ ಅನುಸರಿಸುವ ಸಂಕಲ್ಪ ಸಂಯುಕ್ತ ರಂಗ ಸರಕಾರದ ನಾಯಕರಿಗೆ ಇದ್ದಂತಿಲ್ಲ.

ಬೆಲೆ ಹೆಚ್ಚಳಕ್ಕೆ ಎರಡನೇ ಕಾರಣ ಕೇಂದ್ರ ಸಂಯುಕ್ತ ರಂಗ ಸರಕಾರದ ಆಹಾರ ಧಾನ್ಯ ನೀತಿಗೆ ಸಂಬಂಧಿಸಿದ್ದು. ಕಳೆದ ಜುಲೈನಲ್ಲಿ ಆಹಾರ ಧಾನ್ಯ ಶಿಲ್ಕು 26 ದಶಲಕ್ಷ ಟನ್ನುಗಳಷ್ಟಿತ್ತು. ಆ ಸಮಯದಲ್ಲಿ ಇರಬೇಕಾದ್ದು 22.3. ದಶಲಕ್ಷ ಟನ್ನುಗಳಷ್ಟು. ಅಂದರೆ ಅವಶ್ಯ ಕನಿಷ್ಟ ಮಟ್ಟಕ್ಕಿಂತ ಹೆಚ್ಚೇ ಇತ್ತು. ನಂತರ ಅಕ್ಟೋಬರ್‌ನಲ್ಲಿ ಕನಿಷ್ಟ ಅವಶ್ಯ ಮಟ್ಟವಾದ 16.6 ದಶಲಕ್ಷ ಟನ್ನುಗಳಿಗಿಂತ ಹೆಚ್ಚಿಗೇನೇ ಇತ್ತು.

ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಧಾನ್ಯವನ್ನು ಹಂಚುವುದನ್ನು ಬಿಟ್ಟು ಮುಕ್ತ-ಮಾರುಕಟ್ಟೆಯಲ್ಲಿ ಮಾರಾಟ ಮಾಡಿತು. ಇದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆಯನ್ನು ಕಡಿಮೆ ಮಾಡುವ ಉದ್ದೇಶವೆಂದು ಸರಕಾರ ಹೇಳಿತು. ಆದರೆ ಇಂತಹ ಮುಕ್ತ ಮಾರುಕಟ್ಟೆಯ ಮಾರಾಟದಿಂದ ಸಟ್ಟಾ ವ್ಯವಹಾರ ಹೆಚ್ಚಾಗಿ ಕಾಳ ದಾಸ್ತಾನುಗಾರರ ಆಟ ಶುರುವಾಗುತ್ತದೆ ಎಂಬುದು ಹಿಂದಿನ ಅನುಭವ. ಹಿಂದೆ 1972 ರಲ್ಲಿ ಇಂತಹ ಮಾರಾಟ ಮಾಡಿದಾಗ ಕಾಳದಾಸ್ತಾನು ಮತ್ತು ಸಟ್ಟಾ ವ್ಯವಹಾರ ಹೆಚ್ಚಾಗಿದ್ದವು. ಇದರಿಂದ ಬೆಲೆಗಳೂ ಹೆಚ್ಚಿದ್ದವು.

ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ವಿಶ್ವಬ್ಯಾಂಕ್, ಐಎಂಎಫ್‌ಗಳ ನೀತಿಯನ್ನೇ ಅನುಸರಿಸುತ್ತಿರುವ ಸರಕಾರಕ್ಕೆ ಈ ಹಿಂದಿನ ಅನುಭವಗಳ ಪಾಠಗಳು ಬೇಕಾಗಿರಲಿಲ್ಲ. ಈ ನೀತಿಯ ಪ್ರಕಾರ ಆಹಾರಧಾನ್ಯದ ಬೇಡಿಕೆ ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚಾದರೆ ಆಗ ಪೂರೈಕೆಯನ್ನು ಹೆಚ್ಚುಮಾಡಿದರಾಯಿತು. ಬೆಲೆಗಳು ಕಡಿಮೆಯಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಬಡವರಿಗೆ ಆಹಾರಧಾನ್ಯ ಸುಲಭ ಬೆಲೆಯಲ್ಲಿ ಸಿಗುವಂತೆ ಮಾಡಿದರೆ ಉತ್ತಮ ಎಂಬುದು ನಮ್ಮ ಯೋಜನಕಾರರ ಅನುಭವದ ಮಾತಾದರೆ ಈ ಅಮೆರಿಕನ್ ಪ್ರೇರಿತ ವಿಚಾರಧಾರೆಯಲ್ಲಿ ಇದಕ್ಕೆ ಕವಡಿ ಕಿಮ್ಮತ್ತೂ ಇಲ್ಲ. ಇದರ ಪ್ರಕಾರ ಸಟ್ಟಾ ವ್ಯವಹಾರ, ಕಳ್ಳಸಂತೆ ದಾಸ್ತಾನು ಇತ್ಯಾದಿಗಳೆಲ್ಲ ಬೊಗಳೆ. ಮಾರುಕಟ್ಟೆಯಲ್ಲಿನ ಬೇಡಿಕೆಯ ಮೇಲಿನ ಒತ್ತಡ ಕಡಿಮೆಯಾಗಿಬಿಡುತ್ತದೆ. ಇದರಿಂದ ಸಮಸ್ಯೆ ಪರಿಹಾರವಾಗುತ್ತದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯ ವಿತರಿಸುವ ಅವಶ್ಯಕತೆಯೇ ಇಲ್ಲ. ತದ್ವಿರುದ್ಧವಾಗಿ ಇಂತಹ ವಿತರಣೆಯಿಂದ ಬೊಕ್ಕಸಕ್ಕೆ ನಷ್ಟವುಂಟಾಗುತ್ತದೆ.

ಇಂತಹ ಪರಿಸ್ಥಿತಿಯನ್ನು ಸರಿಯಾಗಿ ವಿಶ್ಲೇಷಿಸಬೇಕಾದ ಅವಶ್ಯಕತೆ ಇದೆ. ಯಾವುದೇ ಉತ್ಪನ್ನದ ಮೇಲೆ ಅತಿ ಬೇಡಿಕೆ ಒತ್ತಡವಿದೆಯೆಂದರೆ ಅದಕ್ಕೆ ಎರಡು ಕಾರಣಗಳಿರುತ್ತವೆ. ಮೊದಲನೆಯದು ಬಳಕೆಗೆ ಬೇಕಾಗಿರುವುದರಿಂದ ಇರುವ ಬೇಡಿಕೆಯ ಒತ್ತಡ, ಎರಡನೇಯದು ಸಟ್ಟಾ ವ್ಯವಹಾರದಿಂದ ಉಂಟಾಗುವಂತದ್ದು. ಎರಡನೇಯದು ಅಪಾಯಕಾರಿಯಾಗಿದ್ದು. ಇದು ಸರಕಾರದಲ್ಲಿ ಆಹಾರ ಧಾನ್ಯವನ್ನು ಬಿಡುಗಡೆ ಮಾಡುತ್ತದೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಸರಕಾರ ಆಹಾರ ಧಾನ್ಯವನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಿಡುಗಡೆ ಮಾಡಿದರೆ ಆಗ ಸಟ್ಟಾ ವ್ಯವಹಾರದ ಒತ್ತಡಕ್ಕೆ ಹೊಡೆತ ಬೀಳುತ್ತದೆ. ಹಣದುಬ್ಬರ ಹೆಚ್ಚಾಗುವುದಿಲ್ಲ.

ಇದಕ್ಕೆ ಒಂದು ಪ್ರತಿವಾದವನ್ನು ಹೂಡಲಾಗುತ್ತದೆ. ಕಾಳ ದಾಸ್ತಾನಿನ ಮೂಲಕ ಸಟ್ಟಾ ವ್ಯವಹಾರ ಮಾಡುವವರು ಹೇಗಿದ್ದರೂ ಅದನ್ನು ಮಾಡುತ್ತಾರೆ. ಅದಕ್ಕೆ ಸರಕಾರದ ದಾಸ್ತಾನಿನಿಂದ ಆಹಾರ ಧಾನ್ಯ ಬಂದರೇನು? ಅಥವಾ ಮಾರುಕಟ್ಟೆಯಾದರೇನು? ಅವರು ಕಳ್ಳ ದಾಸ್ತಾನು ಮಾಡೇ ಮಾಡುತ್ತಾರೆ ಎಂಬುದು ಈ ವಾದ. ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರಧಾನ್ಯ ಬಿಡುಗಡೆಮಾಡಿದರೆ ಇದೇನೂ ಬದಲಾಗದು ಎನ್ನುತ್ತದೆ ಈ ವಾದ. ಇದೆಷ್ಟು ಸರಿ?

ವಾಸ್ತವದಲ್ಲಿ ಆಗುವುದು ಇದು, ವ್ಯಾಪಾರಿಗಳು ತಮ್ಮ ದಾಸ್ತಾನಿನಿಂದ ಬೆಲೆ ಏರಿಸಿ ಲಾಭ ಮಾಡಿಕೊಳ್ಳುತ್ತಾರೆ. ಆದರೆ ಸರಕಾರ ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯ ಮಾರಿದಾಗ ಅದರಿಂದಲೂ ಲಾಭ ಮಾಡಿಕೊಳ್ಳುತ್ತಾರೆ. ಅದೇ ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಧಾನ್ಯ ಬಿಡುಗಡೆ ಮಾಡಿದರೆ ಆಗ ಸರಕಾರಿ ದಾಸ್ತಾನಿನಿಂದ ಈ ಕಾಳಸಂತೆಕೋರರು ಹಣ ಮಾಡಿಕೊಳ್ಳುವುದು ಆಗುವುದಿಲ್ಲ. ಜೊತೆಗೆ ಮಾರುಕಟ್ಟೆಯಲ್ಲಿನ ಬೇಡಿಕೆ ಒತ್ತಡವೂ ಕಡಿಮೆ ಆಗೇ ಆಗುತ್ತದೆ.

ಇಂತಹ ಮೂಲಭೂತ ಪಾಠಗಳನ್ನು ನಮ್ಮ ಯೋಜನಾಕಾರರು ದಶಕಗಳ ಅನುಭವದಿಂದ ಕಡೆದು ತೆಗೆದಿದ್ದಾರೆ. ಆದರೆ ಈ ಅಮೆರಿಕನ್ ನೀತಿಗಳನ್ನು ಹೀರಿಕೊಂಡವರಿಗೆ ಈ ಅನುಭವದ ಪಾಠ ಬೇಕಾಗಿಲ್ಲ. ಸಂಯುಕ್ತ ರಂಗ ಸರಕಾರ ಇಂತಹ ನೀತಿಗಳನ್ನು ಹೀರಿಕೊಂಡಿರದಿದ್ದರೆ ಅದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನೂ ವಿಶಾಲಗೊಳಿಸಿ ಬಲ ಪಡಿಸುತ್ತಿತ್ತು. ಆ ವ್ಯವಸ್ಥೆಯ ಮೂಲಕ ಆಹಾರ ಧಾನ್ಯವನ್ನು ವಿತರಿಸುತ್ತಿತ್ತು. ಇದರಿಂದ ಆಯವ್ಯಯ ಕೊರತೆ ಉಂಟಾಗಬಹುದಿತ್ತು. ಆದರೆ ಹಣದುಬ್ಬರ ಹಿಡಿತದಲ್ಲೇ ಉಳಿಯುತ್ತಿತ್ತು. 'ಮಳೆ ಹುಯ್ದರೆ ಕೆಡದು ಮಗ ಉಂಡರೆ ಕೆಡದು' ಎಂಬಂತೆ ದೇಶದ ಜನತೆ ಕನಿಷ್ಟ ಅವಶ್ಯಕತೆಗಳನ್ನಾದರೂ ಕಾಣುತ್ತಿದ್ದರು.

ಈಗ ಆಗಿರುವುದು ಸರಕಾರದ ಆಹಾರ ಧಾನ್ಯ ದಾಸ್ತಾನೂ ಕರಗಿ ಹೋಗಿದೆ. ಬೆಲೆಗಳು ಹೆಚ್ಚುತ್ತಲೇ ಇವೆ.

(ಆಧಾರ: ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಯಲ್ಲಿ ಕಾರ್ತಿಕ್ ರೈ ಅವರ ಲೇಖನ)



ರಾಮರಾಜ್ಯದ ಬದಲು ಸೆರೆಮನೆ ವಾಸ

"ರಾಮರಾಜ್ಯದ ಬದಲು ನಾವು ಬಿಜೆಪಿ ಜೈಲುಗಳಲ್ಲಿ ಕೊಳೆಯಬೇಕಾಗಿದೆ"

ಹರ್ಯಾಣ ವಿಕಾಸ ಪಕ್ಷ(ಎಚ್.ವಿ.ಪಿ) ಮತ್ತು ಬಿಜೆಪಿ ಸಮ್ಮಿಶ್ರ ಸರಕಾರವಿರುವ ಹರ್ಯಾಣದಾದ್ಯಂತ ಈ ಘೋಷಣೆ ಮೊಳಗುತ್ತಿದೆ. ಬನ್ಸಿಲಾಲ್ ಸರಕಾರ ಕಾರ್ಮಿಕ ವಿರೋಧಿ ನೀತಿಗಳ ವಿಚಾರದಲ್ಲಿ ಹೊಸ ದಾಖಲೆಗಳನ್ನೇ ಸೃಷ್ಟಿಸುತ್ತಿದೆ.

ನಮ್ಮ ವೇತನ ಕೊಡಿ ಎಂದು ಹೋರಾಟ ನಡೆಸುತ್ತಿರುವ ಸಾವಿರಾರು ಮುನ್ಸಿಪಾಲಿಟಿ ನೌಕರರ ವಿರುದ್ಧ ಬನ್ಸಿಲಾಲ ಸರಕಾರ ದೌರ್ಜನ್ಯ ನಡೆಸುತ್ತಿದೆ.

ಹರ್ಯಾಣ ಮುನ್ಸಿಪಲ್ ಸಮಿತಿಯ ಸುಮಾರು 25 ಸಾವಿರ ನೌಕರರು ಡಿಸೆಂಬರ್ 16 ರಿಂದ ಮುಷ್ಕರ ನಡೆಸುತ್ತಿದ್ದಾರೆ. ಬಾಕಿಯಿರುವ ಸಂಬಳವನ್ನು ಕೊಡಿ ಎಂಬುದು ಅವರ ಮುಖ್ಯ ಬೇಡಿಕೆ. ಹೋರಾಟ ನಿರತರ ಪೈಕಿ ಸುಮಾರು 3500 ಜನರನ್ನು ಜೈಲುಗಳಲ್ಲಿಡಲಾಗಿದೆ. ಅವರಲ್ಲಿ 600 ಮಹಿಳೆಯರೂ ಇದ್ದಾರೆ.

ಬಹುತೇಕ ಜನರು ಕಸಗುಡಿಸುವ ನೌಕರರಾಗಿದ್ದು ರಾಜ್ಯದ ಅನೇಕ ಕೇಂದ್ರಗಳಲ್ಲಿ ಮುನ್ಸಿಪಾಲಿಟಿ ನೌಕರರಿಗೆ ಅನೇಕ ತಿಂಗಳಿಂದ ಸಂಬಳ ಸಿಕ್ಕಿಲ್ಲ. ವೇತನ ಕೊಡಲು ಮುನ್ಸಿಪಾಲಿಟಿ ಕಮಿಟಿಗಳಿಗೆ ಅನುದಾನ ಮಂಜೂರು ಮಾಡಲು ರಾಜ್ಯ ಸರಕಾರ ನಿರಾಕರಿಸಿರುವುದೇ ಈ ಪರಿಸ್ಥಿತಿಗೆ ಕಾರಣವಾಗಿದೆ.

ಬಿಜೆಪಿ ಮಂತ್ರಿ

ಮುನ್ಸಿಪಾಲಿಟಿ ಸಮಿತಿಗಳ ಖಾತೆ ಬಿಜೆಪಿ ಮಂತ್ರಿಯ ಕೈಯಲ್ಲಿದೆ. ನೌಕರರ ಸೇವಾ ಪರಿಸ್ಥಿತಿಗಳು, ವರ್ಗಾವಣೆ, ವಜಾ ಮುಂತಾದ ವಿಚಾರಗಳಲ್ಲಿ ಈ ಸಚಿವರಿಗೆ ಅಧಿಕಾರವಿದೆ. ಆದರೆ ನೌಕರರ ಸಂಬಳದ ವಿಚಾರಗಳಲ್ಲಿ ಜವಾಬ್ದಾರಿ ತೆಗೆದುಕೊಳ್ಳಲು ಅವರು ತಯಾರಿಲ್ಲ.

ಬಹಳಷ್ಟು ಮಹಿಳೆಯರನ್ನು ಒಳಗೊಂಡ ಪುರಸಭೆ ನೌಕರರು ಸಮಾಜದ ಅತಿ ಶೋಷಿತ ವರ್ಗದಿಂದ ಬಂದವರು. ಅವರು ಈಗ ಎದುರಿಸುತ್ತಿರುವ ದಯನೀಯ ಪರಿಸ್ಥಿತಿ ಸರಕಾರದ ಜನವಿರೋಧಿ ಧೋರಣೆಗೆ ಹಿಡಿದಿರುವ ಕನ್ನಡಿಯಾಗಿದೆ.

ಚಳವಳಿ ನಿರತ ಕಾರ್ಮಿಕರನ್ನು ಬಗ್ಗು ಬಡಿಯುವ ಉದ್ದೇಶದಿಂದ ಅವರನ್ನು, ಮುಖಂಡರನ್ನು ಬಂಧಿಸಲು 'ಎಸ್ಮಾ'ವನ್ನು ಬಳಸಲಾಗುತ್ತಿದೆ. ನೌಕರರನ್ನು ಸಾಮೂಹಿಕವಾಗಿ ಬಂಧಿಸುವ ಮೂಲಕ ಪ್ರದರ್ಶನಗಳನ್ನು ತಡೆಗಟ್ಟಲಾಗುತ್ತಿದೆ.

ಮುನ್ಸಿಪಾಲಿಟಿ ಸಮಿತಿ ನೌಕರರ ದೀರ್ಘ ಹೋರಾಟದಲ್ಲಿ ಹರ್ಯಾಣ ರಾಜ್ಯ ಸರಕಾರಿ ನೌಕರರ ಸಂಘ ಕೂಡ ಸಕ್ರಿಯವಾಗಿ ಭಾಗವಹಿಸುತ್ತಿದೆ. ಸಂಘದ ಅನೇಕ ಸದಸ್ಯರನ್ನು ಕೂಡ ಬಂಧಿಸಿ ಜೈಲಿನಲ್ಲಿಡಲಾಗಿದೆ.

ಸಿಪಿಐ(ಎಂ), ಸಿಐಟಿಯು, ಎಐಡಿಡಬ್ಲ್ಯೂಎ ರಾಜ್ಯ ಸಮಿತಿಗಳು ಹೋರಾಟ ನಿರತರಿಗೆ ಬೆಂಬಲವಾಗಿ ಅನೇಕ ಸೌಹಾರ್ದ ಚಳುವಳಿಗಳನ್ನು ಸಂಘಟಿಸಿವೆ.

ಹೋರಾಟದ ಪ್ರಮುಖ ಕೇಂದ್ರಗಳಲ್ಲಿ ಒಂದಾದ ರೋಹ್ಟಕ್ ಗೆ ಸಿಪಿಐ(ಎಂ) ಸಂಸತ್ ಸದಸ್ಯ ಎಂ.ಎ.ಬೇಬಿ ಮತ್ತು ಎಐಡಿಡಬ್ಲ್ಯೂಎ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಜನವರಿ ಒಂಭತ್ತರಂದು ಬೇಟಿ ನೀಡಿದ್ದರು. ಅವರು ಅಲ್ಲಿ ನಡೆದ ಬೃಹತ್ ಸಭೆಯೊಂದರಲ್ಲಿ ಮಾತನಾಡಿದರು. ಮತ್ತು ರೋಹ್ಟಕ್ ಸೆರೆಮನೆಗೆ ಭೇಟಿ ನೀಡಿದರು.

ಈ ಜೈಲಿನಲ್ಲಿ 217 ಪುರುಷ ಮತ್ತು 17 ಮಹಿಳಾ ನೌಕರರನ್ನು ಇಡಲಾಗಿದೆ. ಸೆರೆಮನೆಯಲ್ಲಿ ತೀರಾ ಹೀನ ಪರಿಸ್ಥಿತಿಯಿರುವುದನ್ನು ಮುಖಂಡರು ಗಮನಿಸಿದರು.

48 ಜನರನ್ನು ಇಡಬಹುದಾದ ಕೋಣೆಯಲ್ಲಿ ಈಗ 270 ಜನರಿದ್ದಾರೆ. ಕೇವಲ 10 ಮಹಿಳೆಯರನ್ನು ಇಡಬಹುದಾದ ಕೋಣೆಯಲ್ಲಿ 80 ಮಹಿಳೆಯರನ್ನಿಡಲಾಗಿದೆ ಎಂದು ಜೈಲಿನ ಸೂಪರಿಂಟೆಂಡೆಂಟ್ ಅವರೇ ಸ್ವತಃ ಒಪ್ಪಿಕೊಂಡರು.

ದಿಟ್ಟ ಮಹಿಳೆಯರು

ಮಹಿಳೆಯರಲ್ಲಿ ಆಶಾ, ಕಮಲಾ ಮತ್ತು ಕೃಷ್ಣಾ ಮತ್ತು ಅನೇಕ ಮುಖಂಡರನ್ನು ಬೇಬಿ ಮತ್ತು ಬೃಂದಾರಿದ್ದ ನಿಯೋಗ ಭೇಟಿ ಮಾಡಿತು.

ಕಮಲಾ ಮತ್ತು ಅವರ ಸಂಗಾತಿ ಮಹಿಳೆಯರು ಹೋರಾಟದ ವಿಚಾರದಲ್ಲಿ ತಳೆದಿರುವ ದಿಟ್ಟ ನಿಲುವು ಸ್ಫೂರ್ತಿದಾಯಕವಾಗಿದೆ. ಜಾಮೀನಿನ ಮೇಲೆ ಬಿಡುಗಡೆ ಹೊಂದಬಾರದು, ಮೊಕದ್ದಮೆಗಳನ್ನು ವಾಪಾಸು ಪಡೆಯುವಂತೆ ಸರಕಾರದ ಮೇಲೆ ಒತ್ತಡ ಹೇರಬೇಕು ಎಂಬ ಸಂಘಟನೆಯ ಕರೆಗೆ ಎಲ್ಲಾ ಮಹಿಳಾ ನೌಕರರು ಓಗೊಟ್ಟಿದ್ದಾರೆ. ಕಮಲಾ ಮತ್ತು ಇನ್ನೊಬ್ಬ ಮಹಿಳೆ ಮಾಡಿರುವ ತ್ಯಾಗ ಅನುಪಮವಾದುದು. ಅವರಿಬ್ಬರೂ ಬಾಣಂತಿಯರು. ಒಬ್ಬರಿಗೆ ಮೂರುತಿಂಗಳ ಮಗುವಿದೆ. ಇನ್ನೊಬ್ಬರಿಗೆ ಐದು ತಿಂಗಳ ಮಗುವಿದೆ. ಜೈಲಿನಲ್ಲಿದ್ದರೆ ಮಗುವಿಗೆ ರೋಗರುಜಿನ ಬರಬಹುದೆಂಬ ಭಯದಿಂದ ಅವರಿಬ್ಬರೂ ತಮ್ಮ ಕಂದಮ್ಮಗಳನ್ನು ಜೈಲಿಗೆ ತಂದಿಲ್ಲ.

ಇದನ್ನು ತಿಳಿದ ಸಂಘಟನೆಯ ನಾಯಕರು ಜಾಮೀನು ಬಾಂಡ್‌ಗಳನ್ನು ಸೆರೆಮನೆಗೆ ಕಳಿಸಿದರು. ಆದರೆ ಅದಕ್ಕೆ ಸಹಿ ಹಾಕಲು ಅವರಿಬ್ಬರೂ ನಿರಾಕರಿಸಿದರು.

ಹೋರಾಟದಲ್ಲಿ ನಮಗೂ ಸಮಾನವಾದ ಜವಾಬ್ದಾರಿಯಿದೆ ಎಂದು ಹೇಳಿದ ಅವರು ಜೈಲಿನಿಂದ ಹೊರಬರಲು ಒಪ್ಪಲಿಲ್ಲ.

ಅನೇಕ ಮಹಿಳಾ ನೌಕರರನ್ನು ತುಂಬಾ ದೂರದ ಊರುಗಳ ಜೈಲುಗಳಿಗೆ ಕಳಿಸಲಾಗಿದೆ. ಇದರಿಂದ ಅವರು ಧೃತಿಗೆಟ್ಟಿಲ್ಲ ಎನ್ನುವುದು ಅವರ ದೃಢ ಹೋರಾಟ ಮನೋಭಾವವನ್ನು ತೋರಿಸುತ್ತದೆ.

ಡಿಟಿಸಿ ಖಾಸಗೀಕರಣಕ್ಕೆ ಪ್ರತಿಭಟನೆ

ಬ್ಲೂ ಲೈನ್ ತೆಗೆಯಿರಿ, ಡಿಟಿಸಿ ತನ್ನಿರಿ, ದೆಹಲಿ ಜನರನ್ನು ರಕ್ಷಿಸಿರಿ.

ಜನವರಿ ಏಳರಂದು ದೆಹಲಿಯಲ್ಲಿ ನಡೆದ ಮತಪ್ರದರ್ಶನವೊಂದರಲ್ಲಿ ಜನರು ಹಿಡಿದಿದ್ದ ಪ್ಲೇಕಾರ್ಡ್‌ನ ಬರಹವಿದು.

ದೆಹಲಿ ಸಾರಿಗೆ ನಿಗಮದ(ಡಿಟಿಸಿ) ಬಸ್ಸುಗಳನ್ನು ರದ್ದುಪಡಿಸಿ ಖಾಸಗೀಕರಿಸಲಾದ ಬಸ್ಸುಗಳ ದುರವಸ್ಥೆಯನ್ನು ಪ್ರತಿಭಟಿಸಲು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಧರಣಿಯನ್ನು ಹಮ್ಮಿಕೊಂಡಿತ್ತು. ಕೊಲೆಗಡುಕ ಬ್ಲೂಲೈನ್ ಬಸ್‌ಗಳನ್ನು ರದ್ದುಪಡಿಸಿ ಸಾರ್ವಜನಿಕ ರಂಗದ ಡಿಟಿಸಿ ಬಸ್ ಸೇವೆಯನ್ನು ಪುನರಾರಂಭಿಸುವಂತೆ ಒತ್ತಾಯಿಸಲಾಯಿತು.

ದೆಹಲಿಯ ಬಿಜೆಪಿ ಸರಕಾರ ಡಿಟಿಸಿಯನ್ನು ರದ್ದು ಮಾಡಿ ಬಸ್ ಸೇವೆಯನ್ನು ಖಾಸಗೀಕರಿಸಿದೆ. ಸರಕಾರದ ಕ್ರಮವನ್ನು ಸಿಪಿಐ(ಎಂ) ಮೊದಲಿಂದಲೂ ಪ್ರತಿಭಟಿಸುತ್ತಿದೆ.

ರಾಜ್ಯ ಸಮಿತಿ ಸದಸ್ಯರಾದ ಬಲದೇವ್ ಸಿಂಗ್, ರಂಜನ್ ನರುಲಾ ಮತ್ತು ಇಂದ್ರಪಾಲ್ ಅವರಿದ್ದ ನಿಯೋಗವೊಂದು ಡಿಟಿಸಿ ಖಾಸಗೀಕರಣವನ್ನು ವಿರೋಧಿಸಿ ದೆಹಲಿ ಮುಖ್ಯಮಂತ್ರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಪಿ.ಎಂ.ಎಸ್.ಗ್ರೆವಾಲ್ ಧರಣಿಯ ನೇತೃತ್ವ ವಹಿಸಿದ್ದರು.

ದೆಹಲಿಯಲ್ಲಿ ಆಡಳಿತ ನಡೆಸಿರುವ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಈ ಪ್ರದೇಶದ ಜನರ ವಿದ್ಯುತ್, ನೈರ್ಮಲ್ಯ, ನೀರು, ವೈದ್ಯಕೀಯ ಮೊದಲಾದ ಮೂಲ ಸೌಕರ್ಯಗಳತ್ತ ಗಮನ ಹರಿಸಲೇ ಇಲ್ಲ. ಸಾರಿಗೆ ಬಗ್ಗೆಯೂ ಅವುಗಳು ಗಮನ ಕೊಟ್ಟಿಲ್ಲ ಎಂದು ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮುಖಂಡರು ಟೀಕಿಸಿದರು.

ಈ ಎರಡೂ ಪಕ್ಷಗಳು ಖಾಸಗಿ ಸಾರಿಗೆ ಸೇವೆಯಿಂದ ಉದ್ಧಾರವಾಗುತ್ತದೆ ಎಂದು ಡಂಗುರ ಸಾರಿಸಿ ಡಿಟಿಸಿಯನ್ನು ದುರ್ಬಲ ಗೊಳಿಸಿದರು. ಖಾಸಗಿಯವರು ಬಂದರೂ ಆಗುವುದೇನು ಎಂಬುದನ್ನು ದೆಹಲಿಯ ಜನರು ಈಗ ಸ್ವಂತ ಅನುಭವಗಳಿಂದ ತಿಳಿಯುತ್ತಿದ್ದಾರೆ. ಖಾಸಗೀಕರಣದಿಂದ ಸಾರಿಗೆ ಸೇವೆ ಸುಧಾರಿಸುವುದಿಲ್ಲ. ಒಂದು ಬಲಿಷ್ಟವಾದ ಹಾಗೂ ಜನತೆಯ ಅಗತ್ಯಗಳಿಗೆ ಸ್ಪಂದಿಸುವ ವ್ಯವಸ್ಥೆಯಿಂದಷ್ಟೇ ರಾಜಧಾನಿಯ ಸಾರಿಗೆ ಸಮಸ್ಯೆ ಪರಿಹಾರ ಆಗಬಹುದು ಎಂದು ಭಾಷಣಕಾರರು ಅಭಿಪ್ರಾಯಪಟ್ಟರು.

ದೆಹಲಿಯ ಸಾರಿಗೆ ಸಮಸ್ಯೆಯನ್ನು ಬಗೆಹರಿಸಲು ಕೂಡಲೇ ಮಧ್ಯಪ್ರವೇಶಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅವರು ಕೇಂದ್ರ ಸರಕಾರವನ್ನು ಒತ್ತಾಯಿಸಿದರು.

ತಮಿಳುನಾಡು ದುಡಿಯುವ ಮಹಿಳೆಯರ ಸಮ್ಮೇಳನ

ತಮಿಳುನಾಡು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಐದನೇ ಸಮ್ಮೇಳನ 1996 ಡಿಸೆಂಬರ್ 28 ಮತ್ತು 29 ರಂದು ತಿರುಚ್ಚಿಯಲ್ಲಿ ನಡೆಯಿತು. 1997 ಫೆಬ್ರವರಿ ಎಂಟರಂದು 'ಬೇಡಿಕೆ ದಿನ'ವನ್ನು ಆಚರಿಸಲು ಸಮ್ಮೇಳನ ಕರೆ ಕೊಟ್ಟಿದೆ.

ರಾಜ್ಯದ 25 ಜಿಲ್ಲೆಗಳಿಂದ 186 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಸಮ್ಮೇಳನದ ಅಂಗವಾಗಿ ನಡೆದ ಆಕರ್ಷಕ ಮೆರವಣಿಗೆಯಲ್ಲಿ 500 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಸಿಐಟಿಯು ನಾಯಕರಾದ ವಿಮಲ ರಣದಿವೆ, ಹೇಮಲತಾ ಮತ್ತು ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಟಿ.ಕೆ.ರಂಗರಾಜನ್ ಮೊದಲಾದವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನಪ್ರಿಯ ಮುಖಂಡ ಕಾ. ಅಕ್ಬರ್ ಇನ್ನಿಲ್ಲ

ಉತ್ತರ ಪ್ರದೇಶದಲ್ಲಿ ಸಿಪಿಐ(ಎಂ) ಜನಪ್ರಿಯ ಮುಖಂಡರಾಗಿದ್ದ ಕಾ|| ಅಕ್ಬರ್ ಹುಸೇನ್ ಬಾಬರ್ ಜನವರಿ 16 ರಂದು ಲಖನೌ ನಲ್ಲಿ ಅನಾರೋಗ್ಯದಿಂದ ನಿಧನರಾದರು. ಅವರಿಗೆ 70 ವರ್ಷವಾಗಿತ್ತು.

ಕಾ|| ಹುಸೇನ್ ಎರಡು ಸಲ ಉತ್ತರ ಪ್ರದೇಶ ವಿಧಾನ ಸಭೆಯ ಸದಸ್ಯರಾಗಿದ್ದರು.

ಅವರಿಗೆ ಗೌರವ ಅರ್ಪಿಸಲು ಸದಸ್ಯರಿಗೆ ಅನುಕೂಲವಾಗುವಂತೆ ಸಿಪಿಐ(ಎಂ) ಉತ್ತರ ಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿಯ ಕಲಾಪಗಳನ್ನು ಬೆಳಿಗ್ಗೆ ಮುಂದೂಡಲಾಗಿತ್ತು. ಸೆಕ್ರೆಟಾರಿಯೇಟ್ ಸಭೆಗೆ ಬಂದಿದ್ದ ಪಾಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಮತ್ತು ಎಸ್.ರಾಮಚಂದ್ರ ಪಿಳ್ಳೆ ಅವರೂ ಕಾ|| ಹುಸೇನರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಕಾ|| ಹುಸೇನ್ ಫರೀದಾಬಾದ್ ಜಿಲ್ಲೆಯ ಕೃಷಿ ಕೂಲಿಗಾರರು ಹಾಗೂ ರೈತರ ಒಬ್ಬ ಜನಪ್ರಿಯ ನೇತಾರರಾಗಿದ್ದರು. ಅಯೋಧ್ಯೆಯ ಸಮೀಪದ ಅಕ್ಬರ್‌ಪುರ ವಿಧಾನ ಸಭೆ ಕ್ಷೇತ್ರದಿಂದ 1985 ಮತ್ತು 1990 ರಲ್ಲಿ ಅವರು ಆಯ್ಕೆಯಾಗಿದ್ದರು. ಕೋಮುವಾದಿಗಳ ಆಟಾಟೋಪದ ನಡುವೆಯೂ ಅಕ್ಬರ್ ಹುಸೇನ್ ಬಾಬರ್ ಜಾತಿಮತಗಳ ಭೇದವಿಲ್ಲದೆ ಜನರ ನಡುವೆ ಜನಪ್ರಿಯರಾಗಿದ್ದರು.

ಸುಮಾರು 50 ವರ್ಷಗಳ ಕಾಲ ಅವರು ಜನರ ಹಕ್ಕುಗಳಿಗಾಗಿ ಹೋರಾಟ ನಡಸಿದರು. 56ಕ್ಕೂ ಹೆಚ್ಚು ಸಲ ಅವರನ್ನು ಬಂಧಿಸಲಾಗಿತ್ತು. ಭೂಮಾಲಿಕರು ಮತ್ತು ಪೋಲೀಸ್ ಹೊಡೆತಗಳಿಂದ ದೇಹ ಜರ್ಜರಿತವಾಗಿದ್ದರೂ ಕಾ. ಅಕ್ಬರ್ ಹುಸೇನ್ ಸ್ಫೂರ್ತಿ ಒಂದಿಷ್ಟೂ ಕುಂದಿರಲಿಲ್ಲ.

ಕಾ. ಬಾಬರ್ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದ ಮೂಲಕ ಕಮ್ಯುನಿಸ್ಟ್ ಆಂದೋಲನಕ್ಕೆ ಬಂದವರು.

ತಂದೆ ವಿರುದ್ಧ ಹೋರಾಟ

'ದೊಡ್ಡ ಭೂಮಾಲಿಕರಾಗಿದ್ದ ನನ್ನ ತಂದೆಯ ವಿರುದ್ಧ ನನ್ನ ಮೊದಲ ಹೋರಾಟ ಆರಂಭವಾಯಿತು. ಅಂದು ನನ್ನನ್ನು ಮನೆಯಿಂದ ಹೊರಗೆ ಹಾಕಿದರು ಎಂದು 1993 ನವೆಂಬರ್‌ನಲ್ಲಿ ಐಎನ್ಎಸ್‌ಗೆ ನೀಡಿದ ಸಂದರ್ಶನದಲ್ಲಿ ತಮ್ಮ ಹೋರಾಟದ ಜೀವನದ ಆರಂಭವನ್ನು ಕಾ. ಬಾಬರ್ ನೆನಪಿಸಿಕೊಂಡಿದ್ದರು.

ಮನೆಯಿಂದ ತಂದೆ ಹೊರಹಾಕಿದ ಮೇಲೆ ಬಾಬರ್ ಭೂಮಾಲಿಕರ ದಬ್ಬಾಳಿಕೆ ಹೆಚ್ಚಾಗಿದ್ದ ಅಕ್ಬರ್‌ಪುರದಲ್ಲಿ ಬಡಕೂಲಿಕಾರರ ನಡುವೆ ಬದುಕಲಾರಂಭಿಸಿದರು ಹಾಗೂ ಶೋಷಣೆಯ ವಿರುದ್ಧ ಅವರನ್ನು ಸಂಘಟಿಸ ತೊಡಗಿದರು. ತಮ್ಮ ಕೊನೆ ಕಾಲದವರೆಗೂ ಅವರು ತತ್ವಬದ್ಧ ಕಮ್ಯುನಿಸ್ಟರಾಗಿದ್ದರು.

ಪೌಷ್ಟಿಕತೆಯ ಪಾಠ ಹೇಳುವವರಲ್ಲಿ ಅಪೌಷ್ಟಿಕತೆ

ತುಮಕೂರು: ಜನವರಿ 12 ರಂದು ತುರುವೆಕೆರೆಯ ಗುರುಭವನದಲ್ಲಿ ಅಂಗನವಾಡಿ ತಾಲೂಕು ಕಾರ್ಯಕರ್ತೆಯರ ಪ್ರಥಮ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐ ಟಿಯು) ಅಧ್ಯಕ್ಷರಾದ ಪ್ರಭಾರವರು ಮಾತನಾಡುತ್ತಾ ಇಂದು ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಪೌಷ್ಟಿಕತೆಯ ಪಾಠ ಮಾಡುವ, ಸರಕಾರದ ಎಲ್ಲಾ ಯೋಜನೆಗಳ ಫಲಾನುಭವಿಗಳನ್ನು ಗುರುತಿಸಲು ಹಗಲಿರುಳು ದುಡಿಯುವ ಅಂಗನವಾಡಿ ಕಾರ್ಯಕರ್ತೆಯರಿಗೆಯೇ ಸರಿಯಾದ ಸಂಬಳವಿಲ್ಲದೆ ಪೌಷ್ಟಿಕ ಆಹಾರ ಸೇವಿಸಲಾಗದೆ ಅಪೌಷ್ಟಿಕತೆಯಿಂದ ಬಳಲುತ್ತಿರುವರು ಎಂದು ವಿಷಾದಿಸಿ, ನೌಕರರ ನೈಜ ಸಮಸ್ಯೆಗಳತ್ತ ಸರಕಾರ ಗಮನ ಹರಿಸುವುದು ಅಗತ್ಯ ಎಂದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡಾ|| ಜಿ.ಶಿವರಾಮ್, ಎಸ್‌ಎಫ್ ಐನ ಟಿ.ಆರ್. ರವೀಂದ್ರ, ಡಿವೈಎಫ್‌ಐನ ರುದ್ರೇಶ್ ಕುಮಾರ್, ಸಿಐಟಿಯುನ ಸಯ್ಯದ್ ಮುಜೀಬ್ ಮುಂತಾದವರು ಪಾಲ್ಗೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಬಿ. ದೇವಮ್ಮ ಶಂಕರಪ್ಪ ವಹಿಸಿದ್ದರು.

ಸಿಓಡಿ ತನಿಖೆಗೆ ಆಗ್ರಹ

ಅಂಗನವಾಡಿಗೆ ಆಹಾರ ಸರಬರಾಜು ಮಾಡುವ ಸಂಬಂಧ ಉನ್ನತ ಮಟ್ಟದಲ್ಲಿ 25 ಕೋಟಿ ರೂಗಳ ಭ್ರಷ್ಟಾಚಾರದ ಬಗ್ಗೆ ಸಿಓಡಿ ತನಿಖೆಗೆ ಸಮ್ಮೇಳನ ಒತ್ತಾಯಿಸಿದೆ. ಸಂಜೆ ಮನೆಗೆ ಹೋಗುವಾಗ ಕಾರ್ಯಕರ್ತೆಯರ ಚೀಲ ಶೋಧಿಸುವ ಇಲಾಖೆ ಇಂತಹ ದೊಡ್ಡ ಹಗರಣದಲ್ಲಿ ತೊಡಗಿರುವುದನ್ನು ಸಂಘ ಖಂಡಿಸಿದೆ.

ವಿದ್ಯುತ್ ಸಮಸ್ಯೆಯ ಪರಿಹಾರಕ್ಕೆ ಭರವಸೆ

ಚಿಂತಾಮಣಿ: ರೈತರ ಕೃಷಿಗೆ ಪ್ರತಿದಿನ ಕನಿಷ್ಠ 10 ಗಂಟೆ ವಿದ್ಯುತ್ ನೀಡಿಕೆ, ವಿದ್ಯುತ್ ಸಂಪರ್ಕಗಳ ಸಕ್ರಮಕ್ಕಾಗಿ ವಸೂಲಿ ಮಾಡಲಾಗುತ್ತಿರುವ ದಂಡವನ್ನು ರದ್ದು ಮಾಡುವ ಇಲ್ಲವೇ ಸಾಂಕೇತಿಕ ಗೊಳಿಸುವ ಬಗ್ಗೆ ಆದಷ್ಟು ಬೇಗ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದೆಂದು ಕರ್ನಾಟಕ ಪ್ರಾಂತ ರೈತ ಸಂಘ(ಎಐಕೆಎಸ್) ರಾಜ್ಯ ಸಮಿತಿಯ ನಿಯೋಗದ ಜೊತೆ ಚರ್ಚೆ ಮಾಡಿದ ವಿದ್ಯುತ್ ಸಚಿವರು ಮತ್ತು ಮಂಡಳಿಯ ಉನ್ನತ ಅಧಿಕಾರಿಗಳು ಭರವಸೆಯನ್ನು ನೀಡಿದ್ದಾರೆ. ಜನವರಿ 17 ರಂದು ರಾಜ್ಯಾದ್ಯಂತ ಆಗಮಿಸಿದ ಸಾವಿರಾರು ರೈತರು ಮುಖ್ಯ ಮಂತ್ರಿಗಳ ಮನೆಯ ಎದುರು ಧರಣಿ ನಡೆಸಿದ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಘನೆ ಮತ್ತು ವಿಧಾನ ಸೌಧದಲ್ಲಿ ಎರಡು ಸುತ್ತಿನ ಮಾತುಕತೆ ನಡೆದ ಹಿನ್ನೆಲೆಯಲ್ಲಿ ಈ ಭರವಸೆ ನೀಡಲಾಗಿದೆ.

ಈ ಬಗ್ಗೆ ಅನಂತರ ಚರ್ಚಿಸಿ ರೈತ ಸಂಘವು ಈ ಕುರಿತು ಅಂತಿಮ ತೀರ್ಮಾನ ಹೊರಗೆ ಬರುವ ತನಕ ರೈತರು ದಂಡ ಪಾವತಿ ಮಾಡಬಾರದೆಂದು ವಿನಂತಿಸಲು ನಿರ್ಣಯಿಸಿತು. ಮತ್ತು ಈ ತಿಂಗಳಿನ ಕೊನೆಯೊಳಗೆ ದಿನಾ 12 ಗಂಟೆ ವಿದ್ಯುತ್ ನೀಡುವ, ದಂಡ ವಸೂಲಿ ರದ್ದತಿಯನ್ನು ಮಾಡುವ ತೀರ್ಮಾನ ಮಾಡದಿದ್ದರೆ ಮುಂದಿನ ತಿಂಗಳು ರಸ್ತೆ ತಡೆ, ಶಾಸಕರು-ಸಚಿವರ ಘೆರಾವ್ ಇತ್ಯಾದಿ ರೂಪಗಳಲ್ಲಿ ಹೋರಾಟವನ್ನು ಮುಂದುವರಿಸಲು ರೈತ ಸಂಘ ಜಿಲ್ಲಾ ಸಮಿತಿಯು ನಿರ್ಧರಿಸಿದೆ.

ಜಿಲ್ಲೆಯ ಕೃಷಿಯನ್ನು ಉಳಿಸುವ ಸಲುವಾಗಿ ಪಕ್ಷಾತೀತವಾಗಿ ಎಲ್ಲಾ ರೈತರೂ ಹೋರಾಟ ನಡೆಸಬೇಕೆಂದು ರೈತ ಸಂಘದ ಅಭಿಪ್ರಾಯ. ಆದರೆ ರೈತ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆಗೆ ಇಳಿಯುತ್ತಿರುವ ರೈತರನ್ನು ತಪ್ಪುದಾರಿಗೆ ಎಳೆಯುವ ಮತ್ತು ತಮ್ಮ ವ್ಯಕ್ತಿಗತ ಹಿಡಿತವನ್ನು ಉಳಿಸಿಕೊಳ್ಳಲು ಕೆಲವು ಮುಖಂಡರು ನಡೆಸುತ್ತಿರುವ ಪ್ರಯತ್ನವನ್ನು ರೈತ ಸಂಘವು ಖಂಡಿಸುತ್ತದೆ. ಜನವರಿ 20 ರಂದು ಚಿಂತಾಮಣಿಯ ಕೆಇಬಿ ಕಛೇರಿಯ ಎದುರು ಧರಣಿ ನಡೆಸಿದವರು, ರೈತ ವಿರೋಧಿ ತೀರ್ಮಾನವನ್ನು ಮಾಡಿರುವ ಸರಕಾರವನ್ನು ಅಸಹ್ಯಕರ ನಾಟಕವೆಂದು, ಇದು ನೀನು ಸತ್ತಂತೆ ಮಾಡು - ನಾನು ಅತ್ತಂತೆ ಮಾಡುತ್ತೇನೆ ಎನ್ನುವ ರೀತಿಯಲ್ಲಿ ಇದೆಯೆಂದು ರೈತ ಸಂಘದ ಜಿಲ್ಲಾ ಸಮಿತಿ ಭಾವಿಸಿದೆ. ಇಂತಹ ಕಣ್ಣೊರೆಸುವ ತಂತ್ರಗಳಿಗೆ ರೈತರು ಬಲಿಯಾಗದೆ ಹೋರಾಟವನ್ನು ಮುಂದುವರಿಸಬೇಕೆಂದು ರೈತ ಸಂಘದ ಜಿಲ್ಲಾ ಸಮಿತಿ ವಿನಂತಿಸಿದೆ.

ಪೆರುವಿನ ಒತ್ತೆಯಾಳು ಬಿಕ್ಕಟ್ಟು

ಕೊಲೆಗಡುಕ ಸೈನಿಕರಿಗೆ ಕ್ಷಮಾದಾನ, ಜನಪರ ಗೆರಿಲ್ಲಾಗಳಿಗೆ ಜೈಲಿನಲ್ಲಿ ನರಕಯಾತನೆಯ ಫಲ

ಪೆರುವಿನ ರಾಜಧಾನಿ ಲಿಮಾದಲ್ಲಿ ಒತ್ತೆಯಾಳು ಬಿಕ್ಕಟ್ಟು ಆರಂಭವಾಗಿ ಒಂದು ತಿಂಗಳಾದರೂ ಪರಿಹಾರವಾಗಿಲ್ಲ. 75 ಜನ ಪೆರುವಿನ ಮಂತ್ರಿಗಳು, ಹಿರಿಯ ಅಧಿಕಾರಿಗಳು, ಜಪಾನಿ ರಾಯಭಾರಿ, ಜಪಾನಿ ಗಣ್ಯ ಕೈಗಾರಿಕೋದ್ಯಮಿಗಳನ್ನು ಬಿಟ್ಟು ಮುನ್ನೂರಕ್ಕೂ ಹೆಚ್ಚು ಇತರ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ. ಪೆರು, ಜಪಾನು ಹಾಗೂ ಅಮೇರಿಕಗಳ ಎಲ್ಲಾ ಒತ್ತಡ ತಂತ್ರಗಳಿಗೆ ಮಣಿಯದೆ, ಗೆರಿಲ್ಲಾಗಳು ತಮ್ಮ ಮೊದಲ ಬೇಡಿಕೆಗೆ ಪಟ್ಟು ಹಿಡಿದಿದ್ದಾರೆ. ಸರಕಾರ ಹಾಗೂ ಸಾಮ್ರಾಜ್ಯಶಾಹಿ ಸುದ್ದಿ ಮಾಧ್ಯಮ ಮಾಡುತ್ತಿರುವ ಗೆರಿಲ್ಲಾಗಳು ತಮ್ಮನ್ನು ಹೋಗಲು ಬಿಟ್ಟರೆ, ತಮ್ಮ ಮೊದಲ ಬೇಡಿಕೆಗಳನ್ನು ಬಿಟ್ಟು ಕೊಡಲು ಸಿದ್ಧರಿದ್ದಾರೆ ಎಂಬ ಅಪಪ್ರಚಾರಕ್ಕೆ ವ್ಯತಿರಿಕ್ತವಾಗಿ, ತಮ್ಮ ಬೇಡಿಕೆಗೆ ಪಟ್ಟು ಹಿಡಿದಿದ್ದಾರೆ. ಅವರ ಬೇಡಿಕೆ ಅವರ ನಾಲ್ಕು ನೂರು ಜನ ಗೆರಿಲ್ಲಾ ಸಂಗಾತಿಗಳು ಹಾಗೂ ನಾಯಕ ವಿಕ್ಟರ್ ಪೋಲೇ ಇವರನ್ನು ಜೈಲಿನಿಂದ ಬಿಡುಗಡೆ ಮಾಡುವುದು.

ಮುಂದುವರಿಯುತ್ತಿರುವ ಪೆರುವಿನ ಒತ್ತೆಯಾಳು ಬಿಕ್ಕಟ್ಟು, ಪೆರು ಹಾಗೂ ಅದರ ಬೆಂಬಲಿಗರು ಹೇಳುವಂತೆ ಭಯೋತ್ಪಾದಕ ಚಟುವಟಿಕೆಯೇ? ಈ ಗೆರಿಲ್ಲಾಗಳು ಯಾರು? ಪೆರುವಿನ ಸರಕಾರದ ಸ್ವಭಾವ ಏನು?

ಪೆರುವಿನ ಅಧ್ಯಕ್ಷ ಫುಜಿಮೊರಿ ಪೆರುವಿನ ಆಳುವ ವಲಯಗಳ ಹಾಗೂ ಸಾಮ್ರಾಜ್ಯಶಾಹಿ ವಲಯಗಳಲ್ಲಿ 'ಜನಪ್ರಿಯ' ನಾಯಕ. ಯಾಕೆ? 1990ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಆತನ ಮುಖ್ಯ ಸಾಧನೆಯೆಂದರೆ, ಎರಡು ಪ್ರಬಲವಾಗಿದ್ದ, ಜನರ ಅನುಕಂಪ ಇರುವ ಗೆರಿಲ್ಲಾ ಚಳುವಳಿಗಳನ್ನು ದಮನ ಮಾಡಿದ್ದು, ಪೆರುವನ್ನು ಸಾಮ್ರಾಜ್ಯಶಾಹಿ ಬಂಡವಾಳ ಹೂಡಿಕೆಗೆ ಎಂದರೆ ಶೋಷಣೆಗೆ ದಕ್ಷಿಣ ಅಮೇರಿಕದಲ್ಲೇಅತ್ಯಂತ ಪ್ರಶಸ್ತವಾದ ದೇಶವಾಗಿ ಮಾಡಿದ್ದು! 1995ರ ಚುನಾವಣೆಯಲ್ಲಿ ಅಧ್ಯಕ್ಷ ಫುಜಿಮೊರಿ ಅದೇ ತನ್ನ ಸಾಧನೆ ಎಂದು ಬೆನ್ನು ತಟ್ಟಿ ಕೊಳ್ಳುತ್ತಿದ್ದರಂತೆ. ಪೆರುವಿನ ಎರಡು ಪ್ರಮುಖ ಗೆರಿಲ್ಲಾಗುಂಪುಗಳ ನಾಯಕರನ್ನು ಹಾಗೂ ಹಲವಾರು ಕಾರ್ಯಕರ್ತರನ್ನು ಜೈಲಿನಲ್ಲಿ ಹಾಕಿ ನರಕಯಾತನೆ ಕೊಡಲಾಗುತ್ತಿದೆ. ಗೆರಿಲ್ಲಾಗಳನ್ನು ದಮನ ಮಾಡುವ ಹೆಸರಲ್ಲಿ, ದೇಶದ ಬಹುಭಾಗದಲ್ಲಿ ಪೋಲೀಸ್ ರಾಜ್ಯ ಸ್ಥಾಪಿಸಲಾಗಿದೆ. ಎಲ್ಲಾ 'ಮಾನವ ಹಕ್ಕು'ಗಳನ್ನು ದಮನ ಮಾಡಲಾಗಿದೆ. ಕಳೆದ ಎರಡು ವರ್ಷಗಳಿಂದ ಎರಡು ಗೆರಿಲ್ಲಾ ಗುಂಪುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂಬ ಸರಕಾರದ ಹೇಳಿಕೆ ಎಷ್ಟು ಪೊಳ್ಳು ಎಂದು ಈಗ ರುಜುವಾತಾಗಿದೆ.

Shining Path(ಹೊಳೆಯುವ ದಾರಿ) ಎಂಬ ಗೆರಿಲ್ಲಾ ಗುಂಪು ದೊಡ್ಡದು. ಅದು ಇತ್ತೀಚಿನವರೆಗೆ ಹೆಚ್ಚು ಸಕ್ರಿಯವಾಗಿದ್ದದ್ದು. ಅದರ ನಾಯಕ ಜೈಲಿನಲ್ಲಿ ನರಕಯಾತನೆ ತಾಳಲಾರದೆ, ಫುಜಿಮೊರಿ ಸರಕಾರಕ್ಕೆ ಒಳ್ಳೆ ಸರ್ಟಿಫಿಕೇಟ್ ಹೇಳಿಕೆ ಕೊಟ್ಟದ್ದರಿಂದ, ಆ ಚಳುವಳಿ ಇಬ್ಭಾಗವಾಯಿತು. ಆದರೂ ಇತ್ತೀಚಿನ ತಿಂಗಳುಗಳಲ್ಲಿ ಅದು ತಾತ್ಕಾಲಿಕವಾಗಿ ಒಂದು ಪಟ್ಟಣವನ್ನೇ ವಶಪಡಿಸಿಕೊಂಡಿತ್ತು. Shining Path ಉಗ್ರಗಾಮಿ ಮಾವೋವಾದಿ ಗೆರಿಲ್ಲಾ ಚಳುವಳಿ. 80ರ ದಶಕದ ಕೊನೆಯಲ್ಲಿ ಪೆರು ಸರಕಾರವನ್ನು ತನ್ನ ಸಶಸ್ತ್ರ ಕಾರ್ಯಾಚರಣೆಗಳಿಂದ ನಡುಗಿಸಿತ್ತು. ಈಗ ಒತ್ತೆಯಾಳುಗಳನ್ನು ಹಿಡಿದಿರುವ 'ತುಪಾಕ್ ಅಮರು' ಕ್ಯೂಬನ್ ಕ್ರಾಂತಿಯಿಂದ ಸ್ಫೂರ್ತಿ ಪಡೆದ ಗುಂಪು. ದುಸ್ಸಾಹಸವಾದಗಳಲ್ಲಿ ತೊಡಗದೆ, ತನ್ನ ಸಶಸ್ತ್ರ ಕಾರ್ಯಾಚರಣೆಗಳನ್ನು ಜಾಗರೂಕತೆಯಿಂದ ಆರಿಸಿದ ಗುರಿಗಳ ಮೇಲೆ ನಡೆಸುತ್ತಿತ್ತು. ಅಮೇರಿಕಾದ ಕೋಳಿ ಆಹಾರಗಳ ಸೂಪರ್ ಚೈನ್ ಸ್ಟೋರ್ 'ಕೆಂಟುಕಿ ಫ್ರೈಡ್ ಚಿಕನ್'ಗಳ ಮೇಲೆ ಧಾಳಿ ಇಡುವುದು ಅದರ ಸಾಮಾನ್ಯ ಅಭ್ಯಾಸ. ಇಷ್ಟು ದೊಡ್ಡ ಕಾರ್ಯಾಚರಣೆ ಇದೇ ಮೊದಲು.

ಇತರ ಎಲ್ಲಾ ದಕ್ಷಿಣ ಅಮೇರಿಕಾದ ದೇಶಗಳಲ್ಲಿ ಗೆರಿಲ್ಲಾಗಳ ಜತೆ ಸರಕಾರ ಶಾಂತಿ ಒಪ್ಪಂದ್ಕೆ ಹೊರಟಿದ್ದರೆ(ಇತ್ತೀಚಿನ ಉದಾಹರಣೆ ಗ್ವಾಟೆಮಾಲಾ), ಅಧ್ಯಕ್ಷ ಫುಜಿಮೊರಿ ಮಿಲಿಟರಿ ಪರಿಹಾರಕ್ಕೆ ಹೊರಟಿದ್ದಾರೆ. ಗೆರಿಲ್ಲಾ ನಾಯಕರು ಹಾಗೂ ಕಾರ್ಯಕರ್ತರು ಜೈಲಿನಲ್ಲಿ ನರಕಯಾತನೆ ಅನುಭವಿಸುತ್ತಿದ್ದಾರೆ. ಗೆರಿಲ್ಲಾಗಳ ಮಾನಸಿಕ, ದೈಹಿಕ ನಾಶವೇ ಉದ್ದೇಶವಾಗಿರುವ ಜೈಲುಗಳು ಸರಕಾರದ ನೀತಿಯಾ[illegible]ದೆ. ಇಬ್ಬರು ನಾಯಕರನ್ನು ಗೂಡಿನ[illegible]ರೆ ಮನೆಯಲ್ಲಿಡಲಾಗಿದೆ. ಅವರು ಸೂರ್ಯನ ಬೆಳಕಿನಲ್ಲಿ ನೆಟ್ಟಗೆ ನಿಲ್ಲಲು ಸಾಧ್ಯವಾಗುವುದು ಕೇವಲ ದಿನದಲ್ಲಿ ಅರ್ಧ ಗಂಟೆ. ಇಂತಹ ದಾರುಣ ಪರಿಸ್ಥಿತಿಯಲ್ಲಿಡಲಾಗಿದೆ. ಆದರೆ ಕಳೆದ ಹದಿನೈದು ವರ್ಷಗಳಿಂದ ಗೆರಿಲ್ಲಾ ಜತೆ ಕಾದಾಟದಲ್ಲಿ ಅತ್ಯಾಚಾರಗಳನ್ನು ಎಸಗಿದ ಪೋಲೀಸು, ಮಿಲಿಟರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪೂರ್ಣ ಕ್ಷಮಾದಾನ ಘೋಷಿಸಿದ್ದು ಫುಜಿಮೊರಿ ಸರಕಾರದ ಮೊದಲ ಕೆಲಸಗಳಲ್ಲಿ ಒಂದಾಗಿತ್ತು.

ಈಗಿನ ವಿಶ್ಲೇಷಣೆಗಳ ಪ್ರಕಾರ ಸದ್ಯಕ್ಕೆ ಈ ಬಿಕ್ಕಟ್ಟು ಪರಿಹಾರ ಆಗುವ ಸಾಧ್ಯತೆ ಇಲ್ಲ. ಗೆರಿಲ್ಲಾಗಳು ತಮ್ಮ ಬೇಡಿಕೆ ಬಗ್ಗೆ ಪಟ್ಟುಹಿಡಿದಿದ್ದಾರೆ. ಪೆರು ಸರಕಾರ ಬಲ ಪ್ರಯೋಗ ಮಾಡಬಯಸುತ್ತದೆ. ಆದರೆ ಒತ್ತೆಯಾಳುಗಳು ಇರುವುದು ಜಪಾನಿ ರಾಯಭಾರ ಕಚೇರಿ ಅಂದರೆ ಜಪಾನಿ ಸಾರ್ವಭೌಮ ಪ್ರದೇಶವಾದ್ದರಿಂದ ಜಪಾನ್ ಸರಕಾರದ ಅನುಮತಿ ಇಲ್ಲದೆ ಬಲ ಪ್ರಯೋಗ ಮಾಡುವಂತಿಲ್ಲ. ಆದರೆ ಪೆರು, ಜಪಾನ್ ಹಾಗೂ ಅಮೇರಿಕನ್ ಸರಕಾರಗಳು ಭಯೋತ್ಪಾದಕ ಕೃತ್ಯಗಳನ್ನು ಬಳಸುವ ಎಲ್ಲಾ ಸಾಧ್ಯತೆಗಳು ಇವೆ ಎಂದು ಅಂದಾಜಿದೆ.

ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಸಾಮ್ರಾಜ್ಯಶಾಹಿ ದೇಶಗಳ ದಮನದಿಂದ ಜನರ ಜೀವನವೇ ಕುಸಿಯುತ್ತಿದೆ. ಸರಕಾರ ಹೆಚ್ಚೆಚ್ಚು ಜನರಿಂದ ದೂರವಾಗುತ್ತಿದೆ. ಆದ್ದರಿಂದ ಗೆರಿಲ್ಲಾ ಚಳುವಳಿಗಳು ಜನಪ್ರಿಯವಾಗುತ್ತಿವೆ.

ಫುಜಿಮೊರಿ ಸರಕಾರ ಈ ಬಿಕ್ಕಟ್ಟಿನಿಂದ ಹೊರಬರಬಲ್ಲದೇ?

ಲೋಕಸಂಚಾರ



ಶರತ್‌ಚಂದ್ರ

ಅಲ್ಜೀರಿಯಾದಲ್ಲಿ ಬಾಂಬ್ ಸ್ಫೋಟ

ಅಲ್ಜೀರಿಯಾದ ರಾಜಧಾನಿ ಅಲ್ಜೀರ್ಸ್‌ನಲ್ಲಿ ಇತ್ತೀಚೆಗೆ ನಡೆದ ವಾಹನವೊಂದರಲ್ಲಿ ಆದ ಬಾಂಬ್ ಸ್ಫೋಟದಿಂದ್, ಪುನಃ ಭಯೋತ್ಪಾದಕ ಹಿಂಸಾಚಾರ ತಾರಕಕ್ಕೇರಿದೆ. ಕನಿಷ್ಟ 21 ಜನ ಸತ್ತು, 60ಜನರು ಗಾಯಗೊಂಡಿದ್ದಾರೆ. ಕೇವಲ 12 ದಿನ ಹಿಂದೆ ಇಂತಹುದೇ ಕಾರ್ ಬಾಂಬ್ ಸ್ಫೋಟ ನಡೆದಿತ್ತು. ಎರಡೇ ದಿನಗಳ ಹಿಂದೆ ಉತ್ತರ ಅಲ್ಜೀರಿಯಾದಲ್ಲಿ ಹಳ್ಳಿಯೊಂದರಲ್ಲಿ ನಡೆದ ನರಮೇಧದಲ್ಲಿ 36 ಜನ ಸತ್ತಿದ್ದರು. ಯಾರೂ ಈ ಭಯೋತ್ಪಾದಕ ಕೃತ್ಯಗಳಿಗೆ ಜವಾಬ್ದಾರಿ ತೆಗೆದುಕೊಂಡಿಲ್ಲವಾದರೂ, ಇದು ಇಸ್ಲಾಮಿಕ್ ಮೂಲಭೂತವಾದಿಗಳ ಕೃತ್ಯ ಎಂದು ಶಂಕಿಸಲಾಗಿದೆ.

1992ರಿಂದೀಚೆಗೆ ಇಸ್ಲಾಮಿಕ್ ಮೂಲಭೂತವಾದಿಗಳು ಹಾಗೂ ಸರಕಾರದ ನಡುವೆ ನಡೆಯುತ್ತಿರುವ ಹಿಂಸಾತ್ಮಕ ಘರ್ಷಣೆಗಳಿಂದ ಸುಮಾರು 60 ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದಾರೆ ಎನ್ನಲಾಗಿದೆ.

ರಮಜಾನ್‌ನ ಉಪವಾಸದ ಈ ತಿಂಗಳಲ್ಲಿ ಮೂಲಭೂತವಾದಿಗಳ ಈ ಭಯೋತ್ಪಾದಕ ಕೃತ್ಯ ಏನನ್ನು ಸಾಧಿಸಲು ಎಂದು ಎಲ್ಲರಿಗೂ ಆಶ್ಚರ್ಯವಾಗಿದೆ.

ಫಿನ್‌ಲ್ಯಾಂಡ್ ಕಮ್ಯುನಿಸ್ಟ್ ಪಾರ್ಟಿ ಪುನರುಜ್ಜೀವನ

ಸೋವಿಯತ್ ಒಕ್ಕೂಟದ ವಿಸರ್ಜನೆಯಿಂದ ಜಗತ್ತಿನಾದ್ಯಂತ ಹಲವಾರು ಕಮ್ಯುನಿಸ್ಟ್ ಪಕ್ಷಗಳು ದಂಗಾಗಿದ್ದವು.ಕೆಲವು ಪಕ್ಷಗಳ ಮೇಲೆ ಇದು ತೀವ್ರ ಆಘಾತವಾಗಿತ್ತು. ಕೆಲವು ಪಕ್ಷಗಳಲ್ಲಿ ತೀವ್ರ ಸೈದ್ಧಾಂತಿಕ ಗೊಂದಲವಾದರೆ, ಇನ್ನು ಕೆಲವು ಪಕ್ಷಗಳು ಕಮ್ಯುನಿಸಂಗೆ ಭವಿಷ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದು ಪಾರ್ಟಿಯನ್ನೇ ವಿಸರ್ಜಿಸಿದವು. ಫಿನ್‌ಲ್ಯಾಂಡಿನ ಕಮ್ಯುನಿಸ್ಟ್ ಪಾರ್ಟಿ ಇಂತಹ ಪಾರ್ಟಿಗಳಲ್ಲೊಂದು. 1991ರ ಹಳೆ ಸುದ್ದಿ ಈಗ ಯಾಕೆ ಎಂದಿರಾ? ಹೊಸ ಸುದ್ದಿ ಎಂದರೆ ಫಿನ್‌ಲ್ಯಾಂಡ್ ಕಮ್ಯುನಿಸ್ಟ್ ಪಾರ್ಟಿ ಪುನರುಜ್ಜೀವನಗೊಳಿಸುವ ವಿಶೇಷ ಮಹಾಧಿವೇಶನ ಇತ್ತೀಚೆಗೆ ಆಗಸ್ಟ್ 96ರಲ್ಲಿ ನಡೆಯಿತು. ಮೊದಲ ಸಮಾಜವಾದಿ ದೇಶದಲ್ಲಿ ಸಮಾಜವಾದಕ್ಕಾದ ಹಿನ್ನಡೆಯಿಂದಾಗಿ ಪಕ್ಷ ವಿಸರ್ಜಿಸಿದ್ದು ತಪ್ಪು ಎಂದು ಒಂಭತ್ತು ಸಾವಿರ ಸದಸ್ಯರನ್ನು ಪ್ರತಿನಿಧಿಸಿದ ಸುಮಾರು ಮುನ್ನೂರು ಪ್ರತಿನಿಧಿಗಳ ಅಭಿಪ್ರಾಯವಾಗಿತ್ತು. ವಿಶೇಷ ಮಹಾಧಿವೇಶನ ಹೊಸ ಕಾರ್ಯಕ್ರಮ, ನಿಯಮಾವಳಿಗಳನ್ನು ಅಂಗೀಕರಿಸಿ, ಹೊಸ ನಾಯಕತ್ವವನ್ನು ಚುನಾಯಿಸಿತು.

ಪಕ್ಷ 1991ರಲ್ಲಿ ಸೈದ್ಧಾಂತಿಕ ಗೊಂದಲದಲ್ಲಿ ತನ್ನನ್ನು ತಾನೇ ವಿಸರ್ಜಿಸಿಕೊಂಡಿತ್ತು. ಪಕ್ಷದ ಸದಸ್ಯರು ಫಿನ್‌ಲ್ಯಾಂಡಿನ ಎಡಪಂಥೀಯ ಒಕ್ಕೂಟ ಎಂಬ ರಂಗದ ಸದಸ್ಯರಾಗಿ ರಾಜಕೀಯ ಕೆಲಸ ನಿರ್ವಹಿಸುತ್ತಿದ್ದರು. ಒಂದು ರೀತಿಯಲ್ಲಿ ಹೇಳುವುದಾದರೆ ಈ ಒಕ್ಕೂಟದ ಜತೆ ಪಕ್ಷ ವಿಲೀನವಾಗಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಕಮ್ಯುನಿಸ್ಟ್ ಪಕ್ಷದ ಸದಸ್ಯರಿಗೆ ಈ ಒಕ್ಕೂಟದ ಒಳಗೆ ಕೆಲಸ ನಿರ್ವಹಿಸುವುದು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಎಡಪಂಥೀಯ ಒಕ್ಕೂಟ ಫಿನ್‌ಲ್ಯಾಂಡಿನ ಸಂಪ್ರದಾಯವಾದಿ ಆಳುವ ಪಕ್ಷದ ಸರಕಾರದಲ್ಲಿ ಭಾಗವಹಿಸ ಹೊರಟಿದೆ. ಒಕ್ಕೂಟ ತಾನೇ ಒಂದು ಪಕ್ಷವಾಗಿ ಕಮ್ಯುನಿಸ್ಟರು ಸದಸ್ಯರಾಗುವ ಹಾಗಿಲ್ಲ ಎಂಬ ನಿಯಮ ಮಾಡ ಹೊರಟಿತ್ತು. ಫಿನ್‌ಲ್ಯಾಂಡಿನ ಎಡಪಂಥೀಯ ಒಕ್ಕೂಟದ ಒಮ್ಮತ ನೀತಿಯಾಗಿದ್ದ-ಮಿಲಿಟರಿ ತಟಸ್ಥತೆ, ಯುರೋಪಿಯನ್ ಆರ್ಥಿಕ ಒಕ್ಕೂಟದ ವಿರೋಧ, ಸಾಮಾಜಿಕ ಕಲ್ಯಾಣ ವೆಚ್ಚದಲ್ಲಿ ಕಡಿತಕ್ಕೆ ವಿರೋಧ- ಇವುಗಳನ್ನೆಲ್ಲಾ ಬಿಟ್ಟು ಕೊಡಲು ಆರಂಭಿಸಿತ್ತು.

ಇಂತಹ ಫಿನ್‌ಲ್ಯಾಂಡಿನ ರಾಜಕೀಯ ಸನ್ನಿವೇಶದಲ್ಲಿ ಒಂದು ಹೊಸ ರೀತಿಯ ಕ್ರಾಂತಿಕಾರಿ ಪಕ್ಷದ ಅಗತ್ಯವಿದೆ ಎಂಬ ಬಲವಾದ ಅನಿಸಿಕೆಯಿಂದ ಕಮ್ಯುನಿಸ್ಟ್ ಪಕ್ಷವನ್ನು ಪುನರುಜ್ಜೀವನಗೊಳಿಸಲಾಗಿದೆ. ಫಿನ್‌ಲ್ಯಾಂಡಿನ ಕಮ್ಯುನಿಸ್ಟ್ ಪಕ್ಷ ಇತರ ಪಕ್ಷಗಳಂತೆ ಬಂಡವಾಳಶಾಹಿ ಮಾರುಕಟ್ಟೆ ಶಕ್ತಿಗಳಿಗೆ ಅಡಿಯಾಳಾಗದೆ, ದುರ್ಬಲ ಜನವಿಭಾಗಗಳ, ದುಡಿಯುವವರ ಹಕ್ಕಿಗೆ ಪಣ ತೊಡುವುದು ಎಂದು ಕಾರ್ಯಕ್ರಮ ಹೇಳಿದೆ. ಬಂಡವಾಳಶಾಹಿ ಮಾನವ ಸಮುದಾಯದ ಯಾವುದೇ ಸಮಸ್ಯೆಗಳನ್ನು ಬಗೆಹರಿಸಲಾರದು, ಇದಕ್ಕಾಗಿ ಹೊಸ ರೀತಿಯ ಸಮಾಜವಾದ ಕಟ್ಟಬೇಕಾಗಿದೆ ಎಂದೂ ಕಾರ್ಯಕ್ರಮ ಹೇಳಿದೆ.

ಅಮೇರಿಕಾದ ಪಾರ್ಲಿಮೆಂಟಿನಲ್ಲೊಂದು 'ಪ್ರಗತಿಪರ ಗುಂಪು'?!

ಅಮೇರಿಕಾದ ಪಾರ್ಲಿಮೆಂಟಿನಲ್ಲಿ 'ಪ್ರಗತಿಪರ ಗುಂಪೇ' ಎಂದು ಮೂಗು ಮುರಿಯಬೇಡಿ, ಕಾಲ ಬದಲಾಗುತ್ತಿದೆ. ಅಮೇರಿಕಾದ ಪಾರ್ಲಿಮೆಂಟಿನಲ್ಲಿ 1990ರಿಂದ ಈಗಾಗಲೇ ಕೆಲಸ ಮಾಡುತ್ತಿದ್ದ 'ಪ್ರಗತಿಪರ ಗುಂಪಿ'ನ ಸದಸ್ಯತ್ವ 5ರಿಂದ 50ಕ್ಕೇರಿದೆ. ಈ ಗುಂಪಿನ ನಾಯಕ ಅಮೇರಿಕಾದ ಪಾರ್ಲಿಮೆಂಟಿನಲ್ಲಿ ಏಕಮೇವ ಪಕ್ಷೇತರ ಬರ್ನಿ ಸ್ಯಾಂಡರ್ಸ್. ಈತ ಅಮೇರಿಕದ ಪಾರ್ಲಿಮೆಂಟಿನ ಏಕಮಾತ್ರ ಸೋಶಲಿಸ್ಟ್. ಕ್ಲಿಂಟನ್ ರಾಜಕೀಯ ಧೋರಣೆಗಳು ಹೆಚ್ಚೆಚ್ಚು ಬಲಪಂಥದತ್ತ ವಾಲುತ್ತಿರುವ ಹಿನ್ನೆಲೆಯಲ್ಲಿ ಜನಪರ, ಎಡ, ಪ್ರಗತಿಪರ ಧೋರಣೆಗಳಿಗೆ ಹೋರಾಡುವುದು ಈ ಗುಂಪಿನ ಉದ್ದೇಶ. ಆರೋಗ್ಯ ಸೇವೆಯಲ್ಲಿ ಕಡಿತ, ಆದಾಯಗಳಲ್ಲಿ ಭಾರಿ ಅಂತರ, ಪ್ರಜಾಪ್ರಭುತ್ವದಲ್ಲಿ ದೊಡ್ಡ ದುಡ್ಡಿನ ಪಾತ್ರ ಹಾಗೂ ಜನರ ಕಡಿಮೆಯಾದ ಆಸಕ್ತಿ, ಮಾಧ್ಯಮಗಳ ಮೇಲೆ ದೈತ್ಯ ಕಂಪನಿಗಳ ಹಿಡಿತ- ಈ ಗುಂಪಿನ ಪ್ರಮುಖ ಕಾಳಜಿಗಳು.

ಈ ಗುಂಪಿಗೆ ಅಮೇರಿಕದ ಪ್ರಬಲ ಟ್ರೇಡ್ ಯೂನಿಯನ್‌ಗಳು ಹೊಸ ನಾಯಕತ್ವದಲ್ಲಿ ಬೆಂಬಲಿಸುತ್ತಿವೆ. ಸುಮಾರು 60 ಕ್ಷೇತ್ರಗಳಲ್ಲಿ ಅಮೇರಿಕಾದ ಟ್ರೇಡ್ ಯೂನಿಯನ್‌ಗಳು ರಿಪಬ್ಲಿಕರನ್ನರನ್ನು ಸೋಲಿಸಲು ಪ್ರಗತಿಪರ ಡೆಮೊಕ್ರಾಟಿಕ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಮೂರೂವರೆ ಕೋಟಿ ಡಾಲರು ವೆಚ್ಚ ಮಾಡಿತ್ತು. ಪ್ರಗತಿಪರ ಗುಂಪಿನ ಸದಸ್ಯರು ಹೆಚ್ಚಿನವರು ಟ್ರೇಡ್ ಯೂನಿಯನ್‌ಗಳಬೆಂಬಲದಿಂದ ಗೆದ್ದವರು.

ಅಮೇರಿಕದ ರಾಜಕೀಯದಲ್ಲಿ ಹೊಸ ಗಾಳಿ ಬೀಸುತ್ತಿದೆ. ರೇಗನ್‌ರ ಅಧ್ಯಕ್ಷತೆಯಿಂದ ಆರಂಭವಾಗಿ ರಿಪಬ್ಲಿಕನ್ ಬಹುಮತದ ಪಾರ್ಲಿಮೆಂಟು ಆಯ್ಕೆಯವರೆಗೆ ಬಲಪಂಥೀಯ ಅಧಿಪತ್ಯವಿರುವ ಪರಿಸ್ಥಿತಿಗೊಂದು ಪರ್ಯಾಯ ಹಾತೊರೆಯುತ್ತಿರುವುದರ ದ್ಯೋತಕ ಅದು.

ದೇಶಪ್ರೇಮಿ ಬೋಸ್‌ಗೆ ಸುರ್ಜೀತ್ ಶ್ರದ್ಧಾಂಜಲಿ

ನಾಲ್ಕನೇ ಪುಟದಿಂದ

ಮಿತಿಗಳಿದ್ದರೂ

ಅತ್ಯುನ್ನತ ಮುಖಂಡ

ಅದೇನೇ ಇರಲಿ *"ಸುಭಾಶ್ ಚಂದ್ರ ಬೋಸರು ಮಹಾತ್ಮಾ ಗಾಂಧಿ ಮತ್ತು ಜವಾಹರಲಾಲ್ ನೆಹರೂ ನಂತರ ಭಾರತದ ಅತ್ಯುತ್ತಮ ಮುಖಂಡರು ಎನ್ನುವುದರಲ್ಲಿ ಸಂದೇಹವೇ ಇಲ್ಲ"* ಎನ್ನುತ್ತಾರೆ ಸುರ್ಜಿತ್. ನಿಜ, 50 ವರ್ಷಗಳ ಸ್ವಾತಂತ್ರ್ಯದ ನಂತರ ರಾಷ್ಟ್ರೀಯ ಆಂದೋಲನದ ಮುಖಂಡರ ಪಾತ್ರದ ಸರಿಯಾದ ವಿಶ್ಲೇಷಣೆ ಅಗತ್ಯ ಎನ್ನುತ್ತಾ ಸುರ್ಜಿತ್ "ಜವಾಹರಲಾಲ್ ನೆಹರೂರವರಿಗೆ ಹೋಲಿಸಿದರೆ ಸುಭಾಶ್ ಚಂದ್ರ ಬೋಸ್ ಎಂದೂ ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂ ನಡುವಿನ ಸಂಬಂಧವನ್ನು ಕಾಣಲಿಲ್ಲ. 'ಶತ್ರುವಿನ ಶತ್ರು ನಮ್ಮ ಮಿತ್ರ' ಎಂಬ ಸರಳ ಸಿದ್ಧಾಂತವನ್ನು ಅವರು ನಂಬಿದ್ದರು. ಅಂತ ರ್ರಾಷ್ಟ್ರೀಯ ರಂಗದಲ್ಲಿನ ಬೆಳವಣಿಗೆಗಳು ಭಾರತವನ್ನು ತಟ್ಟುತ್ತವೆ, ನಾವು ಆ ಬಗ್ಗೆ ಸಂಬಂಧವಿಲ್ಲದವರಂತೆ ಇರಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಲು ಅವರು ಸಿದ್ಧರಿರಲಿಲ್ಲ. ಅವರು ಇಡೀ ವಾತಾವರಣವನ್ನು ಕ್ರಾಂತಿ ಕಾರಕಗೊಳಿಸಲು ಕಾಣಿಕೆ ನೀಡಿದರೂ ಬೆಳವಣಿಗೆಗಳನ್ನು ವರ್ಗ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಅವರ ಕಣ್ಣೋಟವೂ ಭಿನ್ನವಾಗಿತ್ತು. ಫ್ಯಾಸಿಸ್ಟ್ ದೇಶಗಳಲ್ಲಿನ ಕೆಲವು ಸರ್ವಾಧಿಕಾರಿ ಪ್ರವೃತ್ತಿಗಳ ಬಗ್ಗೆ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಒಂದು ಅಂಶ ಅವರಿಗೆ ಸ್ಪಷ್ಟವಾಗಿತ್ತು, ಅದೆಂದರೆ ಗಾಂಧೀಜಿಯ ಅಹಿಂಸೆಯ ವಿಚಾರದಿಂದ ಸ್ವಾತಂತ್ರ್ಯ ಸಾಧ್ಯವಿಲ್ಲ ಎಂದು. ಅವರು ಸ್ವಾತಂತ್ರ್ಯಪಡೆಯಲು ಎಲ್ಲಾ ವಿಧಾನಗಳನ್ನು ಬಳಸಲು ಸಿದ್ಧರಿದ್ದರು - ಹಿಂಸೆಯಿಂದ ಹಿಡಿದು ವಿದೇಶೀ ಶಕ್ತಿಗಳ ನೆರವು ಪಡೆಯುವವರೆಗೂ. ಈ ವಿದೇಶೀ ಶಕ್ತಿಗಳು ಸ್ವಾತಂತ್ರ್ಯದ ಬಗ್ಗೆ ಯಾವ ನಿಲುವು ತಳೆದಿದ್ದಾರೆ ಎಂಬುದು ಅವರಿಗೆ ಬೇಕಾಗಿರಲಿಲ್ಲ. ಅಂತರ್ರಾಷ್ಟ್ರೀಯ ಸನ್ನಿವೇಶವನ್ನು, ಫ್ಯಾಸಿಸಂ ಒಡ್ಡಿದ ಭಯಾನಕ ಅಪಾಯವನ್ನು ಅರಿಯಲಾರದ ತಮ್ಮ ಮಿತಿಗಳಿಂದಾಗಿ ಅವರಿಗೆ ಪರಿಸ್ಥಿತಿಯ ವೈಜ್ಞಾನಿಕ ಅಂದಾಜು ಮಾಡಲಾಗಲಿಲ್ಲ. ಅದೇನೇ ಇದ್ದರೂ ದೇಶವನ್ನು ವಿದೇಶೀ ದಾಸ್ಯದ ನೊಗದಿಂದ ಮುಕ್ತಗೊಳಿಸಲು ಅವರ ದೃಢ ನಿಶ್ಚಯ ಮಾತ್ರ ಪ್ರಶ್ನಾತೀತ" ಎಂದು ತಮ್ಮ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಫ್ಯಾಸಿಸಂನ ಮೇಲೆ ವಿಜಯ, ಅದರಲ್ಲಿ ಸೋವಿಯತ್ ಒಕ್ಕೂಟದ ಪಾತ್ರ ನಂತರ ಇಡೀ ವಾತಾವರಣದಲ್ಲಿ ವಿದ್ಯುತ್ ಸಂಚಾರವಾಗುವಂತೆ ಮಾಡಿತು. ದೇಶಾದ್ಯಂತ ಬೋಸರ 'ಆಝಾದ್ ಹಿಂದ್ ಸೇನೆ'ಯ ಸದಸ್ಯರ ಮೇಲೆ ಬ್ರಿಟಿಷರು ಹಾಕಿದ ಮೊಕದ್ದಮೆಗಳಿಗೆ ವ್ಯಕ್ತಗೊಂಡ ತೀವ್ರ ಪ್ರತಿಭಟನೆ, ಮುಷ್ಕರಗಳು, ಬಂಗಾಳದ, ಅಸ್ಸಾಮಿನ ರೈತರ ಹೋರಾಟಗಳು-ತೇಭಾಗ, ಸುರ್ಮೀರ್ ಕಣಿವೆ ಹೋರಾಟಗಳು-ಮಹಾರಾಷ್ಟ್ರದ ವಾರಳೀ ಬುಡಕಟ್ಟುಜನರ ಹೋರಾಟ, ಕೇರಳದ ಪುನ್ನಪ್ರ-ವಾಯಲಾರ್ ಹೋರಾಟ, ಎಲ್ಲಕ್ಕೂ ಮಿಗಿಲಾಗಿ ತೆಲಂಗಾಣಾದ ರೈತರ ಧೀರ ಸಮರ, ಕೊನೆಯದಾಗಿ ಬ್ರಿಟಿಷರ ಅಡಿಯಿದ್ದ ನಾವಿಕ ಪಡೆಯ ಭಾರತೀಯ ನಾವಿಕರ ಪ್ರಖ್ಯಾತ ರಿನ್ ಬಂಡಾಯ, ಅದಕ್ಕೆ ಕಾರ್ಮಿಕ ವರ್ಗದ ಬೆಂಬಲ ರಾಷ್ಟ್ರೀಯ ಆಂದೋಲನಕ್ಕೆ ಹೊಸ ತಿರುವು ನೀಡಿತು, ಬ್ರಿಟಿಷ್ ಆಳರಸರು ಕಾಂಗ್ರೆಸ್ ಮುಖಂಡತ್ವದೊಂದಿಗೆ ರಾಜಿಗೆ ಬರುವಂತಾಯಿತು.

ಸುಭಾಶ್ ಚಂದ್ರ ಬೋಸರ ಜನ್ಮ ಶತಾಬ್ದಿ ಆಚರಿಸುವ ಸಂದರ್ಭದಲ್ಲಿ ಅವರ ಕಣ್ಣೋಟದಲ್ಲಿ ಏನೇ ಮಿತಿಯಿದ್ದರೂ ಅವರ ಸಮರ್ಪಿತ ಕ್ರಾಂತಿಕಾರಿ, ದೇಶಪ್ರೇಮಿ, ಸ್ವಾರ್ಥತ್ಯಾಗಿ ವ್ಯಕ್ತಿತ್ವವನ್ನು ಒತ್ತಿಹೇಳಬೇಕಾಗಿದೆ ಎಂದು ಸುರ್ಜಿತ್ ತಮ್ಮ ಲೇಖನದ ಕೊನೆಯಲ್ಲಿ ಹೇಳಿದ್ದಾರೆ. ✦

ರಾಮ್ ಕೆ ನಾಮ್

ದೂರದರ್ಶನಕ್ಕೆ ಕಪಾಳ ಮೋಕ್ಷ

ನ್ಯಾಯಾಲಯ ಇತ್ತೀಚೆಗೆ ದೂರದರ್ಶನಕ್ಕೆ ಸರಿಯಾಗಿ ಕಪಾಳಮೋಕ್ಷ ಮಾಡಿದೆ. ಅಡ್ವಾಣಿಯವರ ನೇತೃತ್ವದಲ್ಲಿ ಸಂಘ ಪರಿವಾರ ಆರಂಭಿಸಿದ ಮೊದಲ ಹಂತದ ರಥಯಾತ್ರೆ ಜನರನ್ನು ಬಲಿ ತೆಗೆದುಕೊಂಡಿದ್ದು ದೇಶಾದ್ಯಂತ ಕೋಮು ವಿಷ ಹರಡಿದ್ದರ ಬಗ್ಗೆ ನೇರವಾದ, ಹೃದಯ ಸ್ಪರ್ಶಿ ಚಿತ್ರಣ ಇದ್ದ ಸಾಕ್ಷ ಚಿತ್ರವನ್ನು ಪ್ರಸಾರ ಮಾಡಲು ದೂರದರ್ಶನ ಒಪ್ಪಲಿಲ್ಲ. ಇದು ಮುಗಿದುಹೋದ ವಿಷಯ ಎಂದು ಕೈತೊಳೆದುಕೊಳ್ಳಲು ಪ್ರಯತ್ನಿಸಿತು. ಕೋಮುವಾದ ಮುಗಿದುಹೋದ ವಿಷಯವೇ? ಚಿತ್ರದ ನಿರ್ದೇಶಕ ಆನಂದ್ ಪಟವರ್ಧನ್ ಅವರು ಇದರ ವಿರುದ್ಧ ನ್ಯಾಯಾಲಯಕ್ಕೆ ಮೊರೆ ಹೋದರು. ಯಾವುದೇ ಚಿತ್ರ ರಾಷ್ಟ್ರ ಮನ್ನಣೆ ಗಳಿಸಿದ್ದರೆ ಅದನ್ನು ದೂರದರ್ಶನದಲ್ಲಿ ಪ್ರಸಾರ ಮಾಡಬೇಕು ಎನ್ನುತ್ತದೆ ಸರಕಾರದ ನೀತಿ. ಆದರೆ ಈ 'ರಾಮ್ ಕೆ ನಾಮ್'(ಇನ್ ದಿ ನೇಮ್ ಆಫ್ ಗಾಡ್)ಗೆ ತೋರಿಸಿದ ನಿರ್ಲಕ್ಷಕ್ಕೆ ನ್ಯಾಯಾಲಯ ಈಗ ಸ್ಪಷ್ಟ ತೀರ್ಪು ನೀಡಿದೆ. ಕೋಮುವಾದಿಗಳಿಗೆ, ಅದಕ್ಕೆ ಮೌನ ಸಮ್ಮತಿ ನೀಡಿದ್ದ ಕಾಂಗ್ರೆಗೆ ಇದು ಸರಿಯಾದ ಪೆಟ್ಟು.

'ರಾಮ್ ಕೆ ನಾಮ್' ಆನಂದ್ ಪಟವರ್ಧನ್ ತಯಾರಿಸಿದ ಈ ಸಾಕ್ಷಚಿತ್ರಕ್ಕೆ 1992 ನೇ ಸಾಲಿನ ಅತ್ಯುತ್ತಮ ತನಿಖಾ ಸಾಕ್ಷ್ಯಚಿತ್ರ ಎಂದು ರಾಷ್ಟ್ರೀಯ ಪ್ರಶಸ್ತಿ ಸಂದಿದೆ. ಇದಲ್ಲದೇ ಮತ್ತೂ ಹಲವು ಪ್ರತಿಷ್ಠಿತ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳೂ ಬಂದಿವೆ. ಆದರೆ ಇದನ್ನು ಪ್ರಸಾರ ಮಾಡಲು ದೂರದರ್ಶನದ ತಕರಾರು. ಬಾಬರೀ ಮಸೀದಿ ವಿನಾಶ ಕೃತ್ಯವನ್ನು ಈ ಸಾಕ್ಷ್ಯಚಿತ್ರದಲ್ಲಿ ಸೇರಿಸಲಾಗಿದೆ ಎಂಬ ಪುಕಾರು ಅವರದ್ದು.

ವಾಸ್ತವ ಸಂಗತಿ ಏನೆಂದರೆ 'ರಾಮ ಕೆ ನಾಮ್' ಸಾಕ್ಷ್ಯ ಚಿತ್ರ ರೂಪಗೊಂಡದ್ದು ಬಾಬರೀ ಮಸೀದಿ ವಿನಾಶಕ್ಕಿಂತ ಒಂದು ವರ್ಷ ಮುಂಚೆ. ಅಡ್ವಾಣಿಯವರ ರಥಯಾತ್ರೆ ಈ ಸಾಕ್ಷ್ಯ ಚಿತ್ರದಲ್ಲಿ ಇದೆ. ಕಟ್ಟರ್ ಪಂಥೀಯ ಶಕ್ತಿಗಳು ತಲೆಯೆತ್ತುತ್ತಿರುವ ಬಗ್ಗೆ ಆತಂಕ ಇದೆ. ಭಾರತ ಭೂಮಿಯ ಸಾಮಾನ್ಯ ಹಿಂದೂ ಮತ್ತು ಮುಸ್ಲಿಮರ ಮಾನವೀಯತೆಯ ಚಿತ್ರಣವಿದೆ.

ಆಗ ಬಾಬರೀ ಮಸೀದಿ ನಾಶ ಆಗಿರಲಿಲ್ಲ. ಅಯೋಧ್ಯೆಯ ರಾಮಜನ್ಮ ಭೂಮಿ ಮುಖ್ಯ ಅರ್ಚಕರಾಗಿದ್ದ ಪೂಜಾರಿ ಲಾಲ್‌ದಾಸ್ ಇದ್ದರು. ಪಟವರ್ಧನರ ಸಾಕ್ಷ್ಯಚಿತ್ರದಲ್ಲಿ ಲಾಲ್‌ದಾಸ್ ಕೂಡ ಮಾತನಾಡಿದ್ದಾರೆ. ರಾಜಕೀಯ ಮತ್ತು ಹಣಕಾಸಿನ ಲಾಭಕ್ಕೆ ಧರ್ಮವನ್ನು ಬಳಸಿಕೊಳ್ಳಲು ಕಡುವಿರೋಧ ಅವರದು. ಇನ್ನೊಬ್ಬರ ಮೇಲೆ ಆಕ್ರಮಣ ನಡೆಸುವ ಯಾವುದೇ ಭಕ್ತಿಯಲ್ಲಿ ಅವರಿಗೆ ನಂಬಿಕೆ ಇಲ್ಲ.

ಈ ಬುದ್ಧಿ ಮಾತುಗಳು ಜನರ ಕಿವಿಗೆ ಬೀಳಬಾರದೆ? ದೂರದರ್ಶನ 'ರಾಮ್ ಕೆ ನಾಮ್' ಸಾಕ್ಷ್ಯಚಿತ್ರವನ್ನು ಏಕೆ ಪ್ರಸಾರ ಮಾಡಲು ಹಿಂದೇಟು ಹಾಕಬೇಕು? ಸದ್ವಿಚಾರಗಳನ್ನು ಹತ್ತಿಕ್ಕುವ ಉದ್ದೇಶವೇ?

ಅದೇನೇ ಇರಲಿ ಈ 'ರಾಮ್ ಕೆ ನಾಮ್' ಸಾಕ್ಷ್ಯಚಿತ್ರ ನೋಡಲು ದೂರದರ್ಶನ ವೀಕ್ಷಕರಿಗೆ ಅವಕಾಶ. ಇನ್ನು ಎರಡು ತಿಂಗಳ ಒಳಗಾಗಿ 'ರಾಮ್ ಕೆ ನಾಮ್' ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಬೇಕೆಂದು ಮುಂಬೈ ಹೈಕೋರ್ಟ್ ದೂರದರ್ಶನಕ್ಕೆ ಆದೇಶ ನೀಡಿದೆ. ಡಿಡಿ-1 ರಲ್ಲಿಯೇ ಪ್ರಸಾರ ಮಾಡಬೇಕೆಂದು ನ್ಯಾಯಾಲಯ ದೂರದರ್ಶನಕ್ಕೆ ತಾಕೀತು ಮಾಡಿದೆ. ಹಾಗೆ ಪ್ರಸಾರ ಆದಾಗ ಲಾಲ್‌ದಾಸ್ ಆಡಿರುವ ಬುದ್ಧಿ ಮಾತುಗಳನ್ನು ವೀಕ್ಷಕರು ಕೇಳಬಹುದು.

'ರಾಮ್ ಕೆ ನಾಮ್' ಸಾಕ್ಷ್ಯ ಚಿತ್ರಕ್ಕೆ ನೇರವಾಗಿ ಸಂಬಂಧವಿಲ್ಲದ ಒಂದು ಹೆಚ್ಚಿನ ಸಂಗತಿ ಇದೆ. ಧರ್ಮದ ಹೆಸರಿನಲ್ಲಿ ಆಕ್ರಮಣಶೀಲತೆಯನ್ನು ಮೆರೆಯುವುದು ಸರಿಯಲ್ಲ ಎಂದು ಹೇಳಿದ ಲಾಲ್‌ದಾಸ್ ಈಗ ಬದುಕಿಲ್ಲ. ಉತ್ತರ ಪ್ರದೇಶಕ್ಕೆ ಭಾರತೀಯ ಜನತಾ ಪಕ್ಷದ ಸರಕಾರ ಬಂದಿತಷ್ಟೇ. ಮುಖ್ಯ ಅರ್ಚಕ ಲಾಲ್‌ದಾಸ್ ಅವರನ್ನು ಅವರ ಸ್ಥಾನದಿಂದ ಕಿತ್ತೊಗೆಯಲಾಯಿತು. ಅವರ ರಕ್ಷಣೆಗಿದ್ದ ಅಂಗರಕ್ಷಕರನ್ನು ಓಡಿಸಲಾಯಿತು. ಇದಾದ ಕೊಂಚ ದಿನಗಳಲ್ಲೇ ಲಾಲ್‌ದಾಸ್ ಕೊಲೆಯಾದರು.

'ರಾಮ್ ಕೆ ನಾಮ್'!

'ಎಸ್ಸಾರ್' ಕೃಪೆ: ಕನ್ನಡ ಪ್ರಭ

ಹಾಲಿವುಡ್‌ನ ವಿನಾಶಕಾರಿ ಪ್ರಭಾವ: ಚಿತ್ರರಂಗದಲ್ಲೂ ಸಾಮ್ರಾಜ್ಯಶಾಹಿ

ಹಾಲಿವುಡ್ ಚಿತ್ರಗಳ ಮಹಾಪೂರ ಪ್ರತಿಯೊಂದು ದೇಶದ ಸ್ಥಳೀಯ ಚಿತ್ರರಂಗವನ್ನು ಹಾಳುಗೆಡುವುತ್ತಿದೆ. ಇದು ತಿರುವನಂತಪುರದಲ್ಲಿ ಇತ್ತೀಚೆಗೆನಡೆದ28ನೇಅಂತರ್ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಬಂದ ಮೂರನೇಜಗತ್ತಿನಚಲನಚಿತ್ರರಂಗದ ಹಲವುಪ್ರಸಿದ್ಧವ್ಯಕ್ತಿಗಳದೂರು.

ಕೊಲಂಬಿಯಾದ ಚಲನಚಿತ್ರ 'ದಿ ಶಿಪ್ ಆಫ್ ಡ್ರೀಮ್ಸ್'(ಕನಸಿನ ಹಡಗು)ನ ನಿರ್ದೇಶಕ ಝುರೋ ದುರಾನ್ ಮತ್ತು ಅವರ ಪತ್ನಿ ಲ್ಯಾಟಿನ್ ಅಮೆರಿಕನ್ ಚಲನಚಿತ್ರ ತಯಾರಕರು ಅಮೆರಿಕನ್ ಪ್ರಾಬಲ್ಯದಿಂದ ಹೊರಬರಲು, ಅಮೆರಿಕನ್ ಪ್ರಭಾವ ಉಂಟುಮಾಡಿರುವ ಅಪಾರ ಸಾಂಸ್ಕೃತಿಕ ಹಾನಿಯನ್ನು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದರು. ಒಂದೊಮ್ಮೆ ವರ್ಷಕ್ಕೆ ನೂರರಷ್ಟು ಚಿತ್ರಗಳನ್ನು ತಯಾರಿಸುತ್ತಿದ್ದ ಲ್ಯಾಟಿನ್ ಅಮೆರಿಕಾ ಪ್ರದೇಶದಲ್ಲಿ ಈಗ ದೊಡ್ಡ ಸಂಖ್ಯೆಯಲ್ಲಿ ಹಾಲಿವುಡ್ ಚಿತ್ರಗಳನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದಾಗಿ ವರ್ಷಕ್ಕೆ ಕೇವಲ ಆರು ಚಿತ್ರಗಳು ತಯಾರಾಗುತ್ತಿದೆ. ಈ ಕಹಿ ಅನುಭವದಿಂದಾಗಿ ಲ್ಯಾಟಿನ್ ಅಮೆರಿಕಾ ದೇಶಗಳು ಈ ಅಮೆರಿಕನ್ ಧಾಳಿಯನ್ನು ಪ್ರತಿರೋಧಿಸಲು ಒಂದಾಗಬೇಕಾಗಿ ಬಂದಿದೆ.

ಇರಾನಿನಲ್ಲಿ ಸಿನೇಮಾ ಮಂದಿರಗಳಲ್ಲಿ ಅಮೆರಿಕನ್ ಫಿಲ್ಮ್‌ಗಳನ್ನು ತೋರಿಸುವುದಿಲ್ಲ. ಆದರೆ ಎಲ್ಲಾ ಅಮೆರಿಕನ್ ಫಿಲ್ಮ್‌ಗಳು ವಿಡಿಯೋಗಳ ರೂಪದಲ್ಲಿ ಇರಾನಿ ಜನತೆಯನ್ನು ತಲುಪುತ್ತಿವೆ. ಇತ್ತ ಇರಾನಿ ಚಿತ್ರಗಳು ತಯಾರಾದ ನಂತರ ಐದು ಘಟ್ಟಗಳಲ್ಲಿ ಸೆನ್ಸಾರನ್ನು ಹಾದು ಬರಬೇಕಾಗುತ್ತದೆ ಎನ್ನುತ್ತಾರೆ ಅಲ್ಲಿಯ ಚಲನಚಿತ್ರರಂಗದ ಮೊಹಸನ್ ಮಕುಲ್ಮ್‌ಲೋ ಅಲ್ಬಟ್.

ಹಾಲಿವುಡ್ ವಿಶ್ವ ಸಿನಿಮಾವನ್ನು ಮೂಲೆಗೊತ್ತುತ್ತಿದೆ ಎಂದು ಇನ್ನಷ್ಟು ಸ್ಪಷ್ಟವಾಗಿ ಹೇಳುತ್ತಾರೆ ಆಸ್ಟ್ರೀಯಾದ ಚಲನಚಿತ್ರ ನಿರ್ದೇಶಕ ಹಾಗೂ ತಯಾರಕ ಮೈಕೆಲ್ ಕ್ರಿಯೆಂಕಿಲ್. ಯುರೋಪಿನಲ್ಲಿ ಪ್ರದರ್ಶನವಾಗುವ 90% ಚಿತ್ರಗಳು ಹಾಲಿವುಡ್‌ನವು, ಅಮೆರಿಕಾ ತನ್ನ ಸಾಂಸ್ಕೃತಿಕ ಯಜಮಾನಿಕೆ ಮೂಲಕ ಒಂದು ಏಕ ರೂಪದ ಸಂಸ್ಕೃತಿಯನ್ನು ಹೇರುವ ಪ್ರಯತ್ನ ನಡೆಸಿದೆ. ಅದಕ್ಕಾಗಿ ಸ್ಥಳೀಯ ಸಾಂಸ್ಕೃತಿಕ ಸ್ವರೂಪಗಳನ್ನು, ವಿಶೇಷತೆಗಳನ್ನು ಚಚ್ಚಿ ಹಾಕುತ್ತಿದೆ. ಅಮೆರಿಕನ್ ಚಿತ್ರಗಳ ಪ್ರಚಾರ ಮತ್ತು ವಿತರಣೆಯಲ್ಲಿ ತೊಡಗಿಸುವ ಭಾರೀ ಪ್ರಮಾಣದ ಬಂಡವಾಳದಿಂದಾಗಿ ಕೆಟ್ಟ ಅಮೆರಿಕನ್ ಫಿಲ್ಮ್‌ಗಳು ಮಾರುಕಟ್ಟೆ ಗಿಟ್ಟಿಸಲು ಸಾಧ್ಯವಾಗುತ್ತಿದೆ. ಒಳ್ಳೆಯ ಸಿನೆಮಾವನ್ನು ಜನಜನಿತಗೊಳಿಸಲು ಸ್ಥಳೀಯ ಫಿಲ್ಮ್ ಸೊಸೈಟಿಗಳನ್ನು ಸಂಘಟಿಸುವ ಮೂಲಕವೇ ಸಿನೆಮಾ ಜಗತ್ತಿನಲ್ಲಿ ಈ ಸಾಮ್ರಾಜ್ಯಶಾಹಿಯನ್ನು ಪ್ರತಿರೋಧಿಸಲು ಸಾಧ್ಯ ಎನ್ನುತ್ತಾರೆ ಮೈಕೆಲ್.

ಯಾವುದೇ ವಿದೇಶೀ ಭಾಷೆ ತಿಳಿದಿರದ ದಕ್ಷಿಣ ಕೊರಿಯಾದ ಚಿತ್ರ 'ಫೆಸ್ಟಿವಲ್ (ಹಬ್ಬ)ನ ನಿರ್ದೇಶಕ ಇಮ್ ಖೋಮ್ ಥಿಕ್ಕಿನ್ ಕೊರಿಯಾ ವಿಭಜನೆಯಿಂದಾಗಿ ತನ್ನ ದೇಶ ನಿರಾಶ್ರಿತರು ಮತ್ತು ಸಂಬಂಧಪಟ್ಟ ಇತರ ಸಮಸ್ಯೆಗಳಿಗಾಗಿ ಭಾರೀ ಹಣ ಖರ್ಚು ಮಾಡಬೇಕಾಗಿ ಬರುತ್ತಿದೆ ಎನ್ನುತ್ತಾರೆ. ಕೊರಿಯಾದಲ್ಲಿ ಪ್ರದರ್ಶಿಸುವ 80% ಚಿತ್ರಗಳು ಅಮೆರಿಕಾದಿಂದ ಆಮದು ಆದವುಗಳು. ಇದರಿಂದ ದೇಶದಲ್ಲಿ ಸಾಂಸ್ಕೃತಿಕ ಹಾಗೂಸಾಮಾಜಿಕ ಸಮಸ್ಯೆಗಳು ಉಂಟಾಗುತ್ತಿವೆ ಎನ್ನುವ ಅವರು ಈ ಅಮೆರಿಕನ್ ಸಾಂಸ್ಕೃತಿಕ ಯಜಮಾನಿಕೆಗೆ ವಿರೋಧ ಹೆಚ್ಚುತ್ತಿದೆ, ಯುವ ಪುರುಷರು, ಮಹಿಳೆಯರೂ ಈ ಧಾಳಿಯನ್ನು ಎದುರಿಸಲು ಒಟ್ಟಾಗಲಾರಂಭಿಸಿದ್ದಾರೆ ಎನ್ನುತ್ತಾರೆ.

'ಸಂಘಟಿತ ಆಂದೋಲನ ಆಗತ್ಯ'

ಜಾಗತೀಕರಣ ಪ್ರಕ್ರಿಯೆ ಎಂಬುದು ನಿಜವಾಗಿ ಸಾಂಸ್ಕೃತಿಕ ಸರ್ವಾಧಿಕಾರ, ಇದನ್ನು ಎದರಿಸಲು ಮೂರನೇ ಜಗತ್ತಿನ ದೇಶಗಳ ಒಂದು ಸಂಘಟಿತ ಆಂದೋಲನ ಆಗತ್ಯವೆಂದು ದನಿ ಎತ್ತಿ ಹೇಳಿದವರು ಚಿಲಿಯ ಪ್ರಖ್ಯಾತ ನಿರ್ದೇಶಕ ಮಿಗ್ವೆಲ್ ಲಿತಿನ್. ಏಶ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕಾ ಇತ್ಯಾದಿ ಪ್ರದೇಶಗಳ ಜನಗಳ ಮೇಲೆ ಅಮೆರಿಕನ್ನರು ತಮ್ಮ ಅಭಿಪ್ರಾಯಗಳನ್ನು ಹೇರುತ್ತಿದ್ದಾರೆ ಎನ್ನುವ ಇವರು ಇದರ ವಿರುದ್ಧ ಸಂಘಟಿತ ಪ್ರತಿರೋಧ ಅಗತ್ಯ ಎಂದರು. ರಾಜಕೀಯ ಸಿನೆಮಾವೆಂದೇನಿಲ್ಲ, ಇರುವುದು ಸಾಮಾಜಿಕ ಕಲೆ ಮಾತ್ರ ಎಂದು ಅವರ ಅಭಿಪ್ರಾಯ. ಸಾಮಾಜಿಕ ಸಿನೆಮಾ ಎಲ್ಲರಿಗಾಗಿರಬೇಕು ಎನ್ನುತ್ತಾರೆ ಅವರು.

ದಕ್ಷಿಣ ಆಫ್ರಿಕಾ 1350 ಚಿತ್ರಗಳನ್ನು ತಯಾರಿಸಿದೆ. ಆದರೆ ದಶಕಗಳ ಕಾಲದ ವರ್ಣದ್ವೇಷದ ಆಳ್ವಿಕೆಯಿಂದಾಗಿ ಆಫ್ರಿಕನ್ನರು ನಿರ್ದೇಶಿಸಿದ ಚಿತ್ರಗಳ ಸಂಖ್ಯೆ ಮಾತ್ರ ಬಹಳ ಕಮ್ಮಿ ಎನ್ನುತ್ತಾರೆ ಲಿಯೊನೆಲ್ ನಕಾನೆ. ಇವರು ಲಂಡನ್‌ನಲ್ಲಿ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್(ಎಎನ್‌ಸಿ)ನ ಮೊದಲ ಕಚೇರಿ ತೆರೆಯಲು ಕಾರಣರಾದವರು. ಈ ಫಿಲ್ಮೋತ್ಸವದಲ್ಲಿ ಪ್ರದರ್ಶಿಸಿದ ಆಫ್ರಿಕಾದ ಚಿತ್ರಗಳು ವರ್ಣದ್ವೇಶದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಹಾಗೂ ಆ ಹೋರಾಟಕ್ಕೆ ಎಲ್ಲಾ ದೇಶಗಳಲ್ಲಿ ಸಹಾನುಭೂತಿ ಗಳಿಸಲು ಈ ಮಾಧ್ಯಮವನ್ನು ಕೂಡಾ ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು ಎಂಬುದನ್ನು ತೋರಿಸಿದವು.

(ಐಎನ್‌ಎನ್)

ಅಣಕ

'ಚಿಕ್ಕೆ ಚಿಕ್ಕೆ ಮುದ್ದಿನ ಸೊಕ್ಕೆ.....

'ಚಿಕ್ಕೆ ಚಿಕ್ಕೆ ಮುದ್ದಿನ ಸೊಕ್ಕೆ! ಎಲ್ಲಿಗೆ ಹೋಗಿದ್ದೆ? ಕರೆದರೂ ಇಲ್ಲ, ಹಾಲು ಬೆಲ್ಲ ಕಾಯಿಸಿ ಇಟ್ಟಿದ್ದೆ'

'ಕೇಳೋ ಕಳ್ಳ ಮುದ್ದಿನ ಮಲ್ಲ ಇಂಗ್ಲೆಂಡಿನರಮನೆಗೆ ... ರಾಜನ ಸಂಗಡ ರಾಣಿಯೂ ಇದ್ದಳು ಅಂತಃಪುರದೊಳಗೆ'

'ಚಿಕ್ಕ ! ಏನು ಮೈಸೂರರಮನೆಗೆ ಹೋಗೋದು ಬಿಟ್ಟು ಇಂಗ್ಲೆಂಡಿಗೆ ಹೋಗ್ಬಿಟ್ಟಿದ್ದಿಯಲ್ಲಾ?'

'ಮುದ್ದಿನ ಪೆದ್ದ ಮಲ್ಲ! ನಾನು ಹೋಗಿದ್ದು ರಾಜ-ರಾಣಿ ನೋಡ್ಲಿಕ್ಕೆ. ಮೈಸೂರರ ಮನೆಯಲ್ಲಿದ್ದಾರಾ ರಾಜ-ರಾಣಿ?'

'ಹೋಗ್ಲಿ ರಾಜ-ರಾಣಿಯನ್ನು ಇಂಗ್ಲೆಂಡಿನಲ್ಲಿ ನೋಡಿದ್ಯಾ?'

'ರಾಜಂಗೂ ರಾಣಿಗೂ ಮುರಿದ್ ಹೋದ್ರೆ ಮನಸು, ಅಳತಾವ ಭೂತಾಯಿ ಕನಸು'

'ಏನಾಯ್ತು ಚಿಕ್ಕ? ಇಂಗ್ಲೆಂಡಿನ ರಾಜ-ರಾಣಿ ಬಗ್ಗೆ ಕೇಳಿದ್ರೆ ದುಃಖದ ಹಾಡು ಹೇಳ್ತಾ ಇದ್ದೀಯಲ್ಲಾ?'

'ಇಂಗ್ಲೆಂಡಿನಲ್ಲಾದ್ರೂ ರಾಜ-ರಾಣಿ ಇದ್ರು. ಅದೂ ನಿಂತು ಹೋಗುತ್ತೆ ಅಂತ ಕಾಣತ್ತೆ'

'ರಾಜನ ಸಂಗಡ ರಾಣಿಯೂ ಇದ್ದಳು, ಅಂತಃಪುರದೊಳಗೆ... ಅಂತ ಹಾಡಿಬಿಟ್ಟೆ ಮತ್ತೆ? ಈಗ ನಿಟ್ಟುಸಿರು ಬಿಡ್ತಾ ಇದ್ದೀಯಾ?'

'ಹಂಗಂತ ನಮ್ಮ ಅಜ್ಜಿ ಹಾಡ್ತಾ ಇದ್ಲು. ಅವ್ಳು ನೋಡಿದ್ಲಂತೆ'

'ನೀನು ಏನು ನೋಡಿದೆ? ಅದು ಹೇಳಮ್ಮಾ'

'ಛೀ! ಛೀ! ನಾಚಿಕೆ ಆಗ್ತದೆ!'

'ಅರೆ! ಮಂಚದ ಕೆಳಗೆ ಇಲಿ ನೋಡಿ ನಾಚಿಕೆ ಆಯ್ತಾ?'

'ಇಲ್ಲ! ಮಂಚದ ಮೇಲಿದ್ದು ನೋಡಿ ನಾಚಿಕೆ ಆಯ್ತು?'

'ಏನಪ್ಪ?! ಅಂಥದ್ದು ನೋಡಿದ್ದು ಹೇಳಲಿಕ್ಕೆ ನಾಚಿಕೆ ಆಗುವಂಥದ್ದು'

'ಯುವರಾಜನ ಜತೆ ಯಾರೋ ಇದ್ಲು, ಯುವರಾಣಿಯ ಜತೆ ಬೇರೆ ಯಾರೋ ಇದ್ದ'

'ಅಷ್ಟೇ ತಾನೆ! ಎಲ್ಲಾ ಅರಮನೆಯ ಒಳಗೆ ಹೋದ್ರೂ ಅದೇ ಕಥೆ. ಅದರಲ್ಲೇನು ವಿಶೇಷ?'

'ಮುದ್ದಿನ ಮಲ್ಲ! ಏನೂ ವಿಶೇಷ ಇಲ್ವಾ? ನಮ್ಮಮ್ಮ ಇಂಗ್ಲೆಂಡಿನ ಯುವರಾಜನ ಮದ್ವೆಗೆ ಹೋಗಿದ್ಲಂತೆ. ಜೋಡಿ ಅಂದ್ರೆ ಹೀಗಿರಬೇಕು. ಮದ್ವೆ ಅಂದ್ರೆ ಹೀಗಿರ್ಬೇಕು ಅಂತಿದ್ಲು. ನಾನು ಹೋದಾಗ ನೋಡಿದ್ರೆ ಈ ಕಥೆ. ಏನೋ ಕಾಲ ಕೆಟ್ಟೋಯ್ತು'

'ಇನ್ನೇನಾಗುತ್ತೆ! ಇಂಗ್ಲೆಂಡಿನ ಜನಗೋಳ ಮುಂದೆ ಟಿವಿಯಲ್ಲಿ ನಾನು ಹಾದರ ಮಾಡ್ದೆ. ನೀನೂ ಹಾದರ ಮಾಡ್ದೆ. ಸರಿಹೋಯ್ತು.' ಅಂತ ಪಬ್ಲಿಕ್ಕಾಗಿ ಹೇಳಿದ ಮೇಲೆ ಇನ್ನೇನು ಉಳಿಯಿತು. ಯುವರಾಜ ಯುವರಾಣಿಗೆ ಸೋಡಚೀಟಿ ಕೊಟ್ಟುಬಿಟ್ಟಿದ್ದಾನೆ'

'ಪಾಪ! ಯುವರಾಜಂದೇನೂ ತಪ್ಪಿಲ್ಲ ಬಿಡು. ಈ ಯುವರಾಣಿಗೆ ರಾಜ ಕುಟುಂಬದ ಗುಟ್ಟು ಪಬ್ಲಿಕ್ಕಾಗಿ ಹೋಗ್ಬಾರ್ದು ಅಂತ ಗೊತ್ತಾಗ್ಬೇಡ್ವಾ?'

'ಏ ಮಲ್ಲ! ಯುವರಾಜನಿಗೆ ಸಪೋರ್ಟು ಮಾಡಬೇಡ. ಅವನ ಹಾದರ ಮದ್ವೆ ಆಗೋ ಮುಂಚಿಂದಲೂ ನಡೀತಾ ಇತ್ತಂತೆ. ಯುವರಾಣಿಗೆ ಬೇಸರ ಆಗಿ ಅವ್ಳು ಶುರು ಮಾಡಿದ್ಲಂತೆ. ಸೋಡಾ ಚೀಟಿ ಕೊಡೋದ್ರಲ್ಲೂ, ಪರಿಹಾರ ಎಷ್ಟು ಅಂತ ಆ ಬಗ್ಗೆ ಭಾರಿ ರಾದ್ಧಾಂತ ಮಾಡಿದ್ಲಂತೆ. ಕೊನೆಗೂ ಯುವರಾಣಿಪಟ್ಟಕಿತ್ಕೊಂಡು, ಒಂದುವರೆ ಕೋಟಿ ಪೌಂಡು ಪರಿಹಾರ ಕೊಟ್ನಂತೆ?'

'ಯುವರಾಜ-ಯುವರಾಣಿ ಕಥೆ ಬಿಡು. ಜನ ಏನಂತಾರೆ ಹೇಳು? ರಾಜ-ರಾಣಿ ಸಿಸ್ಟಮು ಇನ್ನೂ ಬೇಕು ಅಂತಾರ?'

'ನಾಳೆ ರಾಜ-ರಾಣಿ ಆಗೋರು-ನಮ್ಮನ್ನು ಆಳೋರು ಹಿಂಗ್ ಮಾಡೋದಾ ಪಬ್ಲಿಕ್ಕಾಗಿ ಅಂತ ಕೆಲ ಜನ ಗೋಳಾಡ್ತ ಇದ್ದಾರೆ. ಕೆಲ ಜನ ಇಂತಹ ರಾಜ-ರಾಣಿ ನಮ್ಗೆ ಬೇಡ್ವೆ ಬೇಡ. ಸುಮ್ನೆ ಹಾದರ ಮಾಡೋಕೆ ನಾವ್ಯಾಕೆ ಅವರ್ನ ಸಾಕ್ಬೇಕು. ದುಡ್ಡು ದಂಡ ಅಂತ ಇದ್ದಾರೆ. ನೂರರಲ್ಲಿ 48 ಜನ ರಾಜ-ರಾಣಿ ಕಿತ್ತು ಹಾಕಿ ಬಿಡೋಣ ಅಂತ ಇದ್ದಾರಂತೆ. 52 ಜನ ಈ ಯುವರಾಜ-ಯುವರಾಣಿ ಸರಿ ಇಲ್ಲ ಆದ್ರೆ ನಮ್ಗೆ ರಾಜ-ರಾಣಿ ಬೇಕು. ಈಗಿನ ರಾಣಿ ನಂತರ ಯುವರಾಜನ ಮಗನನ್ನು ರಾಜ ಮಾಡೋಣ ಅಂತಿದ್ದಾರೆ. ಈ ಎರಡೂ ಥರ ಜನ ಯುವರಾಜ-ಯುವರಾಣಿ ಹಾದರ ಪೇಪರ್‌ನಲ್ಲಿ ರಸವತ್ತಾಗಿ ಬರೋದನ್ನ ಓದಿ ಬಾಯಿ ಮಾತ್ರ ಚಪ್ಪರಿಸುತ್ತಾ ಇದ್ದಾರೆ. ರಾಣಿಗಂತೂ ತಲೆ ಕೆಟ್ಟುಹೋಗಿದ್ಯಂತೆ.'

'ಒಳ್ಳೆದಾಯ್ತು ಬಿಡು! ರಾಜ-ರಾಣಿ ಎಲ್ಲಾ ಕಾಲದಲ್ಲೂ ಎಲ್ಲಾ ದೇಶಗಳಲ್ಲೂ ಇದೇ ಕಥೆ. ಇಂಗ್ಲೆಂಡಿನ ಯುವರಾಜ-ಯುವರಾಣಿಗೆ ಇವನ್ನೆಲ್ಲಾ ಮಾಡಿದ್ರೂ, ರಾಜಗಾಂಭೀರ್ಯದಿಂದ ಮಾಡ್ಬೇಕು. ಪಬ್ಲಿಕ್ಕಾಗಿ ಹೇಳ್ಬಾರ್ದು ಅಂತ ಗೊತ್ತಿಲ್ಲ ಪಾಪ! ಅಷ್ಟೆ. ಇನ್ನಾದ್ರೂ ಇಂಗ್ಲೆಂಡಿನ ಜನಗಳಿಗೆ ಬುದ್ಧಿ ಬಂದು ರಾಜ-ರಾಣಿ ಕಿತ್ತು ಹಾಕ್ತಾರಾ ನೋಡ್ಬೇಕು'


'ಮಲ್ಲ! ನೀನು ಹೇಳಿದ್ದೇ ಸರಿ. ನನಗೂ ಹಾಗನಿಸ್ತದೆ. ರಾಜ-ರಾಣಿ ಎಲ್ಲಾ ಹಾಡು-ಕಥೆಗಳಲ್ಲೇ ಸರಿ. ಆಗಿನ ಕಾಲಕ್ಕೇಸರಿ ಅಲ್ವಾ?

ಇದು ಸುದ್ದಿ, ಇದು ಸುದ್ದಿ

ಹೊಸ ವರ್ಷ ಬಂತೆಂದರೆ ಪತ್ರಕರ್ತರಿಗೆ ದುಪ್ಪಟ್ಟು ಸಂತಸ. ಏನಿಲ್ಲೆಂದರೂ 15 ಸ್ಪೆಷಲ್ ಕ್ಯಾರಿಯರ್‌ಗಳು, 4-5 ಬ್ಯಾಗುಗಳು, 20 ಕ್ಯಾಲೆಂಡರುಗಳು, ಕ್ಯಾಲ್‌ಕುಲೇಟರ್‌ಗಳು, ಕೆ.ಜಿ.ಗಟ್ಟಲೆ ಸ್ವೀಟ್ಸ್, ಜತೆಗೆ ರಾತ್ರಿ ಗುಂಡಿನ ಹಬ್ಬ.

ಕ್ರಿಕೆಟ್ ಆಟದಲ್ಲಿ ದೊಡ್ಡ ಕಂಪನಿಗಳ ಜಾಹೀರಾತುಗಳ ಪ್ರಾಬಲ್ಯದ ಬಗ್ಗೆ ಎಕನಾಮಿಕ್ ಟೈಮ್ಸ್‌ನಲ್ಲಿ ಸಲಾಂರವರ ವ್ಯಂಗ್ಯ

ಒಬ್ಬ ನಿಜವಾದ ಆಟಗಾರನಂತೆ ನನಗೆ ಗೆಲುವು ಅಥವಾ ಸೋಲಿನಲ್ಲಿ ನಂಬಿಕೆ ಇಲ್ಲ..... ಆದರೆ ನನ್ನ ಕಾಳಜಿಯೆಂದರೆ ಪೂರ್ಣ ಮೂರು ದಿನ ನನ್ನ ಕಂಪನಿಯ ಚಿನ್ಹೆ ಕ್ರಿಕೆಟ್ ಬ್ಯಾಟ್‌ನಲ್ಲಿರಬೇಕು....!



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು